# ಕನ್ನಡ ಭಾಷೆ ಮತ್ತು ಸಮಕಾಲೀನ ಸಮಸ್ಯೆಗಳು

ಡಾ. ಈ. ಪ್ರಶಾಂತ ನಾಯಕ

ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾನಿಲಯ

ಜ್ಞಾನಸಹ್ಯಾದ್ರಿ, ಶಂಕರಘಟ್ಟ

# ಕನ್ನಡ ಭಾಷೆ ಮತ್ತು ಸಮಕಾಲೀನ ಸಮಸ್ಯೆಗಳು

'ಕರ್ನಾಟಕ-ಕನ್ನಡ-ಕನ್ನಡಿಗರು' ಹೀಗೆಂದಕೂಡಲೇ ಅದೊಂದು ನಾಡು, ನುಡಿ ಮತ್ತು ಅಲ್ಲಿನ ಜನರು ಎಂಬ ಸಾಮಾನ್ಯ ಅರ್ಥ ಅರಿವಾಗುವುದುಂಟು. ಪ್ರಜ್ಞೆಯ ಭಾಗವಾಗಿ ಭಾವಿಸಿದರೆ ಇದನ್ನು 'ಸಂಸ್ಕೃತಿ' ಎಂದು ಕರೆಯಬಹುದು. ಒಂದು ನಾಡು ಅಥವಾ ಸಮುದಾಯ ಎನ್ನುವ ಅರ್ಥಕ್ಕೆ ಹಲವಾರು ಆಯಾಮಗಳಿರುತ್ತವೆ. ಮುಖ್ಯವಾಗಿ ಅದರ ಭೌಗೋಳಿಕ ಪರಿಸರ, ಐತಿಹಾಸಿಕತೆ, ವರ್ತಮಾನ, ಸಾಮುದಾಯಿಕ ಆಚರಣೆ, ಸಾಮಾಜಿಕ ನಂಬಿಕೆ, ಕಲೆ, ಸಾಹಿತ್ಯ ಇವೇ ಮೊದಲಾದವುಗಳು ಮುಖ್ಯವಾಗಿ ಪರಿಗಣಿಸಲ್ಪಡುತ್ತವೆ. ಹಾಗಾಗಿಯೂ ಭಾವುಕವಾಗಿ ನನ್ನನಾಡು, ನನ್ನಜನ, ನನ್ನಭಾಷೆ ಎನ್ನುವ ಬಗೆಗೊಂದು ಆತ್ಮೀಯ ಆಪ್ತತೆಯ ಸಂಬಂಧವೊಂದು ಸಾಧ್ಯವಾಗಿ ಭಾವುಕವಾದ ಪ್ರತಿಕ್ರಿಯೆ ಸಹಜವೆನ್ನುವುದಾಗುತ್ತದೆ. 'ಜನನಿ ಜನ್ಮಭೂಮಿ ಸ್ವರ್ಗಕ್ಕಿಂತ ಹಿರಿದು' ಎನ್ನುವ ಮಾತಿಗಾದರೂ ಇಂತಲ್ಲಿಯೇ ವಿಶೇಷತೆಯೊಂದು ಸಾಧ್ಯವಾಗುತ್ತದೆ. 'ಮುಕ್ಕೋಟಿ ಕನ್ನಡಿಗರು' ಎನ್ನುವ ಮಾತು ಕಳೆದ ದಶಕದ ಹಿಂದೆ ನಮ್ಮ ಸಾಮಾನ್ಯ ಸಾಮುದಾಯಿಕ ಹೆಮ್ಮೆಯಾಗಿತ್ತು ಇವತ್ತು ಅದು ಎರಡುಪಟ್ಟು ಹೆಚ್ಚಾಗಿ ಜನಸಂಖ್ಯೆ ಆರುಕೋಟಿಯ ಅಂಕಿಗೆ ಬಂದು ನಿಂತಿದೆ. ಅಂದರೆ ಬದಲಾವಣೆಯ ನೀರು ಸಾಕಷ್ಟು ಈ ನೆಲದಲ್ಲಿ ಹರಿದುಹೋಗಿದೆ. 'ಪರಿವರ್ತನೆ ಜಗದ ನಿಯಮ' ಎನ್ನುವ ಗೀತೆಯ ಮಾತಿಗೆ ನಿರಂತರತೆಯ ಅರ್ಥದಲ್ಲಿ ಉದಾಹರಣೆಗಳು ಸಾಕಷ್ಟಿವೆ.

'ಕರ್ನಾಟಕದಲ್ಲಿ ಕನ್ನಡವೇ ಕಡ್ಡಾಯ' ಎನ್ನುವುದೊಂದು ಮಾತು ಚಾಲ್ತಿಯಲ್ಲಿದೆ ಎಂದರೆ ಅದು ಒಂದು ನಿಯಮವಾಗಿ, ಕಾನೂನಾಗಿ ರೂಪುಗೊಳ್ಳಬೇಕೆಂದರೂ ಸಹಜವಾಗಿ ಯಾರೂ ಅದರ ವಿರುದ್ಧ ಧ್ವನಿಎತ್ತಬೇಕಿಲ್ಲ, ನಿರಾಕರಿಸಬೇಕಿಲ್ಲ, ಅದಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ತಕ್ಷಣಕ್ಕೆ ವಾಗ್ವಾದಗಳನ್ನು ಆರಂಭಿಸಬೇಕೆಂದಿಲ್ಲ. ಸರ್ವಸ್ವತಂತ್ರವಾದ, ವಿಶ್ವಮಾನ್ಯತೆ ಪಡೆದ ಭಾರತದೇಶದೊಳಗೆ ಕರ್ನಾಟಕಕ್ಕೆ ರಾಜ್ಯವೆಂಬ ಸ್ವತಂತ್ರ ಅಸ್ತಿತ್ವವಿ ರುವುದು ಸ್ಪಷ್ಟ ಮತ್ತದು ಸಂವಿಧಾನಾತ್ಮಕ. ಹಾಗಾದಕೂಡಲೇ ಆ ರಾಜ್ಯದ ಒಂದು ಭಾಷೆಯನ್ನು ಗುರುತಿಸುವುದಾದರೂ ಅಷ್ಟೇ ಅನಿವಾರ್ಯ. ಕರ್ನಾಟಕದ ರಾಜ್ಯ ಭಾಷೆ ಕನ್ನಡ ಇದನ್ನು ಭೌಗೋಳಿಕ, ಪ್ರಾದೇಶಿಕ, ರಾಜಕೀಯ ಇತ್ಯಾದಿ ನೆಲೆಗಳಿಂದಷ್ಟೇ ನೋಡಬೇಕಿಲ್ಲ, ನೋಡುವಂತಿಲ್ಲ.

'ಮಾತೃಭಾಷೆ' ಎನ್ನುವ ಮಾತೊಂದನ್ನು ಎಲ್ಲರೂ ಸರಳವಾಗಿ ಮತ್ತು ಸಹಜವಾಗಿ ಬಳಸುತ್ತೇವೆ ಇದರ ಅರ್ಥ 'ತಾಯಿಭಾಷೆ' ಎಂದಾಗುತ್ತದೆ, ಇದು ಕೌಟುಂಬಿಕ ಎಂಬ ಅರ್ಥವನ್ನು ಪ್ರತಿನಿಧಿಸುತ್ತದೆ. 'ಮಾತೃಭೂಮಿ' ಎನ್ನುವ ಮತ್ತೊಂದು ಮಾತು ನನ್ನ ಜನ್ಮಭೂಮಿ ಎಂಬ ಅರ್ಥಕ್ಕೆ ಸಂವಾದಿಯಾಗುತ್ತದೆ ಅಂದರೆ ತಾನು ಹುಟ್ಟಿದ, ಬೆಳೆದ ಮತ್ತು ಮುಖ್ಯವಾಗಿ ನಿಜದ ಅರ್ಥದಲ್ಲಿ ಅಸ್ತಿತ್ವವನ್ನು ಕಂಡುಕೊಂಡ ನೆಲ ಎನ್ನುವ ಅಭಿಮಾನವನ್ನು ಪ್ರತಿನಿಧಿಸುತ್ತದೆ. ಅಂತಹ ಭೂಮಿಗೆ, ನಾಡಿಗೆ ಋಣವಾಗುವುದು ಸಾಮಾನ್ಯಮನುಷ್ಯತ್ವ ಎನ್ನುವುದಾದರೆ ಅದೇ ನೆಲದಲ್ಲಿ ಸಾಮುದಾಯಿಕ, ಸಾರ್ವಜನಿಕವಾದ ಬದುಕು ಕೇಂದ್ರೀಕೃತಗೊಂಡ ಭಾಷೆಯೂ ಒಂದಿರುತ್ತದೆ ಅದು ಮಾತೃಭಾಷೆ. ಇದು ಆ ನಾಡಿನ ಅಧಿಕೃತ ಭಾಷೆ. ಮೇಲೆ ನೋಡಿದಂತೆ ಮನೆಯಲ್ಲಿನ ಕೌಟುಂಬಿಕವೆನ್ನುವ ಪರಿಸರದ ಭಾಷೆ ತಾಯಿಭಾಷೆಯ ಅರ್ಥವಾಗುವುದಾದರೂ ಅದು ಸಾಮಾನ್ಯ ರೂಪ ಆದರೆ ನಾಡಿನಲ್ಲಿ ಬದುಕು ಕಟ್ಟಿಕೊಂಡು ಋಣವಾಗಿರುವಲ್ಲಿ ಅಲ್ಲಿಯದ್ದೇ ಭಾಷೆಯನ್ನು ಗೌರವಿಸುವ, ಪ್ರೀತಿಸುವ, ಅಭಿವೃದ್ಧಿಗಾಗಿ ದುಡಿಯುವ ಅರ್ಥದಲ್ಲಿ ನಾಡಿನ ಭಾಷೆಗೆ ವಿಶೇಷತೆಯ ಅರ್ಥವಿಸ್ತಾರವಿದೆ.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಸಂಯುಕ್ತ ರಾಜ್ಯಗಳ ಆಳ್ವಿಕೆಯ ಹಿರಿಮೆಯಲ್ಲಿದೆ. ಸುಮಾರು ಹದಿನೈದು ರಾಷ್ಟ್ರ ಭಾಷೆಗಳನ್ನು ಗುರುತಿಸಲಾಗಿದೆ. ಅಂದರೆ ಸಂಸ್ಕೃತಿಯ ವೈವಿಧ್ಯತೆಯಂತೆಯೇ ಭಾಷಾ ವೈವಿಧ್ಯತೆ ಎನ್ನುವುದು ಸಹ ಭಾರತದ ಅನನ್ಯತೆಗಳಲ್ಲಿ ಒಂದು ಮಹತ್ವದ ಲಕ್ಷಣ.

ಮಾನವನ ವಿಶಿಷ್ಟತೆ, ನಾಗರೀಕತೆ, ಜ್ಞಾನದ ವಿಸ್ತಾರವಿದ್ದದ್ದೇ ಅವನ ವಿಕಾಸದ ಅನಂತ ಸಾಧ್ಯತೆಗಳಲ್ಲಿ. ಈ ವಿಕಾಸ ಎನ್ನುವುದು ಕೇವಲ ದೈಹಿಕವಾದುದಲ್ಲ ಅದು ಬೌದ್ಧಿಕವೂ ಮಾನಸಿಕವೂ ಆದುದು. ಅಂದ'ರೆ ಬುದ್ಧಿಭಾವಗಳ ವಿಕಾಸ ಏನೆಲ್ಲಾ ಸಾಧ್ಯತೆಗಳನ್ನು ಸಾಧಿಸಿತ್ತು. ಅದರಲ್ಲಿ ಸಂವಹನದ ಕಾರಣಕ್ಕೆಂದೇ ಪ್ರಯತ್ನಿಸಲಾದ ಸನ್ನೆಗಳು ಕ್ರಮೇಣ ಶಬ್ದಗಳ ರೂಪವಾಗಿ ಮುಂದೆ ಭಾಷೆಯಾಗಿ ಮನುಷ್ಯನ ಸಾಂಸ್ಕೃತಿಕ ನಾಗರೀಕ ಆಯಾಮಗಳಲ್ಲಿ ಮಹತ್ವ ಸಾಧಿಸಿದ್ದು ಈಗ ಚರಿತ್ರೆ. ಇಂತಹ ಭಾಷೆ'ಯೊಂದಿಗೆ ನಾವು ಎಷ್ಟೆಲ್ಲಾ ಅಪಾರವಾದುದನ್ನು ಸಾಧಿಸಿ ಬೆಳೆಸಿದ್ದೇವೆ! ಒಂದರೆ ಕ್ಷಣ ಈ ಭಾಷೆ ಇಲ್ಲದಿದ್ದರೆ ಏನಾಗುತ್ತಿತ್ತು? ನಾವು ಏನಾಗುತ್ತಿದ್ದೆವು? ಎಂದು ಯೋಚಿಸಿದರೆ ಆತಂಕವೆ, ಅಂಧತೆಯೆ, ಶೂನ್ಯತೆಯೆ ಎದುರಾಗಬಹುದು.

ವಿಸ್ತಾರವಾದ ಈ ಜಗತ್ತು ಕಾಲ, ಪ್ರದೇಶ, ಪರಿಸರಗಳಿಂದ ತುಂಬಾ ವಿಭಿನ್ನವಾಗಿದೆ. ಪ್ರಕೃತಿಯ ಹಲವು ಅದ್ಭುತತೆಗಳಿಗೆ ಸಾಕ್ಷಿಯಾಗಿದೆ. ಅದರೊಂದಿಗೆ ಒಂದಾಗಿ ಅದರ ಭಾಗವೇ ಆಗಿ ಬದುಕಿದ ಜನರಾದರೂ ಅಷ್ಟೇ ವಿಭಿನ್ನವಾಗಿ ಬದುಕನ್ನು ಕಟ್ಟಿಕೊಂಡಿದ್ದಾರೆ ಇಂತಲ್ಲಿ ಭಾಷೆಯಾದರೂ ವಿಭಿನ್ನವೂ ಅರ್ಥಪೂರ್ಣವೂ ಶಕ್ತಿಯುತವೂ ಆಗಿರಲೇಬೇಕಿತ್ತು. ಇಂತಹ ಗುಣಗಳಿದ್ದ ಭಾಷೆಗಳು ಸಹಜವಾಗಿಯೇ ಜನರೊಂದಿಗೆ ಉಳಿದಿವೆ, ಬೆಳೆದಿವೆ. ಇಂದಿಗೆ ಸಾಕಷ್ಟು ಎನಿಸುವಷ್ಟು ಶ್ರೀಮಂತವೂ ಆಗಿವೆ, ದುರಂತವೆಂದರೆ ಕೆಲವು ಮತ್ತಷ್ಟು ಶಿಥಿಲವೂ ಆಗಿವೆ. ಕೆಲವ'ಂತೂ ನಾಶವಾಗಿಹೋಗಿವೆ. ಭಾರತದಲ್ಲಿಯೇ ಒಂದು ಕಾಲಕ್ಕೆ ಅದ್ಭುತ ಎನಿಸುವಂತೆ ಸಾಹಿತ್ಯ ಸೃಷ್ಟಿಸಿದ ಪ್ರಾಕೃತ, ಪಾಲಿ, ಸಂಸ್ಕೃತದಂತಹ ಭಾಷೆಗಳು ಅವಸಾನದ ಅಂಚನ್ನು ತಲುಪಿದ್ದು ನಮ್ಮೆದುರಿಗಿರುವ ಇತಿಹಾಸ. ಜೀವಂತ ಭಾಷೆಗಳು ಮತ್ತು ಮಾತೃಭಾಷೆಗಳು ಎನ್ನುವ ಅಧ್ಯಯನ ಕ್ರಮವಾದರೂ ಈ ಬಗೆಯ ಹಿನ್ನಲೆಯಿಂದಲೇ ಸಾಧ್ಯವಾಗುವಂತಹುದು.

ಒಂದು ಭಾಷೆಯನ್ನು ಕುರಿತು ಆತಂಕದಿಂದ' ಯೋಚಿಸುವಂತಹ ಸ್ಥಿತಿಯೊಂದು ನಿರ್ಮಾಣವಾಗಿದೆ ಎಂದ'ರದು ವಿಪರ್ಯಾಸದ ಉತ್ಕರ್ಷವೆಂದೆ ಹೇಳಬಹುದು. ಇಂದು ಈ ಬಗೆಯ ಆತಂಕಗಳು ದೇಸೀ ಭಾಷೆಯ ಸಂದರ್ಭದಲ್ಲಿ ಎದುರಾಗಿವೆ ಇಂತಲ್ಲಿ ಮಾತೃಭಾಷಾಚಿಂತನೆ'ಯು ಕದಲತೊಡಗುತ್ತದೆ.

ಮನುಷ್ಯ ಪ್ರಕೃತಿಯೊಳಗೆ ಜೀವಂತವಾಗಿದ್ದು, ಎಲ್ಲವನ್ನು ಪಡೆದುಕೊಂಡದ್ದೇ ಪ್ರಕೃತಿಯೊಳಗಿಂದ ಹಾಗಾಗಿಯೂ ಅನುಕರಣಶೀಲತೆ ಎನ್ನುವುದೇ ಅವನ ಮುಖ್ಯ ಲಕ್ಷಣ ಮತ್ತು ಶಕ್ತಿ. ಭಾಷೆಯೇ ಇದಕ್ಕೆ ಅತ್ಯುತ್ತಮವಾದ ಉದಾಹರಣೆ. ಮನೆಯಲ್ಲಿ ಮಗುವೊಂದು ಬೆಳೆದಂತೆಲ್ಲಾ ಅಲ್ಲಿನ ಪರಿಸರ, ಸಂಸ್ಕಾರ, ಸಂಸ್ಕೃತಿ, ಪ್ರಜ್ಞೆ ಇತ್ಯಾದಿಗಳನ್ನು ರೂಪಿಸಿಕೊಳ್ಳುವ ಬಗೆಯಾದರೂ ಹೀಗೆಯೇ. ಈ ಕುಟುಂಬದ ಭಾಷೆಯೇ ಸಾಮಾನ್ಯ ಅರ್ಥದಲ್ಲಿ ಮಾತೃಭಾಷೆ.

ನಮ್ಮ ದೇಶದ ಸ್ವಾತಂತ್ರ್ಯಾನಂತರದಲ್ಲಿ ಪ್ರಜಾಪ್ರಭುತ್ವ ಆಡಳಿತದ ಆಯ್ಕೆಯಾದಾಗ ಆದ್ಯತೆಯ ಸಂಗತಿಯಾದದ್ದು, ಭಾಷಾವಾರು ಪ್ರಾಂತಗಳ ವಿಂಗಡಣೆ. ಹೆಸರೇ ಸೂಚಿಸುವಂತೆ ಭಾಷೆಯನ್ನಾಧರಿಸಿಯೇ ರಾಜ್ಯಗಳ ವಿಂಗಡಣೆಗೆ ಮಹತ್ವನೀಡಿದ್ದು ವೈಜ್ಞಾನಿಕವಾದ ಕ್ರಮವೇ ಆಗಿತ್ತು. ಆರಂಭಕ್ಕೆ ಗಮನಿಸಿದ ಹಾಗೆ ಭಾಷೆ ಎನ್ನುವುದು ಅಸ್ತಿತ್ವದ ರೂಪ ಎನ್ನುವ ಕಾರಣದಿಂದಲೂ ಇದಕ್ಕೆ ಮಹತ್ವವಿದೆ. ಭಾಷಾಧಾರಿತ ರಾಜ್ಯ ವಿಂಗಡಣೆಯ ಸಂದರ್ಭಕ್ಕೆ ಇಡೀ ರಾಜ್ಯದ ಪ್ರತೀಕುಟುಂಬವೂ ಆಯಾ ರಾಜ್ಯದ ಭಾಷೆಯನ್ನು ಮಾತ್ರ ಆಡುತ್ತಿವೆ, ಆಡಲೇಬೇಕು ಎಂಬ ಅರ್ಥವೂ ಇದಲ್ಲ. ಇತರ ಭಾಷೆಯ, ವಲಯದ ನಾಡಿನ ಜನರು ಬೇರೆ ರಾಜ್ಯಗಳಲ್ಲಿಯೂ ಬದುಕು ಕಟ್ಟಿಕೊಂಡಿರುವುದುಂಟು ಅವರಲ್ಲಿ ಬಹುಪಾಲು ಜನರಿಗೆ ಆ ನಾಡಿನ ಭಾಷೆಯನ್ನು ಕಲಿಯುವಂತದ್ದು ಸಾರ್ವಜನಿಕ ಜೀವನದ ಕಾರಣಕ್ಕೆ ಅನಿವಾರ್ಯವಾಗಿರುವುದುಂಟು, ಕರ್ನಾಟಕದಲ್ಲಿ ಕನ್ನಡ ಕಡ್ಡಾಯ ಎಂಬ ಮಾತಿನ ಅರ್ಥವಾದರೂ ಈ ಹಿನ್ನೆಲೆಯಿಂದಲೇ ಎನ್ನಬಹುದು.

ಒಂದು ನಾಡು ತನ್ನ ಅಸ್ತಿತ್ವವನ್ನು ಒಂದು ಭಾಷೆಯೊಂದಿಗೆ ರೂಪಿಸಿಕೊಂಡಿದೆ ಎಂದರೆ ಅದು ಆ ಭಾಷೆಗಿರುವ ಸಾಂಸ್ಕೃತಿಕ ಮಹತ್ವವನ್ನು, ಶ್ರೇಷ್ಠತೆಯನ್ನು ಧ್ವನಿಸಿದೆ ಎಂದೇ ಅರ್ಥ. ಆ ಭಾಷೆಗೆ ಲಿಪಿ, ಅರ್ಥ, ಜೀವಂತಿಕೆ, ಸೃಜನಶೀಲತೆ, ಸ್ವಂತಿಕೆ ಮತ್ತು ಮುಖ್ಯವಾಗಿ ಕ್ರಿಯಾಶೀಲತೆಗಳು ಇದ್ದೇ ಇರುತ್ತವೆ. ನೂರಾರು ವರ್ಷಗಳಿಂದ ಈ ನಾಡಿನ ಜನ ಆ ಭಾಷೆಯೊಂದಿಗೆ ಬದುಕಿರುತ್ತಾರೆ ಅವರ ಭಾಷೆ ಎನ್ನುವುದು ಅವರಿಗೆ ಸಹಜವಾದದ್ದೇ ವಿನಃ ಅನ್ಯವಾಗಿರುವುದಿಲ್ಲ.

ಕಲಿಯುವ ಕಷ್ಟವನ್ನು ಅದು ಎಂದಿಗೂ ತಂದೊಡ್ಡಿರುವುದಿಲ್ಲ ಹುಟ್ಟು-ಬೆಳವಣಿಗೆಯಷ್ಟೇ ಸಹಜವಾಗಿರುತ್ತದೆ. ಆ ಕಾರಣಕ್ಕಾಗಿಯೂ ಭಾಷೆಗೆ ತಾಯಿಯ ಸ್ಥಾನ ನೀಡುವುದಾಗಿದೆ, ಅಭಿಮಾನಿಸುವುದೂ ಸಹಜವಾಗಿರುತ್ತದೆ.

ವೈಜ್ಞಾನಿಕ ಸತ್ಯಗಳು ಪ್ರತಿಪಾದಿಸಿರುವಂತೆ ಮಾತೃಭಾಷೆ ಎನ್ನುವುದು ಆ ನೆಲದ ಸತ್ಯವೂ ಸತ್ವವೂ ಹೌದು. ಅದರೊಂದಿಗೆ ಎಂತದ್ದೇ ಸಂವಹನವಾದರೂ ಸುಲಭವಾಗಿರುತ್ತದೆ. ಕನ್ನಡವನ್ನೇ ಗಮನಿಸಿದರೂ ಸಾವಿರಾರು ವರ್ಷಗಳ ಇತಿಹಾಸವಿರುವ ಈ ಭಾಷೆ ಎಲ್ಲಾ ಕಾಲಾಂತರ ಗಳಲ್ಲಿ, ಅವಸ್ಥಾಂತರಗಳಲ್ಲಿ ತನ್ನನ್ನು ತಾನು ಜತನಮಾಡಿ ಕೊಂಡಿದೆ. ಇದು ಸಾಮಾನ್ಯ ಸಂಗತಿಯಲ್ಲ ಇಂತಲ್ಲಿಯೇ ಅದರ ಶ್ರೇಷ್ಠತೆಯನ್ನು ಗುರುತಿಸುವುದು ಸಾಧ್ಯ. 'ಪರಿವರ್ತನೆ ಜಗದ ನಿಯಮ' ಎಂಬ ಮಾತನ್ನು ಸರಳವಾಗಿ ಸೃಜನವೂ ಕ್ರಿಯಾಶೀಲವೂ ಆದ ಎಲ್ಲಾ ಸಾಧ್ಯತೆಗಳಿಗೂ ಆರೋಪಿಸಬಹುದೆಂದಾದರೆ ಅದು ಭಾಷೆಯ ಸಂದರ್ಭಕ್ಕೂ ಹೆಚ್ಚು ಪ್ರಸ್ತುತವಾಗುತ್ತದೆ. ಆರಂಭದಿಂದಲೂ ಸಂಸ್ಕೃತ, ಪ್ರಾಕೃತ, ತಮಿಳು, ತೆಲುಗು, ಹಿಂದಿ ಮತ್ತು ಇಂಗ್ಲಿಷ್‌ನಂತಹ ಪ್ರಭಾವಶಾಲಿ ಭಾಷೆಗಳ ನಡುವೆಯೇ ಸಂಘರ್ಷ ಮತ್ತು ಸಮನ್ವಯಗಳನ್ನು ಸಾಧಿಸಿಕೊಂಡು ತನ್ನತನವನ್ನು ಉಳಿಸಿಕೊಂಡಿರುವಲ್ಲಿಯೇ 'ಮಾತೃಭಾಷೆ' ಎನ್ನುವುದಕ್ಕೆ ಇದ್ದಿರಬಹುದಾದ ವಿಶಿಷ್ಟತೆಯನ್ನು ಗುರುತಿಸಬಹುದು.

ಎಲ್ಲಾ ಕಾಲವೂ ಮುಖ್ಯವಾಗಿ ಮನುಷ್ಯನ ಅವಶ್ಯಕತೆಯನ್ನು ಅವಲಂಬಿಸಿಯೇ ಬದಲಾಗುತ್ತದೆ ಎನ್ನುವುದು ಸಹಜವಾದುದು. ಆದರೆ ಅದನ್ನು ಮೀರಿ ಕಾಲವೇ ಬದಲಾಯ್ತು, ಕೆಟ್ಟಿತು ಎಂಬೆಲ್ಲಾ ಮಾತುಗಳನ್ನು ರೂಢಿಗೆಂಬಂತೆ ಬಳಸುತ್ತಿರುವುದು ಅರಿವಿರುವ ಸಂಗತಿ. 'ಮಾತೃಭಾಷೆ'ಯ ವರ್ತಮಾನದ ಅಸ್ತಿತ್ವಗಳ ಸಂದರ್ಭದಲ್ಲಿಯೂ ಇದೇ ಮಾತನ್ನಾಡ ಬಹುದು. ಆಧುನಿಕಗೊಂಡ, ನಿರಂತರ ಅದೇ ಪ್ರಕ್ರಿಯೆಯಲ್ಲಿರುವ ಜಗತ್ತು ತನ್ನನ್ನು ಜಾಗತಿಕ ಗ್ರಾಮವನ್ನಾಗಿಸಿಕೊಳ್ಳುವ ಕನಸನ್ನು ಹೊತ್ತಿದೆ. ಅದನ್ನು ಸಾಕಾರಗೊಳಿಸಿಕೊಳ್ಳುವ ನಿಟ್ಟಿನಲ್ಲಿ ದಾಪುಗಾಲಿಡುವುದಾದರೂ ಮತ್ತದೇ ಸ್ವಾರ್ಥ ಮತ್ತು ಸ್ವ-ಅಭಿವೃದ್ಧಿ ಆಶಯದ ಕಾರಣದಿಂದಲೇ ಎನ್ನುವುದು ಸೂರ್ಯಸತ್ಯ. ಇದು ಆರಂಭದ ಮಾತುಗಳಂತೆ ಕೇವಲ ಮಾರುಕಟ್ಟೆಯ ರೂಪದಿಂದಷ್ಟೇ ಉಳಿದಿಲ್ಲ ಅದೊಂದು ಸಂಸ್ಕೃತಿಯೇ ಆಗತೊಡಗಿದೆ. ಅದು ತನಗೆ ಅಗತ್ಯವೆನ್ನುವಂತೆ ಮಾತೃಭಾಷೆಯನ್ನು ಹುಡುಕತೊಡಗಿದೆ. ಅದು ಈಗಾಗಲೇ ತನ್ನ ಸ್ವಾಮ್ಯಸಾಧಿಸಿಕೊಂಡು ವಿಶ್ವಭಾಷೆ ಎನಿಸಿಕೊಳ್ಳುತ್ತಿರುವ ವಿಪರ್ಯಾಸದಲ್ಲಿ ಜಾಗತಿಕ ಮಾರುಕಟ್ಟೆಯ ಭಾಷೆಯಾಗಿಬಿಡುತ್ತಿದೆ.

ಈಗಾಗಲೇ ವಸಾಹತುಶಾಹಿಯ ದುರಂತದೊಂದಿಗೆ ಇಂಗ್ಲಿಷ್ ನಮ್ಮನ್ನಾಳುತ್ತಿದೆ ಈ ನೆಲದ ದೊಡ್ಡ ಭ್ರಮೆಯಾಗಿ, ಆತಂಕವಾಗಿ ದಾಖಲಾಗಿಬಿಟ್ಟಿದೆ. ಇನ್ನು ಇದರ ಆಟಾಟೋಪ ನೇರವಾಗಿ ಈ ಪ್ರಾದೇಶಿಕ ಎನ್ನುವ 'ಮಾತೃಭಾಷೆ'ಗಳ ಮೇಲೆ ಆಕ್ರಮಣಶೀಲವಾಗಿಯೇ ಎರಗುತ್ತಿದೆ. ನಿಜವಾದ ಕರಾಳ ತಲ್ಲಣಗಳು ಆರಂಭವಾಗಿರುವುದೇ ಇಲ್ಲಿಂದ.

ಭಾರತದಲ್ಲಿಯೂ ಆರಂಭದಿಂದಲೇ ಈ ಬಗೆಯ ಅನ್ಯಭಾಷಾ ಪ್ರಭಾವದ ಒಂದಿಷ್ಟು ತಕರಾರುಗಳು ನಡೆದೇ ಇವೆ. ಮಹಾತ್ಮಗಾಂಧಿ, ಲೋಹಿಯಾ ಅವರಂತ'ಹ ಚಿಂತಕರೂ ಅಕ್ಷರ-ಅರಿವುಗಳ ಸಂದರ್ಭಕ್ಕೆ ಮಾತೃಭಾಷೆಯನ್ನೇ ಮುಖ್ಯ ನೆಲೆಯಲ್ಲಿ ಗಮನಿಸಿರುವುದುಂಟು ಮತ್ತು ಆ ಪರವಾಗಿ ಗಂಭೀರ ಚರ್ಚೆಯನ್ನು ಎತ್ತಿದ್ದಾರೆ. ವಸಾಹತುಶಾಹಿ ಆಡಳಿತ ಬ್ರಿಟಿಷರೊಂದಿಗೆ ಹೊರಟುಹೋಗಿ ಸ್ವಾತಂತ್ರ್ಯವೆನ್ನುವುದು ನಮಗೆ ದೊರೆತ ಕ್ಷಣಕ್ಕೂ ಅವರ ಭಾಷೆ ನಮ್ಮನ್ನು ಬಿಡಲಿಲ್ಲ. ಅಗತ್ಯಕ್ಕಿಂತ ಹೆಚ್ಚು ಎನ್ನುವಂತೆ ಅದು ಆವರಿಸಿಕೊಂಡಿತು. ಹಾಗಾಗಿ ಅಂದಿನಿಂದಲೇ ನಿಜದ ಭಾಷಾ ಆಕ್ರಮಣ ಈ ದೇಶದ ಎಲ್ಲಾ ಇತರ ಭಾಷೆಗಳನ್ನು ಕಾಡತೊಡಗಿತು. ಕನ್ನಡಕ್ಕೂ ಇದು ದೊಡ್ಡ ಸಮಸ್ಯೆಯೇ ಆಗತೊಡಗಿತು. 'ಕನ್ನಡದಲ್ಲೇನಿದೆ'? ಎನ್ನುವುದೊಂದು ಸಂವಾದವಾಗಿಯೇ ರೂಪುಗೊಂಡಿತು. ಬಾಲಿಶ ಎನ್ನುವಂತಾದರೂ ಅದೊಂದು ಉತ್ತರನೀಡಲೇಬೇಕಾದ ತುರ್ತನ್ನು ಸೃಷ್ಟಿಸಿತು. 'ಕನ್ನಡ' ಎನ್ನುವುದನ್ನು ಶಕ್ತಿಯ ಅರ್ಥವಾಗಿಯೇ ಪ್ರತಿಪಾದಿಸ ಲ್ಪಡಬೇಕಾದ ಅನಿವಾರ್ಯತೆಯೂ ಸವಾಲಾಯಿತು.

ಹೊರದೇಶದ ಸಮಸ್ಯೆ ಒಂದು ಬಗೆಯದ್ದಾದರೆ ಒಳಗಿನದ್ದು ಮತ್ತೊಂದು ವಿಧದ ಸಮಸ್ಯೆಯಾಗಿತ್ತು 'ರಾಷ್ಟ್ರಭಾಷೆ' ಎನ್ನುವುದರೊಂದಿಗೆ ಹಿಂದಿಯನ್ನು ಹೇರುವ ಪ್ರಯತ್ನಗಳೂ ಗಂಭೀರವಾಗಿಯೇ ನಡೆದವು. 'ತ್ರಿಭಾಷಾಸೂತ್ರ' ಎನ್ನುತ್ತಾ ಇಂಗ್ಲಿಷ್-ಹಿಂದಿ-ಕನ್ನಡವನ್ನು ಒಳಗೊಂಡಂತಹ ನಿಯಮಗಳು ಚಾಲ್ತಿಗೆ ಬಂದವು. ಇದು ಮತ್ತಷ್ಟು ಕೇಡನ್ನೇ

ಉಂಟುಮಾಡಿತು ಮೊದಲೇ ಕಲಿತವರ ನಡುವೆ ಅವಜ್ಞೆಗೆ ಗುರಿಯಾಗಿದ್ದ ಭಾಷೆ ಮತ್ತಷ್ಟು ಆತಂಕವನ್ನು ಎದುರಿಸುವುದಾಯಿತು. ದೇಶೀಭಾಷೆಗೆ, ಮಾತೃಭಾಷೆಗೆ ಕಡ್ಡಾಯಗೊಳಿಸುವ ಕಾನೂನುಗಳನ್ನು ರೂಪಿಸಬೇಕಾದ ವಿಪರ್ಯಾಸ ಸೃಷ್ಟಿಯಾಯ್ತು.

ನಿಜವಾಗಿಯೂ ಭಾರತದ ವೈಶಿಷ್ಟ್ಯತೆಯಿರುವುದೇ ವೈವಿಧ್ಯತೆ ಯಲ್ಲಿ. ಇಲ್ಲಿ ವಿಭಿನ್ನವಾದ ಹಲವಾರು ಸಂಸ್ಕೃತಿಗಳಿವೆ, ಅವುಗಳಿಗೆ ವಿಶಿಷ್ಟ ಆಯಾಮಗಳಿವೆ. ಅದು ಭಾಷೆಯನ್ನು ಒಳಗೊಂಡ ವೈವಿಧ್ಯತೆ. ನೂರಾರು ವರ್ಷಗಳಿಂದ ಒಂದು ನಿರ್ದಿಷ್ಟ ಭೌಗೋಳಿಕ ವಲಯದಲ್ಲಿ ಚೌಕಟ್ಟನ್ನು ರೂಪಿಸಿಕೊಂಡಂತೆ, ಭಾಷಾವಾರು ಹಿನ್ನೆಲೆಯಲ್ಲಿಯೂ ಕೆಲವೊಂದು ಸಾಮಾನ್ಯ ರೂಪುರೇಷೆಗಳಲ್ಲಿ ಬದುಕಿರುವ ಹಿರಿಮೆಗಳಿವೆ. ಆ ಹಿರಿಮೆಗೆ ಅದರದ್ದೇ ಆದ ಪರಂಪರೆ, ಇತಿಹಾಸ, ಸಾಮಾಜಿಕ, ಧಾರ್ಮಿಕ ಹಿನ್ನೆಲೆಗಳು ಇವೆ. ಬಹಳ ಸಲ ಭಾವುಕ ಎನ್ನಬಹುದಾದ ಗ್ರಹಿಕೆಯೂ ಅವುಗಳಿಗಿರುವುದುಂಟು.

ಬದಲಾವಣೆ ನಿಸರ್ಗ ನಿಯಮವಾದಂತೆ ಜಗತ್ತಿನ ನಿಯಮವೂ ಹೌದು. ಅದು ಕ್ರಿಯಾಶೀಲತೆಯ ಸಂಕೇತ. ಮನುಷ್ಯನ ಬೌದ್ಧಿಕ–ಮಾನಸಿಕ ವಿಕಾಸಶೀಲತೆಗೆ ತನ್ನನ್ನು ತಾನು ಅನಿವಾರ್ಯವೆನ್ನುವಂತೆ ಒಡ್ಡಿಕೊಳ್ಳಲೇ ಬೇಕು. ಇದು ಭಾಷೆಗೂ ಅನ್ವಯಿಸುವಂತಹುದು ಆದರೆ ಭಾಷೆಯನ್ನು ಹೀಗೆ ಅನ್ವಯಗೊಳಿಸುವ, ಉನ್ನತಿಗೊಳಿಸುವ ಪ್ರಜ್ಞೆಯಾದರೂ ಆ ನೆಲದ ಭಾಷೆಯ ಋಣದ ಮನುಷ್ಯನದ್ದೇ ಆಗಬೇಕು. ಜ್ಞಾನ, ಅರಿವುಗಳ ಸಂವಹನವೇ ಭಾಷೆ ಅಂತಹ ಭಾಷೆಯ ಮೂಲಕವೇ ಎಲ್ಲವನ್ನು ಪಡೆದುಕೊಂಡವರು ಅದನ್ನು ಉಳಿಸಿ–ಬೆಳಸುವ ಬಗೆಗೂ ಅಷ್ಟೇ ಪ್ರಾಮಾಣಿಕವಾದ ಕಳಕಳಿಯೊಂದಿಗೆ ಕರ್ತವ್ಯವೆನ್ನುವಂತೆ ತೊಡಗಿಸಿಕೊಳ್ಳ ಬೇಕು ಇದು ಖಂಡಿತಾ ಅಸಾಧ್ಯವಾದ ಸಂಗತಿಯಲ್ಲ.

ಮಾತೃಭಾಷೆ ಎನ್ನುವುದು ಖಂಡಿತವಾಗಿಯೂ ಅಸ್ತಿತ್ವದ ಅರ್ಥವೇ ಹೌದು. ಇಂದು ಜಗತ್ತು ಬೇರೆ–ಬೇರೆ ಕಾರಣಗಳನ್ನು ಮುಂದೊಡ್ಡಿ, ಬೇರೆಯದ್ದೇ ಪ್ರಭಾವಗಳಲ್ಲಿ ಪರಭಾಷೆಯನ್ನು ಹೇರಿದಂತೆಯೂ ಅನಿವಾರ್ಯತೆಯನ್ನು ಸೃಷ್ಟಿಸಬಹುದು. ಈಗ ಆಗುತ್ತಿರುವುದೂ ಅದೇ. ಇಂತಲ್ಲಿ ನಮ್ಮ ಸಾಮಾನ್ಯ ಜ್ಞಾನದ ನಿಲುವಿನಿಂದಲೂ ತೀರ್ಮಾನಗಳನ್ನು ತೆಗೆದುಕೊಳ್ಳಲೇಬೇಕು ನಮ್ಮದಲ್ಲದ ಭಾಷೆ ಎನ್ನುವುದು ಎಲ್ಲದರಂತೆ' ಒಂದು ಜ್ಞಾನವಾಗಿ ನಮ್ಮನ್ನು ಒಳಗೊಂಡು ಬೆಳೆಸಬೇಕು. ಅದು ನಮ್ಮತನವನ್ನು ದ್ವೇಷಿಸುವಂತೆ ಕಣ್ಣುಮುಚ್ಚಿಸುವುದಾಗಬಾರದು ಇಂತಾದಲ್ಲಿ ಅದು ಕೊಂದುಕೊಂಡು ಬದುಕುವ ದುರಂತವಾಗಿಬಿಡಬಹುದು.....

ಈ ಮೇಲಿನ ಮಾತುಗಳನ್ನು ಸಮಗ್ರತೆಯ ರೂಪದಲ್ಲಿ ಯಾವುದೇಭಾಷೆಯ ಸಮಸ್ಯೆ–ಸವಾಲುಗಳ ಹಿನ್ನೆಲೆಯಲ್ಲಿಯೂ ಗಮನಿಸ ಬಹುದು. 'ದೇಸಿ' ಎನ್ನುವ ರೂಪದಲ್ಲಿ ಗಮನಿಸುವ ಹೊತ್ತಿಗೂ ಅದು ಶತಮಾನಗಳ ಇತಿಹಾಸ–ಪರಂಪರೆಯಿಂದಲೇ ಅಪಾರವಾದದ್ದನ್ನು ಕಟ್ಟಿ–ಬೆಳಸಿದ್ದೂ ಆಗಿರುತ್ತದೆ. ಆದರೆ ಈ ದಿನಗಳಲ್ಲಿ ಆಧುನಿಕತೆ, ಹೊಸ ಹೊಸ ಅನ್ವೇಷಣೆಗಳ ಅರ್ಥದಲ್ಲಿ ಬದುಕನ್ನು ದಿನೇ ದಿನೇ ಸರಳತೆಯ, ಸಂವಹನದ ಅರ್ಥದಿಂದ ಒಳಗೊಂಡಂತೆ ಕಾಣುತ್ತಿದ್ದರೂ ಸಾಕಷ್ಟು ಅಪಾಯಗಳನ್ನು ಸೃಷ್ಟಿಸುತ್ತಿದೆ. ಜಾಗತೀಕರಣ–ಖಾಸಗೀಕರಣ ಎಂಬ ಮಾತುಗಳು ಎಲ್ಲಾ ಸಂದರ್ಭದಲ್ಲಿ ತನ್ನ ವ್ಯಾಪ್ತಿಯಾಚೆಗೂ ಪ್ರಭಾವ ಬೀರುವ ವಿಪರ್ಯಾಸ ನಡೆದಿದೆ. ಎಚ್ಚರಿಕೆ ಎನ್ನುವುದು ಅನಿವಾರ್ಯ ಎಂಬ ಹಿನ್ನೆಲೆಯಲ್ಲಿ ಸವಾಲುಗಳ ಸ್ವರೂಪವನ್ನೇ ಅವಲೋಕಿಸಬಹುದು.

ಈ ದೇಶಕ್ಕೆ ಅಪರೂಪವೆನ್ನುವ, ಶ್ರೀಮಂತ, ಅದ್ಭುತ ಎನ್ನುವ ಸಾಹಿತ್ಯವನ್ನು ನೀಡಿ ಸಂಸ್ಕೃತ–ಪ್ರಾಕೃತಗಳನ್ನು ಇಂದು ಅಧ್ಯಯನದ ಹೊತ್ತಿಗೆ ಮಾತೃಭಾಷೆ ಎನ್ನಲಾಗುತ್ತದೆ. ಒಂದು ಕಾಲದ ಶ್ರೇಷ್ಠತೆ ಎನ್ನುವ ಸನಾತನ ನಂಬಿಕೆ ಜೀವಂತವಾಗಿ ನಿರಂತರ ಎನ್ನುವಂತೆ ವಾಸ್ತವದಲ್ಲಿ ಪ್ರಚಲಿತವಾಗಲಿಲ್ಲವೆನ್ನುವುದೇ ಭಾಷೆಯ ಮಿತಿಯನ್ನು ಹೇಳುವಂತಹುದು ಇಂದಿಗೂ ಅದನ್ನು ಉಳಿಸಿ–ಬೆಳಸುವ ಹೋರಾಟವೊಂದು ಹಕ್ಕಿನ ರೂಪದಲ್ಲಿ ನಡೆಯುತ್ತಿರುವುದು ಗಮನಾರ್ಹ. 'ಕನ್ನಡ ಭಾಷೆ'ಯ ಸಂದರ್ಭಕ್ಕೆ ಈ ಬಗೆಯ ವಿಪರ್ಯಾಸ ಒದಗಿಲ್ಲ ಅಂದರೆ ಕನ್ನಡ ಇಂದು ಒಂದು ಖಚಿತವಾದ ಜೀವಂತ ಭಾಷೆ. ಅದರೊಂದಿಗೆ ಒಂದು ನಾಡು, ಕಾಲ–ಜನಾಂಗವೆನ್ನುವ ಬಹುನೆಲೆಯ ಜೊತೆಗೆ ಗಟ್ಟಿಯಾದ

ಸಂಸ್ಕೃತಿಯೊಂದು ದಟ್ಟವಾದ ರೂಪದಲ್ಲಿ ಸಿಗುತ್ತದೆ. ಪರಂಪರೆ ಎನ್ನುವ ಮಾತು ಕೇವಲ ಪ್ರಾಚೀನತೆಯ ರೂಪಕಕ್ಕಷ್ಟೇ ಸಲ್ಲುವುದಿಲ್ಲ ಬದಲಾಗಿ ಅದರ ಮಹತ್ವವನ್ನು ಪ್ರತಿನಿಧಿಸುತ್ತದೆ.

ಈ ದೇಶದ ಮೂಲನಿವಾಸಿಗಳ ವಾದದಲ್ಲಿ ದ್ರಾವಿಡರ ಜನಾಂಗ ಗಟ್ಟಿಯಾಗಿ ಉಳಿಯಿತೆನ್ನುವುದು ಇತಿಹಾಸ. ಇದು ಇಡೀ ದೇಶದ' ತುಂಬೆಲ್ಲಾ ತನ್ನ ಬದುಕನ್ನು ಕಟ್ಟಿಕೊಂಡದ್ದಕ್ಕೆ ಪುರಾವೆಗಳಿವೆ. ಹಾಗೆಯೇ ನಿಸರ್ಗ ಪ್ರೀತಿಯ ನಾಗರೀಕವೆನ್ನುವ ಶ್ರಮದ ಬದುಕು ಇವರದಾಗಿತ್ತು ಎನ್ನುವುದೇ ಅವರ ಜೀವನ ಪ್ರೀತಿಯ ಗಾಥತೆಯನ್ನು ಹೇಳುವಂತಹುದು. ಇಂತಹ ಪ್ರಾಚೀನ ದ್ರಾವಿಡರ ಮೂಲಭಾಷೆಗಳಲ್ಲಿ ಕನ್ನಡವೂ ಒಂದು ಎನ್ನುವುದು ಮುಖ್ಯವಾದ ಸಂಗತಿ. ಕ್ರಿ.ಪೂ. ಹಿಂದಕ್ಕೆ ಕನ್ನಡ, ಕನ್ನಡಿಗರ ಅಸ್ತಿತ್ವವಿತ್ತು ಎಂಬ ವಾದಗಳು ನಮ್ಮೊಂದಿಗಿವೆ. ಅಂದ'ರೆ ಪ್ರಾಚೀನತೆಯ ಸಂದರ್ಭದ ಹಿರಿತ'ನದಲ್ಲಿ ಕನ್ನಡದ್ದು ಮೊದಲಸಾಲಿನ ಹಿರಿಮೆ. ಅಂದರೆ ಒಂದು ಜನಾಂಗವೊಂದು ವಿಶಿಷ್ಟವೆನ್ನುವ ಭಾಷೆಯೊಂದನ್ನು ತನ್ನ ಸಂವಹನದ ಸಾಧ್ಯತೆಯನ್ನಾಗಿಸಿಕೊಂಡು ಅದನ್ನೇ ಬದುಕಾಗಿಸಿಕೊಂಡು, ಅದನ್ನೇ ಒಂದು ಅದ್ಭುತ ಸಂಸ್ಕೃತಿಯನ್ನಾಗಿ ರೂಪಿಸಿದ್ದು ಈಗ ಇತಿಹಾಸ. ಈಚೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿದ್ದು ಕೂಡ ಕನ್ನಡ ಭಾಷೆಯ ಪ್ರಾಚೀನತೆ ಮತ್ತು ಸಮೃದ್ಧಿಗೆ ದೊರಕಿದ ಒಂದು ದೃಢೀಕರಣವೆನ್ನಬಹುದು.

ಉತ್ತರ ಭಾರತವನ್ನು ಆಕ್ರಮಿಸಿಕೊಂಡು ಆಳಿದ್ದ ರಾಜ ಮನೆತನಗಳು, ಸುವರ್ಣಯುಗವನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸಿದ್ದ ಸಾಮ್ರಾಜ್ಯಗಳು, ಇಡೀ ದೇಶವನ್ನು ಪ್ರಭಾವಿಸಿದ ಭಕ್ತಿ ಚಳುವಳಿಗಳು, ದ್ವೈತ, ಅದ್ವೈತ, ವಿಶಿಷ್ಟಾದ್ವೈತದ ಅಸ್ತಿತ್ವಗಳಿಗೆ ನೆಲೆ ನೀಡಿದ ಹಿರಿಮೆಗಳೆಲ್ಲ ಕನ್ನಡನಾಡು-ನುಡಿಗಿದೆ. ಇಲ್ಲಿ ಕನ್ನಡ, ಕರ್ನಾಟಕವೆನ್ನುವುದು ಒಂದು ಸಮುದಾಯವಾಗಿ, ಆ ಕಾರಣಕ್ಕೆ ಶಕ್ತಿಯಾಗಿಯೇ ದಾಖಲಾಗಿತ್ತೆನ್ನುವುದು ಗಮನಾರ್ಹ. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ ಹೀಗೆ ಅನಂತ ಸಾಧ್ಯತೆಗಳಲೆಲ್ಲಾ ತನ್ನ ಅತ್ಯುತ್ಕೃಷ್ಟ ಎನ್ನುವಂತಹ ಸಾಧನೆಗಳನ್ನ ಸಾಧಿಸಿದ್ದು ಇತಿಹಾಸ.

ಈ ಮೊದಲಲ್ಲಿ ನಾವು ಗಮನಿಸಿದಂತೆ ಎಲ್ಲಾ ದೇಸೀ ಭಾಷೆಗಳಂತೆ ಕನ್ನಡವೂ ಹೀಗೆ ತನ್ನ ಅನನ್ಯತೆಗಳನ್ನು ಉಳಿಸಿಕೊಳ್ಳುವಲ್ಲಿ ಸಾಕಷ್ಟು ಹೋರಾಟಗಳನ್ನು, ಸವಾಲನ್ನು ಎದುರಿಸಿದೆ. ತನ್ನ ಗಟ್ಟಿತನದ ಕಾರಣದಿಂದಲೇ ಅದು ತನ್ನ ಅಸ್ಮಿತತೆಯನ್ನು ಉಳಿಸಿಕೊಳ್ಳುವುದು ಸಾಧ್ಯವಾಗಿದೆ. ನಾಡಿನ ಸುತ್ತಲ ಭಾಷೆ, ಸಂಸ್ಕೃತಿ, ಹೊರ ನಾಡಿನ ಆಕ್ರಮಣಶೀಲತೆಯ ಧಾಳಿಗಳು ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ನೆಲೆಯಲ್ಲಿಯೂ ಸಂಘಟಿತವಾಗಿವೆ. ಒಳಿತಿದ್ದಲ್ಲಿ ಅದನ್ನು ಒಪ್ಪಿಕೊಂಡು, ಇಲ್ಲವಾದಲ್ಲಿ ಧಿಕ್ಕರಿಸಿಕೊಂಡು ಸರಿತಪ್ಪುಗಳ ನಡುವಿನ ಸಂಘರ್ಷದಲ್ಲಿ ತನ್ನತನವನ್ನು ಕಾಯ್ದುಕೊಂಡದ್ದು ಸಾಮಾನ್ಯವಾದ ಸಂಗತಿಯಲ್ಲ.

"ಕಾವೇರಿಯಿಂದ ಗೋದಾವರಿವರೆಗೂ ಇದ್ದ ನಾಡು ಕನ್ನಡ ನಾಡು" ಎನ್ನುವ ಕವಿರಾಜಮಾರ್ಗಕಾರ ಅಲ್ಲಿನ ಜನರ ಶ್ರೇಷ್ಠತೆ ಗಳನ್ನು ಪಟ್ಟಿಮಾಡುತ್ತಾನೆ. 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎನ್ನುವ ಮೂಲಕ ಈ ನಾಡಿನ ಜನರ ಜ್ಞಾನ-ಕಾವ್ಯ ಪ್ರಯೋಗದ ಶಕ್ತಿ-ಪ್ರತಿಭೆಗಳನ್ನು ಕುರಿತು ಮಾತನಾಡುತ್ತಾನೆ. "ಸಾಧುಗೆ ಸಾಧು ಮಾಧುರ್ಯಂಗೆಮಾಧುರ್ಯಂ ಬಾಧಿಪ್ಪಕಲಿಗೆ ಕಲಿಯುಗ ವಿಪರೀತನ್" ಎಂಬಂತೆ ಹೃದಯವಂತಿಕೆ ಎಂತೋ ಅಷ್ಟೇ ಸ್ವಾಭಿಮಾನಿಯಾಗಿ ಯೋಧನಂತೆಯೂ ಬದುಕಿದ ಹಿರಿಮೆಯನ್ನು ಶಾಸನಗಳು ದಾಖಲಿಸಿವೆ. 'ಮಾತೆಂಬುದು ಜ್ಯೋತಿರ್ಲಿಂಗ'ವೆನ್ನುತ್ತಲೇ ಶುದ್ಧಗೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಿದ ಶರಣರು 'ಕಾಯಕವೇ ಕೈಲಾಸ' ಎನ್ನುವ ತತ್ವವನ್ನು ಬದುಕನ್ನಾಗಿಸಿಕೊಳ್ಳಲು ಹೋರಾಟ ನಡೆಸಿದ್ದಾರೆ. ದಾಸೋಹದಂತಹ ವಿಶಿಷ್ಟ ಪರಿಕಲ್ಪನೆಯಲ್ಲಿ ಜಗತ್ತಿಗೆ ಸಮಾನತೆಯ ಹರಿಕಾರರಾಗಲು ಯತ್ನಿಸಿದ್ದಾರೆ.

ಬಹುಶಃ ಈ ದೇಶದ ಮತ್ತೆಲ್ಲಿಯೂ ಕಾಣಲಾಗದಷ್ಟು ವೈಚಾರಿಕತೆ ಯನ್ನು ನಮ್ಮ ನೆಲವು ತನ್ನದಾಗಿಸಿಕೊಂಡು ಮಾದರಿಯಾಗಿ ತ್ತೆನ್ನುವುದು ದಾಖಲಾರ್ಹ. ಇಂತಹ ಪರಿವರ್ತನೆ ಅಥವಾ ಸಾಮಾಜಿಕ ಕ್ರಾಂತಿ ದಿಢೀರನೆ ನಡೆದದ್ದಾಗಿರಲಿಲ್ಲ. ಈ ಬಗೆಯ ಗುಣವನ್ನು ಈ ನೆಲದ ಸತ್ವದಲ್ಲಿಯೂ ಇದ್ದಿತೇನೋ ಎಂಬಂತೆ ಅನಿಸುವುದಾದರೂ ಜನರ ಬದುಕಿನ ಆಶೋತ್ತರಗಳಿಗೆ ಪ್ರತಿಕ್ರಿಯೆಯ ಸ್ವರೂಪದಂತಾಗಿತ್ತು, ಬದುಕಿನ ಪ್ರೀತಿಯೇ ದೊಡ್ಡದಾಗಿತ್ತು ಎಂದುಕೊಂಡಿದ್ದ ಜನರ ಮನಸ್ಥಿತಿಯನ್ನು ಹೇಳುವಂತಾಗಿತ್ತು. ಇದು ಒಂದು ಕಾಲಕ್ಕೆ ಮಿತಿಗೊಂಡದ್ದಾಗಲಿಲ್ಲ ಮುಂದೆ

ಕನಕದಾಸನಂತಹ ಸಂತನೂ ಕುಲವೆಂದು ಹೊಡೆದಾಡುವ ಜನರನ್ನು 'ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ" ಎಂದು ಪ್ರಶ್ನಿಸುವುದು ಸಾಧ್ಯವಾಯಿತು. ಅದು ಆಧುನಿಕತೆಯ ಹೊತ್ತಿಗೂ ಒಂದು ಚಳುವಳಿಯ ರೂಪವೇ ಆಗುವುದಕ್ಕೆ ಪೂರಕವೂ ಆಗಿತ್ತೆನ್ನಬಹುದು.

ಈ ಮೇಲಿನ ಸೂಚ್ಯ ಸಂಗತಿಗಳೆಲ್ಲದರ ಹಿಂದೆ ಇರುವ ಸಂಗತಿ ಸ್ಪಷ್ಟ. ನಿರಂತರವಾದ ಕ್ರಿಯಾಶೀಲತೆ ಎನ್ನುವುದು ನಾಡಿನ ಮುಖ್ಯ ಲಕ್ಷಣವೇ ಆಗಿತ್ತು ಅದು ಎಲ್ಲಾ ಸವಾಲು-ಸಂಘರ್ಷಗಳ ನಡುವೆಯೂ ತನ್ನತನವನ್ನು ಉಳಿಸಿಕೊಳ್ಳುವ ಬದ್ಧತೆಗೂ ಸಂಬಂಧಿಸಿದ್ದಾಗಿತ್ತು. ಹಾಗಾಗಿಯೇ ಸುದೀರ್ಘವಾದ, ಅಷ್ಟೇ ಶ್ರೇಷ್ಠವಾದ, ಸಾರ್ವಕಾಲಿಕ ಗಟ್ಟಿತನವನ್ನೇ ಪ್ರತಿಪಾದಿಸಿಕೊಳ್ಳಬಹುದಾದ ಶಕ್ತಿಯು ಕನ್ನಡ-ಕರ್ನಾಟಕಕ್ಕೆ ಇತ್ತು ಎನ್ನಬಹುದು.

ಒಂದು ಭಾಷೆ ಅಸ್ತಿತ್ವ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಸಿಂಹಪಾಲನ್ನು 'ಸಾಹಿತ್ಯ'ವೇ ಹೊಂದಿರುತ್ತದೆ ಎನ್ನುವ ಮಾತಾದರೂ ಸರಳವಾಗಿ ಮೇಲ್ನೋಟಕ್ಕೆ ನಿಜ ಎನಿಸುವುದುಂಟು. ಸಂವಹನ ಎನ್ನುವುದು ಇಡಿಯಾದ ಅರ್ಥವಾದರೂ ಅದರ ಮುಂದುವರಿದ ರೂಪವಾಗಿಯೇ ಸಾಹಿತ್ಯವನ್ನು ಪರಿಭಾವಿಸಬಹುದು. ಇದರಲ್ಲಿ ಜಾನಪದ ಮತ್ತು ಶಿಷ್ಟ ಎಂದೂ ವಿಂಗಡಿಸಿಕೊಳ್ಳಲು ಅವಕಾಶವಿದೆ. 'ಜಾನಪದ' ಎನ್ನುವಲ್ಲಿ 'ಮೌಖಿಕ' ಪರಂಪರೆಗೆ ಹೆಚ್ಚಿನ ಒತ್ತು ನೀಡಬಹುದು 'ಶಿಷ್ಟ' ಎಂಬಲ್ಲಿ 'ಅಕ್ಷರ' ದಾಖಲೆಗಳನ್ನು ಮಹತ್ವವಾಗಿ ಗಮನಿಸಬಹುದು. ಜಾನಪದ ಎನ್ನುವಲ್ಲಿನ ಅನುಭವಗಳು ಅನ್ನಿಸಿದ ತೀವ್ರತೆಯಲ್ಲಿಯೇ ಹಾಡು, ಕತೆ, ಒಗಟು, ಒಡಪು ಇತ್ಯಾದಿಯಾಗಿ ಸೃಷ್ಟಿಯಾಗುತ್ತದೆ. ಇಲ್ಲಿ ಸೃಷ್ಟಿಕರ್ತ ಮುಖ್ಯವಾಗಿ ಅಕ್ಷರಸ್ಥನೇ ಆಗಬೇಕೆಂದಿಲ್ಲ. ಅವನ ಮಾತುಗಳು 'ಗಟ್ಟಿ' ಎನಿಸಿದಲ್ಲಿ ಅದು ಅವನಿಂದ ಸುತ್ತಮುತ್ತಲಿಗೆ, ಸಮುದಾಯಕ್ಕೆ, ಸಮಾಜಕ್ಕೆ ಎಂಬಂತೆ ಹರಡಿಕೊಳ್ಳಬಹುದು ಅಂದರೆ ಬಾಯಿಂದ ಬಾಯಿಗೆ ಹರಡುವ ಸಾಹಿತ್ಯದ ಬಗೆಯಿದು. ಬಹುಪಾಲು ಒಂದು ಗಟ್ಟಿಯಾದ, ಸಾರ್ಥಕ ಬದುಕು ಸಾಧ್ಯವಾಗಿರುವ ನೆಲದಲ್ಲಿ ಹೀಗೆ 'ಜನಪದ' ಎನ್ನುವುದು ಉತ್ತಮ ಸಾಹಿತ್ಯವಾಗಿ ಮೌಖಿಕ ದಾಖಲೆಯಾಗಿರುವುದು ಸಾಧ್ಯ. ಅನುಭವ ತಕ್ಷಣಕ್ಕೆ ಕಾವ್ಯವಾಗುವ ಬಗೆ ಯಾವುದೇ ಶಿಷ್ಟ ಪರಂಪರೆಯ ಸಾಹಿತ್ಯದ 'ಸ್ಫೂರ್ತಿ' ತತ್ವಕ್ಕಿಂತ ಕಡಿಮೆಯದಲ್ಲವೆಂದೇ ಹೇಳಬಹುದು.

ಇವು ಬದುಕಿನ ಹಿಂದಿನ ದಾಖಲೆಗಳಾಗಬಹುದು, ಅವರದ್ದೇ ಸಮಕಾಲೀನ ಸಂಗತಿಗಳಾಗಬಹುದು, ನಿನ್ನೆ-ಇಂದುಗಳ ಅರಿವಿನಲ್ಲಿ ನಾಳೆಗಳನ್ನು ಕಲ್ಪಿಸುವ ಬಗೆಗೂ ಆಗಬಹುದು. ಈ ನೆಲದ ಮಹಾ ಕಾವ್ಯಗಳೇ ಮೂಲದಲ್ಲಿ 'ಜನಪದ'ವಾಗಿತ್ತೆನ್ನುವ ಮಾತೇ ಇದರ ಮಹತ್ವ ಮತ್ತು ಶ್ರೇಷ್ಠತೆಯನ್ನು ಹೇಳುವಂತಹುದು. ಕರ್ನಾಟಕ ಜನಪದವು ಅತ್ಯಂತ ಹಳೆಯ ಜನಪದಗಳಲ್ಲಿ ಒಂದೆಂಬ ಸತ್ಯವೇ ಅದರ ಹಿರಿಮೆ-ಗರಿಮೆಯನ್ನು ಪ್ರಸ್ತುತಪಡಿಸುತ್ತಿದೆ.

ನಮ್ಮ ಜನಪದದ ವಕ್ತೃಗಳಲ್ಲಿ ಗಂಡು-ಹೆಣ್ಣೆಂಬ ತರತಮದ ದೊಡ್ಡ ಭೇದಗಳಿಲ್ಲ ಆಧುನಿಕತೆಯ ಉತ್ಕರ್ಷವೆನ್ನುವ ಈ ಹೊತ್ತಿಗೂ ಸಾಧ್ಯವಾಗದಷ್ಟು ಅಭಿವ್ಯಕ್ತಿಯ ಅನಂತತೆ ನಮ್ಮ ಜಾನಪದ ಮಹಿಳೆಯರಿಗಿತ್ತು ಅವರು ತಮ್ಮ ನಡೆ-ನುಡಿ, ಕ್ರಿಯೆ, ಸಮಾಜ, ಸಂಬಂಧ, ಪ್ರಕೃತಿ-ದೇವರು ಎಂಬ ಎಲ್ಲಾ ನೆಲೆಗಳಲ್ಲೂ ತಮ್ಮ ಅನುಭವಗಳನ್ನು ಸಹಜವೆನ್ನುವಂತೆಯೇ ಹಾಡಿಕೊಂಡರು, ಆಡಿಕೊಂಡರು. ಅವು ಗಟ್ಟಿಯಾದ ಸಾಹಿತ್ಯ ಪ್ರಕಾರಗಳಾದ್ದರಿಂದಲೇ ತಮ್ಮ ನಿರಂತರತೆಯನ್ನು ಕಾಯ್ದುಕೊಂಡು ನೆನಪುಗಳ ಆಸ್ತಿಯಾಗಿಯೇ ಉಳಿದು ಬಂದದ್ದು ಗಮನಾರ್ಹ. ಹೀಗೆ ಬದುಕಿನ ಎಲ್ಲಾ ನೆಲೆಗಳನ್ನು ನಮ್ಮ ಜನಪದರು ಸ್ಪರ್ಶಿಸಿದ್ದು, ಹಾಡಿಕೊಂಡದ್ದು, ಕತೆಗಳಾಗಿಸಿದ್ದು ಕನ್ನಡಭಾಷೆಯಿಂದಲೇ.... ಎನ್ನುವುದು ಗಮನಾರ್ಹ. ಇದರ ಮೂಲಕವೇ ಬದುಕಿನ ಕಷ್ಟ ಸುಖಗಳನ್ನು ಅನುಭವಿಸಿದ್ದು ಖಚಿತವಾಗಿ ನಿಲ್ಲುವುದು ಇತರರಿಗೆ ಮಾದರಿಯಾಗುವುದು 'ಕನ್ನಡ' ಎನ್ನುವುದನ್ನೇ ಒಂದು ಸಂಸ್ಕೃತಿಯಾಗಿ ರೂಪಿಸುವುದು ಅವರಿಂದ ಸಾಧ್ಯವಾಯಿತು. ಇಂತಲ್ಲಿ ನಮಗೆ ಕಾಡುವ ಮುಖ್ಯ ಪ್ರಶ್ನೆ ಎಂದರೆ ಈ ಹೊತ್ತಿಗೆ ಏಕೆ ಸಾಧ್ಯವಾಗುತ್ತಿಲ್ಲ? ಕನ್ನಡಭಾಷೆಗೆ ಸಾಕಷ್ಟು ಸಮಸ್ಯೆಗಳಿವೆ ಎನಿಸುತ್ತಿರುವುದು ಯಾಕೆ?.

ಕನ್ನಡ ಭಾಷೆಯ, ಸಾಹಿತ್ಯದ, ಸಂಸ್ಕೃತಿಯ ಪ್ರಾಚೀನತೆಯನ್ನು, ಘನತೆಯನ್ನು, ವೈಭವದ ಇತಿಹಾಸವನ್ನು ಕುರಿತು ಇಂದಿಗೆ ಮಾತನಾಡುವುದು ಒಂದು 'ಭಾವುಕಸ್ಥಿತಿ' ಜೊತೆಗೆ ಅದೊಂದು ಅಪರಿಮಿತ ಹೆಮ್ಮೆ. ನಾವು ಸಮೃದ್ಧ ಪರಂಪರೆಯ ವಕ್ತಾರರೆನ್ನುವುದು ಎಲ್ಲಾ ಕಾಲಕ್ಕೂ ಸಂಭ್ರಮ ತರುವ ಸಂಗತಿಯೇ ಹೌದು. ಆದರೆ ಅಷ್ಟರಿಂದಲೇ ಒಂದು

ಭಾಷೆ, ನಾಡು ಉದ್ಧಾರವಾಗಿಹೋಗುವುದಿಲ್ಲ ಕಾಲ–ಪ್ರಜ್ಞೆ ಬದಲಾಗಿದೆ ಎನ್ನುವುದರೊಂದಿಗೆ ಎಲ್ಲವೂ ಉನ್ನತೀಕರಣಗೊಂಡೇ ಮುಖಾ–ಮುಖಿ ಯಾಗುವುದು ತುರ್ತು ಹೌದು. ಹಾಗೆಂದು ಜವಾಬ್ದಾರಿಯ ಅರ್ಥವನ್ನು ಯಾರಿಗೋ ವರ್ಗಾಯಿಸಿ ಕುಳಿತುಕೊಳ್ಳಬೇಕಿಲ್ಲ. ವಾಸ್ತವದ ಸಾಧ್ಯತೆಯೇ ಬೇರೆಯಾಗಿರುತ್ತದೆ. ಬರಗೂರು ರಾಮಚಂದ್ರಪ್ಪನವರು ಹೇಳುವಂತೆ "ಕನ್ನಡ ಮತ್ತು ಕರ್ನಾಟಕವನ್ನು ಕುರಿತ ಅಭಿಮಾನದ ಅಭಿವ್ಯಕ್ತಿಗೆ ದೊಡ್ಡ ಇತಿಹಾಸವಿದೆ. ಯಾವುದೇ ನಾಡು–ನುಡಿಗಳ ಬಗ್ಗೆ ಮೂಡಬಹುದಾದ ಮತ್ತು ಮೂಡಿಸಬಹುದಾದ ಅಭಿಮಾನದ ಅಂಶಗಳು ನಮ್ಮಲ್ಲೂ ಕೆಲಸಮಾಡಿವೆ. ಆದರೆ ಎಲ್ಲಾ ಕಾಲಘಟ್ಟಗಳಲ್ಲೂ ಭಾಷಾಭಿಮಾನವೆನ್ನುವುದು ಒಂದೇ ಮಾದರಿಯಲ್ಲಿ ಇರುತ್ತದೆಯೆ? ಒಂದೇ ಮಾದರಿಯಲ್ಲಿ ಇರಲು ಸಾಧ್ಯವೇ? ಅಂದಂದಿನ ಚಲನಶೀಲತೆಗ ನುಗುಣವಾಗಿ ಚಿಂತನಶೀಲತೆಯ ಸ್ವರೂಪವೂ ನಿರ್ಧಾರವಾಗುವುದಿಲ್ಲವೆ? ಭಾಷಾಭಿಮಾನವು ತನ್ನ ಮೂಲನೆಲೆಗಳನ್ನು ಬಿಟ್ಟುಕೊಡದೆ ಬದಲಾ ಗುತ್ತಿರುವ ಸನ್ನಿವೇಶಕ್ಕನುಗುಣವಾಗಿ ಹೊಸ ಸವಾಲುಗಳಿಗೆ ಉತ್ತರ ಹುಡುಕುವ ಮತ್ತು ಕೊಡುವ ತಾತ್ವಿಕ ಗಟ್ಟಿತನವನ್ನು ಪಡೆಯಬೇಕಲ್ಲವೆ? ಈ ರೀತಿಯ ಅನೇಕ ಪ್ರಶ್ನೆಗಳನ್ನು ಹಾಕಿಕೊಳ್ಳುವುದು ಇಂದಿನ ಅಗತ್ಯವೆಂದು ಕಾಣುತ್ತದೆ. ಯಾಕೆಂದರೆ ಪ್ರಶ್ನೆಗಳಿಗೆ ಮುಖಾಮುಖಿಯಾಗದೆ ಸೈದ್ಧಾಂತಿಕ ಸ್ಪಷ್ಟತೆ ಲಭ್ಯವಾಗುವುದು ಕಷ್ಟ" (ಕನ್ನಡಾಭಿಮಾನ, ಕನ್ನಡಪ್ರಜ್ಞೆ, ಪು. 1).

ಇದು ಎಲ್ಲಾ ದೇಸೀ ಭಾಷೆಗಳೂ ಎದುರಿಸುವ ಗಂಭೀರವಾದ ಸವಾಲು ಒಬ್ಬ ಸಾಮಾನ್ಯ ಪ್ರಜೆಯಿಂದ ಹಿಡಿದು ಅಧಿಕಾರದ ಉನ್ನತ ಪೀಠದಲ್ಲಿ ಕುಳಿತವರಿಗೆಲ್ಲಾ ಇದು ಸಂಬಂಧಿಸಿರುತ್ತದೆ. ಪಲಾಯನವಾದಗಳು ಸಮಸ್ಯೆಯನ್ನು ಬಿಡಿಸುವುದಿಲ್ಲ.

ಈ ಚರ್ಚೆಯ ಆರಂಭಕ್ಕೆ ಗಮನಿಸಿದಂತೆ ಕನ್ನಡಭಾಷೆ ತನ್ನ ಸಾಹಿತ್ಯಾರಂಭ ಕಾಲದಲ್ಲಿ ಅಂದರೆ ಪ್ರಾಚೀನ ಕಾಲಕ್ಕೂ ಸಮಸ್ಯೆಯನ್ನು ಎದುರಿಸಿದ್ದಿದೆ. ಸಂಸ್ಕೃತ, ಪ್ರಾಕೃತ ಇವೇ ಮೊದಲಾದ ಭಾಷೆಗಳ ದಟ್ಟ ಪ್ರಭಾವದಿಂದ ಪಾರಾಗಿ ಸೃಜನಶೀಲ ಸಾಹಿತ್ಯ ರಚನೆಗೆ ತೊಡಗಿಸಿ ಕೊಂಡದ್ದು ಸಾಮಾನ್ಯ ಸಂಗತಿಯಲ್ಲ. ಕವಿರಾಜಮಾರ್ಗಕಾರ ತನ್ನ ಲಕ್ಷಣ ಗ್ರಂಥದಲ್ಲಿ ನಾಡು, ನುಡಿ, ಜನರನ್ನು ಕುರಿತು ವಿಸ್ತೃತವಾಗಿಯೇ ಪ್ರಸ್ತಾಪಿಸುತ್ತಾನೆ ಅವನ ಒಂದು ಮಾತು ಗಮನಾರ್ಹವಾದುದು. 'ಪೊಲಗೆಡಿಸಿನುಡಿವರ್ ಪಳಗನ್ನಡವ' ಎನ್ನುತ್ತಾನೆ ಅವನು. ಹಳಗನ್ನಡ ವನ್ನು ಹಾಳುಮಾಡಿ ಮಾತನಾಡುತ್ತಾರೆ ಎಂಬ ಅರ್ಥದಲ್ಲಿ ಅವನಿಗೂ ಹಿಂದೆ 'ಹಳಗನ್ನಡ' ಎಂಬ ಪ್ರಸ್ತಾಪವಿದೆ. ನಮ್ಮಲ್ಲಿನ ಪೂರ್ವದಹಳಗನ್ನಡ ಎಂಬ ಮಾತನ್ನು ಈ ಹಿನ್ನೆಲೆಯಲ್ಲಿ ಸ್ಮರಿಸಬಹುದು. ಕವಿರಾಜಮಾರ್ಗ ಕಾರನಿಗೂ ತನ್ನ ಹಿಂದಿನ ಭಾಷೆಯನ್ನು ಕೆಡಿಸಿಮಾತನಾಡುತ್ತಾರೆ ಎಂಬ ಬೇಸರವಿದೆ, ಆಕ್ಷೇಪಣೆಗಳಿವೆ. ಅಂದರೆ ಭಾಷೆಗೆ ಎಲ್ಲಾಕಾಲಕ್ಕೂ ಸಮಸ್ಯೆಗಳಿವೆ. ಆದರೆ ಸ್ವರೂಪ ಬೇರೆ ಇರಬಹುದು.

ಭಾಷೆಯ ಮುಖ್ಯ ಗುರಿಯೇ ಇನ್ನೊಬ್ಬರೊಂದಿಗೆ ಸಂವಹನ ನಡೆಸುವುದು ಎನ್ನುವುದಾದರೆ ಅದು ಅರ್ಥೈಸುವ ಬಗೆಗೆ ಸಂಬಂಧಿಸಿ ದ್ದಾಗಿರುತ್ತದೆ. ಅಂದರೆ ಇದಕ್ಕೊಂದು ನಿರಂತರತೆ, ಇತರ ಒಡನಾಟ, ಪ್ರಾದೇಶಿಕತೆ, ವ್ಯಕ್ತಿವಿಶಿಷ್ಟತೆ – ಇತ್ಯಾದಿಯಾದ ಅವಕಾಶ ಗಳಿರುತ್ತವೆ. ಇದು ಒಂದಷ್ಟು ಆಚೀಚೆ ಎನ್ನಬಹುದಾದ ಬದಲಾವಣೆಗೂ ಕಾರಣವಾಗಬಹುದು. ಮೂಲತಃ ಮನುಷ್ಯನ ಮೂಲಗುಣವೆ ಅನುಕೂಲ ಸಿಂಧುವಾದುದು. ಆತ ತನ್ನ ಸರಳತೆಗೆ ಏನನ್ನಾದರೂ ಮಾಡಬಲ್ಲ ಎನ್ನುವುದನ್ನು ಭಾಷೆಯ ಸಂದರ್ಭಕ್ಕೂ ಗಮನಿಸಬಹುದು.

ಇಂದಿಗೂ ಗ್ರಾಮ್ಯ, ಅನಕ್ಷರಸ್ಥ, ಅಕ್ಷರಸ್ಥ, ಪದವೀಧರ –ಹೀಗೆ ವಿಭಿನ್ನ ನೆಲೆಗಳಲ್ಲಿ ಭಾಷಾಸ್ವರೂಪದ ಅಂತರವನ್ನು ಸೂಕ್ಷ್ಮವಾಗಿ ಗುರುತಿಸಬಹುದು. ಅದು ಪ್ರಾದೇಶಿಕತೆ, ಸುತ್ತಮುತ್ತಲ ಪರಿಸರ ಇತ್ಯಾದಿ ಅಂಶಗಳಿಂದಲೂ ಸಹ ಪ್ರಭಾವಿಸಲ್ಪಡುವ ಸಾಧ್ಯತೆಯಿರುತ್ತದೆ. ಇದು ಬಹುಶಃ ಕವಿರಾಜಮಾರ್ಗಕಾರನ ಕಾಲದಲ್ಲಿಯೂ ತೀರಾ ಭಿನ್ನವಾಗಿರಲಿಕ್ಕಿಲ್ಲ.

ಮುಂದೆ ಆದಿಕವಿಯಾದ ಪಂಪನು ತನ್ನ ಕಾವ್ಯಕ್ಕೆ 'ಚಂಪೂ'ವನ್ನು ಪ್ರಕಾರವಾಗಿಸಿಕೊಂಡಾಗ ಅದರ ನಿಷ್ಪತ್ತಿಯಲ್ಲಿಯೂ ದೇಸೀ ಪರವಾದ ಕೆಲವು ಚರ್ಚೆಗಳು ಚಾಲ್ತಿಯಲ್ಲಿರುವುದು ಗಮನಾರ್ಹ. ಸಂಸ್ಕೃತ ಭೂಯಿಷ್ಟವೆನ್ನುವ ಮಾರ್ಗಪರಂಪರೆಯನ್ನು ಅವಲಂಬಿಸಿದರೂ ಪಂಪನಿಗಿದ್ದ ದೇಸೀ ತುಡಿತ ಆಸಕ್ತಿಕರವಾದದ್ದು, ಅವಕಾಶವಿದ್ದಲೆಲ್ಲಾ ಆತ ಕನ್ನಡದ ಪರವಾಗಿಯೇ ನಿಲ್ಲುತ್ತಾನೆ. ಇದು ರನ್ನನಲ್ಲಿ ಮತ್ತಷ್ಟು ವಿಸ್ತೃತವೂ ಗಟ್ಟಿಧ್ವನಿಯೂ ಆಗುತ್ತದೆನ್ನಬಹುದು.

ಪಂಪನಿಗಿಂತ ಸರಳವಾಗುವ ರನ್ನನ ಹಿನ್ನೆಲೆ-ಸಾಧನೆ, ಫಲಿತಗಳೂ ಇದಕ್ಕೆ ಪೂರಕವಾಗಿದ್ದವು. ಪೊನ್ನನಲ್ಲಿಯೂ ಈ ಬಗೆಯ ಸಾಮಾನ್ಯ ಲಕ್ಷಣಗಳು ಗುರುತಿಸಬಹುದಾದವು.

ಮುಂದೆ ಕನ್ನಡದ ಮೊದಲ ಗದ್ಯವೆನ್ನಬಹುದಾದ ವಡ್ಡಾರಾಧನೆಯೊಂದಿಗೆ ಭಾಷೆಯ ಮತ್ತೊಂದು ಮಜಲು ದಾಖಲಾಗುತ್ತದೆ. ಕತೆ ಎನ್ನುವ ಪ್ರಕಾರವೇ ಸರಳವಾಗಿ ದೇಸೀತನವನ್ನು ಪ್ರತಿನಿಧಿಸುವುದರಿಂದಲೂ ಇಡೀ ಕೃತಿ ಕಥೆಯ ರೂಪದಲ್ಲಿ ಸಾಮಾಜಿಕತೆ ಕಾಲಿಕ ಪ್ರತಿಕ್ರಿಯೆಯಂತೆ ಕಂಡುಬರುವುದರಿಂದಲೂ ಸಾಮಾನ್ಯತೆಯ ಮಹತ್ವ ಪಡೆಯುತ್ತಾ ಕನ್ನಡದ ಬದುಕಿನ ವಿವಿಧ ಆಯಾಮಗಳ ಚಿತ್ರಣಕ್ಕೆ ವಡ್ಡಾರಾಧನೆ ಮುಂದಾದಂತಿದೆ.

ನಂತರಕ್ಕೆ ಬಹಳ ಮುಖ್ಯವಾದ ದೇಸೀ ಚಿಂತನೆಗೆ-ಚರ್ಚೆಗೆ ಭಾಷಿಕ ಪ್ರಜ್ಞೆಗೆ ಚಾಲನೆ ಕೊಟ್ಟವನು ನಯಸೇನ. ಅವನ ಏಕೈಕ ಕೃತಿ 'ಧರ್ಮಾಮೃತ' ಜೈನ ಧರ್ಮದ ಶ್ರೇಷ್ಠತೆಯ ಪ್ರತಿಪಾದನೆಗೆ ಹೊರಟ ಕವಿಗೆ ಜನರಿಗೆ ತಲುಪಲೇಬೇಕಾದ ಕಾವ್ಯರಚನೆಯ ತುರ್ತು ಅನಿವಾರ್ಯವಾಗಿತ್ತು. ವೀರಶೈವ ಜನರಲ್ಲಿ ಬೇರೂರತೊಡಗಿದ್ದ ಕಾಲವದಾಗಿತ್ತು. ಜನಸಾಮಾನ್ಯರಲ್ಲಿ ರೂಢಿಯಾಗಿದ್ದ ನಾಣ್ಣುಡಿ, ಜಾಣ್ಣುಡಿ, ಉಪಮೆ, ಪ್ರತಿಮೆಗಳೇ ಮೊದಲಾದವನ್ನು ಸಾಕಷ್ಟು ಎನ್ನುವಂತೆಯೇ ಬಳಸುವ ನಯಸೇನ ಆ ಕಾರಣಕ್ಕೆ ಜನಸಾಮಾನ್ಯರ ಭಾಷೆಯೆಡೆಗೆ ಚಲಿಸುವ ಅನಿವಾರ್ಯತೆಯನ್ನು ಎದುರುಗೊಂಡನು. ನಯಸೇನನಲ್ಲಿ ಸ್ಪಷ್ಟವಾದ ಕನ್ನಡಿಗನಿದ್ದಾನೆ, ಸಹಜ ಭಾಷಾಭಿಮಾನಿ ಅವನೊಳಗೆ ಎಚ್ಚರವಾಗಿದ್ದಾನೆ. ಕತೆ, ಉಪಕತೆ, ಗಾದೆ, ನಾಣ್ಣುಡಿಗಳನ್ನು ತಂತ್ರದಂತೆಯೇ ಬಳಸಿಕೊಳ್ಳಲು ಜನರಿಗೆ ಆಪ್ತವಾಗಿ ಕತೆ ಹೇಳಲು ಬಯಸುತ್ತಾನೆ. ಪಂಪನಲ್ಲಿದ್ದ ಮಾರ್ಗ-ದೇಸೀ ಸಮನ್ವಯತೆಯ ರೂಪ ಇವನಲ್ಲಿ ಮತ್ತಷ್ಟು ಸರಳವಾಗಿ ದೇಸೀಯತೆಯೇ ಪ್ರಧಾನವೆನ್ನುವಂತೆ ಚಲಿಸುತ್ತದೆ. ಎಲ್ಲರಿಗೂ ಸ್ಪಷ್ಟವಾಗಬೇಕು ಎಂಬ ಆಶಯವೇ ಅವನಿಗೆ ಪ್ರಧಾನವಾದ್ದರಿಂದಲೂ ಕನ್ನಡ ಭಾಷೆ, ಸಮಾಜ, ಸಂಸ್ಕೃತಿ ನಯಸೇನನ ಕಾವ್ಯದ ನೆರಳಾಗುತ್ತದೆ ಅಂದರೆ ಭಾಷಿಕ ಅನಿವಾರ್ಯತೆಯನ್ನು ನಯಸೇನ ಸ್ಪಷ್ಟವಾಗಿ ಮನಗಂಡಿದ್ದಾನೆನ್ನಬಹುದು.

ಮಾರ್ಗಪರಂಪರೆಯ ಬಗೆಗೆ, ಅದನ್ನು ದೇಸೀತನದೊಂದಿಗೆ ಮಿಳಿತಗೊಳಿಸುವುದರ ಬಗೆಗೆ ಅಂದರೆ ಸಂಸ್ಕೃತದೊಂದಿಗೆ ಕನ್ನಡ ಮಿಳಿತಗೊಳಿಸುವುದರ ಬಗೆಗೆ ಅವನಿಗೆ ಸ್ಪಷ್ಟವಾದ ವಿರೋಧವಿದೆ. ಸಂಸ್ಕೃತವಾದರೆ ಪೂರ್ಣ ಸಂಸ್ಕೃತವೇ ಆಗಲಿ ಇಲ್ಲವಾದರೆ ಶುದ್ಧ ಕನ್ನಡವಾಗಲಿ ಎನ್ನುವುದವನ ವಾದ. ಸಂಸ್ಕೃತ ಮತ್ತು ಕನ್ನಡಗಳ ಮಿಶ್ರಣವನ್ನು ಎಣ್ಣೆ-ತುಪ್ಪಗಳ ಮಿಶ್ರಣವೆಂದು ಅದೊಂದು ಅಸಹಜ ಸಂಬಂಧವೆಂದೂ ನಿರಾಕರಿಸುತ್ತಾನೆ. ನಯಸೇನನ ಈ ಉಪಮೆ ಕನ್ನಡದ ದೇಸೀ ತುಡಿತದ ಸಂದರ್ಭದಲೆಲ್ಲ ಮುಖ್ಯ ನೆಲೆಯಾಗಿ ಚರ್ಚೆಗೆ ಬಂದಿರುವುದು ಗಮನಾರ್ಹ. ನಯಸೇನನ ಈ ಮಾತು ಇಂದಿಗೂ ಹೆಚ್ಚು ಅನ್ವಯಗೊಳ್ಳುವಂತಹುದು. ನಮ್ಮ ಭಾಷೆಯಲ್ಲಿಯೇ ಹೇಳುವುದೆಲ್ಲ ಸಾಧ್ಯವಿದ್ದಾಗ ಮತ್ತೊಂದು ಭಾಷೆಯ ಅಗತ್ಯವಾದರೂ ಏನು? ಭಾಷೆ, ಮಾಧ್ಯಮ, ನಾಗರೀಕತೆ, ಆಧುನಿಕತೆ, ಆಡಳಿತ ಇತ್ಯಾದಿ ಎಲ್ಲಾ ವಿಚಾರಗಳ ಸಂದರ್ಭದಲ್ಲಿಯೂ ಈ ಪ್ರಶ್ನೆಯನ್ನು ನಿಕಟಗೊಳಿಸಿಯೇ ಚಿಂತಿಸಬಹುದು. ಅಂದರೆ ಇತರ ಭಾಷೆಯೋ ಸಂಸ್ಕೃತಿಯೋ ನಮ್ಮೊಳಗೆ ಸೇರುವಂತಲ್ಲಿ ಅದು ನಮ್ಮದಾಗಬೇಕು. ಅಂದರೆ ಭಾಷೆ ಶ್ರೀಮಂತಗೊಳ್ಳಬೇಕು. ನಮ್ಮತನಕ್ಕೆ ಸಂವಾದಿಯಾಗಬೇಕು. ಅದು ಪರಕೀಯವೋ ಶಿಥಿಲವೋ ಆಗುವ ದುರಂತವನ್ನು ಎದುರಾಗಬಾರದು. ನಯಸೇನನ ಉದ್ದೇಶ ಧರ್ಮ ಶ್ರೇಷ್ಠತೆಯ ಪ್ರಚಾರವೇ ಇದ್ದಿರಬಹುದಾದರೂ ಅವನು ಕನ್ನಡಭಾಷಾಪರ ತಳೆದ ಧೋರಣೆ ಮಾತ್ರ ಪ್ರಶ್ನಾತೀತ.

ಇಲ್ಲಿಯೇ ನೆನೆಯಬಹುದಾದ ಮತ್ತೊಬ್ಬ ಕವಿ ಆಂಡಯ್ಯ. ಸುಮಾರು 10ನೇ ಶತಮಾನದ ಆಸುಪಾಸಿನಲ್ಲಿ ಕನ್ನಡದಲ್ಲಿ ಕಾವ್ಯ ರಚಿಸಿದ ಬಹುಪಾಲು ಕವಿಗಳಿಗೆ ಸಂಸ್ಕೃತ ಮುಖ್ಯವಾದ ಆಕರವಾಗಿತ್ತು. 'ಚಂಪೂ' ಪ್ರಕಾರ ಪ್ರಧಾನವಾಗಿತ್ತು. ಸಂಸ್ಕೃತದ ಸಹಾಯ ಮತ್ತು ಪ್ರಭಾವದಿಂದಾಚೆಗೆ ಕಾವ್ಯ ರಚನೆ ಸುಲಭವಲ್ಲ ಎನ್ನುವುದು ಅಂದಿನ ಮನಸ್ಥಿತಿಯಾಗಿತ್ತು ಹಾಗಾಗಿ ಕನ್ನಡ-ಸಂಸ್ಕೃತ ಸಮನ್ವಯದ ಹಾದಿ ಬಹಳಷ್ಟು ಜನರಿಗೆ ಸರಳವಾದ ಹಾದಿಯಾಗಿತ್ತು. ಇಂತಹ ಹೊತ್ತಿನಲ್ಲಿಯೇ ಕಾಣಿಸಿಕೊಂಡ ಆಂಡಯ್ಯ ವಿಶಿಷ್ಟವಾಗಿ ತನ್ನ ಕಾವ್ಯದ ಅಸ್ತಿತ್ವದ ಅರ್ಥಕ್ಕೆ ಸಂವಾದಿ ಯಾಗಲು ಬಯಸುತ್ತಾನೆ. 'ಅಚ್ಚಗನ್ನಡದಲ್ಲಿಯೇ' ಕಾವ್ಯ ಬರೆಯುತ್ತೇನೆ ಎನ್ನುವುದು ಅವನ ಹಠ ಅದರ ಪ್ರತಿಕ್ರಿಯೆ ಎಂಬಂತೆ 'ಕಬ್ಬಿಗರ ಕಾವ' ಎಂಬ ಕೃತಿಯನ್ನು ರಚಿಸುತ್ತಾನೆ. ಆ ಹೊತ್ತಿಗೆ ಖಂಡಿತಾ ಇದು ಸಾಮಾನ್ಯವಾದ ಕಾರ್ಯವಾಗಿರಲಿಲ್ಲ. ಅನೇಕ

ಎಡರು-ತೊಡರುಗಳನ್ನು ಕಾವ್ಯರಚನೆಯ ಸಂದರ್ಭದಲ್ಲಿ ಎದುರಿಸಿದರೂ ಕನ್ನಡದ ಅಭಿಮಾನದ ವಿಚಾರದಲ್ಲಿ ಅವನಿಗಿದ್ದ ಹಠ ಗಮನಾರ್ಹ. ಸಂಸ್ಕೃತದ ಶಬ್ದಗಳನ್ನು ತರುವಲ್ಲಿಯೂ ಅವುಗಳನ್ನು ಕನ್ನಡಕ್ಕೆ ತದ್ಭವಗಳನ್ನಾಗಿಸಿಕೊಳ್ಳುವ ಅವನ ಪ್ರಯತ್ನ ಅಭಿನಂದನೀಯ. ಮನಸ್ಸಿದ್ದಲ್ಲಿ ಏನೆಲ್ಲಾ ಪ್ರಯೋಗವೂ ಸಾಧ್ಯ ಎನ್ನುವ ಮಾತಿಗೆ ಆಂಡಯ್ಯ ಅತ್ಯುತ್ತಮ ಉದಾಹರಣೆಯಾಗಿದ್ದಾನೆ. ಅಂದರೆ ಸಂಸ್ಕೃತ ಪ್ರಾಕೃತಗಳು ತಮ್ಮ ಪ್ರಾಚೀನ ಪ್ರಭಾವವನ್ನು ಕನ್ನಡದ ಮೇಲೆ ಬೀರುವ ಸಂಗತಿ ಕನ್ನಡಕ್ಕೆ ಸಮಸ್ಯೆಯಾಗಬಹುದೆ? ಎಂಬ ಚಿಂತನೆ ಮತ್ತು ಕಳಕಳಿ ಆಂಡಯ್ಯನಲ್ಲಿ ಸವಾಲಾಗಿ ಕೆಲಸಮಾಡಿದ್ದು ಉಲ್ಲೇಖನೀಯ.

ಆಂಡಯ್ಯನ 'ಕಬ್ಬಿಗರ ಕಾವ' ಹತ್ತು-ಹಲವು ಸಾಂಸ್ಕೃತಿಕ, ದೇಸೀ ಅಭಿಮಾನದ ಕಾರಣಕ್ಕೆ ತುಂಬಾ ಮುಖ್ಯವಾಗುತ್ತದೆ. ಸಂಸ್ಕೃತ ಪ್ರಭಾವದಿಂದ ಬಿಡಿಸಿಕೊಳ್ಳುವ ಪ್ರಯತ್ನ ಮೊದಲಿನದ್ದು. ವಸ್ತುವನ್ನು ಸಂಸ್ಕೃತದಿಂದಲೇ ತಂದರೂ ಅದನ್ನು ಕನ್ನಡನಾಡಿನದನ್ನಾಗಿಸುವ ತಂತ್ರ ಮತ್ತೂ ಮುಖ್ಯವಾಗಿ ಪಾತ್ರಗಳನ್ನೆ ಕನ್ನಡೀಕರಣಗೊಳಿಸುವ ಕುಶಲತೆ ಆಂಡಯ್ಯನ ಭಾಷಾ ಬದ್ಧತೆಯನ್ನು ನಿಖರಗೊಳಿಸಿದೆ. ಆ ಹೊತ್ತಿನ ಸಮಕಾಲೀನ ಸಂದರ್ಭದ ಆದರ್ಶ, ಚಿಂತನೆ, ಮೌಲ್ಯಗಳೇ ಮೊದಲಾದವುಗಳ ಬಗೆಗೊಂದು ವಿವರನೋಟ ಇಡೀ ಕಾವ್ಯದ ಬೆಲೆಯನ್ನು ಮತ್ತಷ್ಟು ಹೆಚ್ಚಿಸಿದೆ. ಕಾವ್ಯ, ಧರ್ಮಗಳನ್ನು ಮೀರಿಯೂ ಆಂಡಯ್ಯ ಕನ್ನಡ ಪರವಾದ ಕಳಕಳಿಯನ್ನು ಹೊಂದುವುದು ಎಲ್ಲಾ ಕಾಲಕ್ಕೂ ಎಲ್ಲರಿಗೂ ಅನುಕರಣೀಯ.

ಪಂಪ, ರನ್ನರೇ ಮೊದಲಾದ ಹಲವು ಶ್ರೇಷ್ಠ ಕವಿಗಳು ಮಾರ್ಗ ಸಾಹಿತ್ಯವನ್ನೇ ರಚಿಸಿ ಅದನ್ನೇ 'ಮಹಾಮಾರ್ಗ' ಮಾಡಿದ್ದ ಹೊತ್ತಿಗೂ ನಯಸೇನ, ಆಂಡಯ್ಯನಂತಹ ಕವಿಗಳು ಸ್ವಂತಿಕೆಯನ್ನೆ ಕಾಯ್ದುಕೊಳ್ಳುವ ರೂಪವಾಗಿ ಕನ್ನಡವನ್ನೇ ಪ್ರಧಾನಧಾರೆಯಲ್ಲಿಟ್ಟು ಚಿಂತಿಸುವ ಯತ್ನ ಮಾಡಿದ್ದು ಮತ್ತು ಅದು ಸಾರ್ಥಕ ಯಶಸ್ಸಿನ ರೂಪವಾಗಿಯೂ ಕಂಡದ್ದು ಗಮನಾರ್ಹ. ಇದು ಮುಂದಿನವರಲ್ಲಿಯೂ ಅರಿವು-ಎಚ್ಚರವನ್ನು ಉಂಟು ಮಾಡಿತೆಂದರೆ ಉತ್ಪ್ರೇಕ್ಷೆಯಲ್ಲ.

ಕನ್ನಡ ಎನ್ನುವ ಭಾಷೆ ಸಂಸ್ಕೃತ ಮೂಲದ್ದು ಎನ್ನುವ ವಾದ ಆರಂಭದ ಕಾಲಕ್ಕಿದ್ದದ್ದಾದರೂ ಸಹಜವೇ ಆಗಿತ್ತು, ಅಕ್ಷರ ಮಟ್ಟಿನ ಪ್ರಭಾವವೂ ಕನ್ನಡದ ಮೇಲೆ ಸಂಸ್ಕೃತದ್ದಾಗಿತ್ತು. ಕನ್ನಡದ ಮೊದಲ ಶಾಸ್ತ್ರಕಾರರು, ವ್ಯಾಕರಣಕಾರರು, ಕವಿಗಳೂ ಹೀಗೆ ಭಾವಿಸಿದ್ದಾಗಿತ್ತು. ಸಂಸ್ಕೃತದ ಪ್ರಭಾವವೇ ಪುಣ್ಯವೆನ್ನುವ ಅತೀ ರಂಜಿತಭಾವವೂ ಆ ಹೊತ್ತಿನಲ್ಲಿತ್ತು. ಇಂತಹ ಹಲವು ಭ್ರಮೆಗಳು ಸಂಸ್ಕೃತವನ್ನು 'ದೇವರಭಾಷೆ' ಎಂದೂ ಉನ್ನತಿಗೇರಿಸಲು ಸಾಧ್ಯವಾಗಿತ್ತು. ಇಂದಿನ ಅರಿವಿನ ಯುಗ ದಲ್ಲಿಯೂ ಇದು ಸಂಪೂರ್ಣವಾಗಿ ಅಳಿದುಹೋಗಿದೆ ಎಂದು ಭಾವಿಸಲಾ ಗುವುದಿಲ್ಲ. ಆದರೆ ಕನ್ನಡವು ಆ ಹೊತ್ತಿಗೆ ಇತರ ಭಾಷೆಗಳಂತೆ ಸಂಸ್ಕೃತದಿಂದ ಅಪಾರವಾದುದನ್ನು ಪಡೆದುಕೊಂಡಿತೆನ್ನುವುದನ್ನು ಯಾರೂ, ಯಾವ ಕಾರಣಕ್ಕೂ ಅಲ್ಲಗಳೆಯಲಾಗದು.

ಇಲ್ಲಿ ಕನ್ನಡ ತನ್ನತನವನ್ನೇ ಕಳೆದುಕೊಳ್ಳಬಹುದಾದ ಅಪಾಯವೂ ಇತ್ತು ಅದು ಮತ್ತೆ ಸಂಸ್ಕೃತ ಭಾಷೆಯ ಗಾಢ ಪ್ರಭಾವವನ್ನೂ ಅದರ ಬಗೆಗಿನ ಪಾಂಡಿತ್ಯಪರ ನಂಬಿಕೆಯ ನೆಲೆಗಳನ್ನು ಧ್ವನಿಸುವಂತಹುದು. ಆದರೆ ಕನ್ನಡತನ ಉಳಿದು-ಬೆಳೆಯಿತು, 'ಜೀವಂತಭಾಷೆಯ' ಅರ್ಥಕ್ಕೆ ಸಂವಾದಿಯಾಗಿಯೇ ಅಸ್ತಿತ್ವವನ್ನು ಜತನಮಾಡಿಕೊಂಡದ್ದು ಗಟ್ಟಿತನದ ಫಲಿತ.

ಒಂದು ಭಾಷೆ, ಸಮುದಾಯ, ನಾಡು ಎನ್ನುವುದು ಒಂದು ನಿರ್ದಿಷ್ಟ ಚೌಕಟ್ಟು ಅಥವಾ ಪರಿಮಿತಿಗಳ ಒಳಗೆ ನಿಲ್ಲಿಸಿ ಚಿಂತಿಸುವಂತಹುದಲ್ಲ. ಅದೊಂದು ಪರಂಪರೆ ಹಾಗಾಗಿ ನಿರಂತರವಾದ ಕ್ರಿಯಾಶೀಲತೆಯೆನ್ನುವುದೇ ಇಲ್ಲಿನ ಮೂಲ ಲಕ್ಷಣ. ಪಂಪನಿಂದ ಆರಂಭಗೊಂಡ ಭಾಷೆಯ ಸ್ವರೂಪ ನಿರಂತರವಾಗಿ ಪ್ರಯೋಗಶೀಲತೆಗೆ ಒಡ್ಡಿಕೊಂಡೇ ಬಂದಿದೆ. ಇದು ಜೀವಂತ ಭಾಷೆಯ ಮುಖ್ಯ ಲಕ್ಷಣವೂ ಹೌದು. ನಯಸೇನ, ಆಂಡಯ್ಯರ ಪ್ರಯತ್ನಗಳೂ ಇದರದ್ದೇ ಭಾಗ. ಇದು ಮತ್ತಷ್ಟು ಫಲಿತವಾಗಲು ಆದರ್ಶದ ಹಾದಿಯಂತೂ ತೆರೆಯಿತೆಂದೇ ಅರ್ಥ. ಮುಂದೆ ಸಾರ್ಥಕ ಎನ್ನುವಂತೆ, ಫಲಿತದ ಉತ್ಕರ್ಷವೆನ್ನುವಂತೆ ಇನ್ನೂ ಇದಕ್ಕಿಂತಲೂ ಹೆಚ್ಚು ಸಾಧ್ಯವಿತ್ತೆ? ಎನ್ನುವಂತೆ, ಒಂದು ಚಳುವಳಿಯ ರೂಪದಿಂದಲೇ ಭಾಷೆಯನ್ನು ಒಳಗೊಂಡು ಯಶಸ್ಸಿನೆಡೆಗೆ ಚಲಿಸಿದ್ದು ವಚನ ಚಳುವಳಿ.

ಸಾಮಾಜಿಕ, ರಾಜಕೀಯ, ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಎಂಬೆಲ್ಲಾ ಆಯಾಮಗಳಲ್ಲೂ ಹೊಸಬಗೆಯ ಚಿಂತನೆಗಳು ಸಾಧ್ಯವಾದದ್ದು ಸನಾತನತೆಯನ್ನು ಮೀರಿ ವರ್ತಮಾನಕ್ಕೆ ಮುಖಾಮುಖಿಯಾಗಲು ಹಂಬಲಿಸಿದ್ದು ವಚನ ಚಳುವಳಿಯ ಮುಖ್ಯ ಆಶಯವೂ ಗುರಿಯೂ ಆಗಿತ್ತು 'ವಚನ'ಗಳನ್ನೇ ಸಾಹಿತ್ಯವೆನ್ನಬೇಕೆ? ಬೇಡವೆ? ಎಂಬ ಗಂಭೀರವಾದ ಚರ್ಚೆಯೇ ನಡೆದದ್ದು 'ವಚನ'ಗಳ ವಿಶಿಷ್ಟತೆಯನ್ನು ಹೇಳುವಂತಾಗಿತ್ತು. ಅನುಭವ-ಅನುಭಾವಗಳ ನಡುವಿನ ವಿಭಿನ್ನ ಅರಿವುಗಳು 'ವ'ಚನ'ಗಳ ಸಾಂಸ್ಕೃತಿಕ ಒಳನೋಟಗಳನ್ನು ಬೇರೆಯಾಗಿಯೇ ಗ್ರಹಿಸಲು ಒತ್ತಾಯಿಸಿದಂತಿತ್ತು. ಮಧ್ಯಕಾಲೀನ ಸಾಹಿತ್ಯದ ಮೊದಲ ಹಂತವೆಂದು ಚರ್ಚಿಸುವ ವಚನ ಸಾಹಿತ್ಯದ ಸೃಜನಶೀಲತೆ ನಿಜವಾಗಿ ಹಿಂದಿನ ಹಳತು ಮತ್ತು ಮುಂದಿನ ಹೊಸತುಗಳ ನಡುವೆ ಒಂದು ಸೇತುವೆಯಂತೆ ಅನ್ವರ್ಥವಾದದ್ದು ಮಹತ್ವದ ಸಂಗತಿಯೇ ಆಗಿತ್ತು.

ಪಾಂಡಿತ್ಯ ವಿದ್ವತ್ತುಗಳಾಚೆಗೆ ಭಾಷಾಸ್ವರೂಪ ಇಡೀ ದೇಶಕ್ಕೆ ಹೊಸತು ಎನ್ನುವಂತೆ ಬಹುಜನರ ಪರವಾಗಿ, ಸರಳತೆಯಲ್ಲಿಯೂ ಸಾಹಿತ್ಯದ ರೂಪವನ್ನು ರೂಢಿಸಿಕೊಳ್ಳಲು ಪ್ರಯತ್ನಿಸಿತೆನ್ನುವುದೇ ಅನನ್ಯವಾದ ವಿಚಾರವಾಯಿತು. "ಆನು ಒಲಿದಂತೆ ಆಡುವೆನು" "ಮಾತೆಂಬುದು ಜ್ಯೋತಿರ್ಲಿಂಗ" ಎಂದೆಲ್ಲಾ ಬದುಕೇ ಅಕ್ಷರಗಳಾಗಿ ಸಾಹಿತ್ಯಿಕ ರೂಪವಾಗಿ ದಾಖಲಾಗುವ ಬದ್ಧತೆಯ ಸಂಗತಿಯಾಯ್ತು. ಮಾರ್ಗ-ದೇಸಿಯಂತಹ ಶಿಷ್ಟ ಪರಿಭಾಷೆಗಳಿಲ್ಲಿ ಮುಖ್ಯವೇ ಆಗಲಿಲ್ಲ. ಸಹಜವಾದ ಮಾತೇ ಸಾಹಿತ್ಯವಾಗುವ ತನ್ಮೂಲಕ ಅಂತ'ಹ ಪ್ರಯೋಗಕ್ಕೆ ಬಹುಜನರನ್ನು ಪ್ರಚೋದಿಸುವ, ಒಳಗೊಳ್ಳುವ ಕೆಲಸ ಸರಳವಾಗಿಯೇ ನಡೆದುಹೋಯಿತು.

ಬಹುಪಾಲು ವಚನಕಾರರು ತಾವು ಸಾಹಿತ್ಯ ಸೃಷ್ಟಿಸುತ್ತೇವೆ ಎಂದು ಹೊರಟವರಲ್ಲಿ ಸಮಾಜಕ್ಕೆ ಮುಖಾಮುಖಿಯಾದ ಅನುಭವಗಳನ್ನು ಹಾಡಿ ಕೊಂಡದ್ದೇ 'ವಚನ'ಗಳಾದವು. ಅದು ಅದುವರೆಗೂ ಅವರಿಗೆ ತಮ್ಮನ್ನು ಹೇಳಿಕೊಳ್ಳಲಾಗದ ಬಂಧನದಿಂದ ಬಿಡಿಸಿಕೊಂಡ ಸ್ವಾತಂತ್ರ್ಯದ ಸಂಭ್ರಮ ವಾಗಿತ್ತು. ತಮಗೂ ಭಾವವಿದೆ-ಭಾಷೆಯಿದೆ ಎಂಬ ಅನಿಸಿಕೆಗೆ ದೊರೆತ ಒಂದು ಮಾಧ್ಯಮವಾಗಿತ್ತು. ಏಕಕಾಲಕ್ಕೆ ನೂರಾರು ಜನ ಸಾವಿರಾರು ಜನರನ್ನು ಪ್ರತಿನಿಧಿಸುವ ಅವಕಾಶವನ್ನು ಮುಕ್ತವಾಗಿ ಬಳಸಿಕೊಂಡು ಹಗುರಾಗುವ ಅವಕಾಶವೂ ಇದಾಗಿತ್ತು. ಸಾಮಾಜಿಕ ಕ್ರಾಂತಿ, ರಾಜಕೀಯ ತಲ್ಲಣ ಎಂಬೆಲ್ಲಾ ಸಾಧ್ಯತೆಗಳಿಗೂ ಈ ಕಾಲ ಸಾಕ್ಷಿಯಾಯಿತು. ಬಸವಣ್ಣನನ್ನು ಕೇಂದ್ರೀಕರಿಸಿಕೊಂಡ ಈ ಸಮಗ್ರ ಪರಿವರ್ತನೆ ಭಾಷಿಕ ದೃಷ್ಟಿಯಿಂದಲೇ ತುಂಬಾ ಮಹತ್ವವಾದದ್ದು ಕರ್ನಾಟಕ, ಕನ್ನಡಿಗ-ಕನ್ನಡ ಎಂಬ ನೆಲೆಯಿಂದಲೇ ಮುಖ್ಯವಾದುದು.

ವಚನ ಚಳುವಳಿಯ ಕಾಲಕ್ಕೆ ಜೈನ ಸಾಹಿತ್ಯದ ಉತ್ಕರ್ಷ ಇಳಿವಿನೆಡೆಗೆ ಸಾಗುತ್ತಿತ್ತು. ಸಾಹಿತ್ಯ ಸೃಷ್ಟಿಯ ಆವೇಶವೂ ತಗ್ಗಿದಂತಿತ್ತು. ಅಂತಲ್ಲಿ ಸಹಜವಾಗಿಯೇ ಕನ್ನಡ ಭಾಷೆಯ ಪ್ರಭಾವವೂ ಕಡಿಮೆಯಾಗುವ ಅಪಾಯವಿತ್ತು. ನಾವು ಈ ಮೊದಲೇ ಗಮನಿಸಿದಂತೆ ಕನ್ನಡವನ್ನು ಪುರೋಹಿತಶಾಹಿ ಅಥವಾ ಮೇಲುವ'ರ್ಗ ಸಂಸ್ಕೃತಕ್ಕೆ ಸಮನಾಗಿ, ಪರ್ಯಾಯವಾಗಿ ನೋಡಲು ಸಿದ್ಧವಿರಲಿಲ್ಲ, ಸಾಧ್ಯವೂ ಇರಲಿಲ್ಲ. ಕಾಕತಾಳೀಯವೆಂಬಂತೆ ವಚನಕಾರರು ಆಶಾವಾದಿಗಳಾಗಿ ಕಾಣಿಸಿಕೊಂಡರು.

ಅಲ್ಲಿಯವರೆಗಿನ ಸಾಹಿತ್ಯ ಸಂದರ್ಭ ಸಂಸ್ಕೃತ ಪ್ರಭಾವ ಅಥವಾ ಒಂದಿಷ್ಟು ಶಿಷ್ಟ ನೆಲೆಯಲ್ಲೆ ಇದ್ದದ್ದನ್ನು 'ತಿಳಿಗನ್ನಡದಲ್ಲಿ' ಪ್ರಚುರಪಡಿಸುವ ಸಂಕಲ್ಪಕ್ಕೆ ಸಹಜವಾಗಿಯೇ ಬದ್ಧರಾದವರು ವಚನಕಾರರು. ಬಸವಣ್ಣ ನಂತಹ ಬಹುಭಾಷೆಬಲ್ಲ ಮಾರ್ಗ ಸಾಹಿತ್ಯದ ಶಕ್ತಿಯೂ ಇದ್ದ ವ್ಯಕ್ತಿ ಸರಳವಾದ ಕನ್ನಡದಲ್ಲಿ ಇಡೀ ಸಮಾಜ ಮತ್ತು ಬದುಕನ್ನು ಕಟ್ಟಬಯಸಿದ್ದು ಸಾಮಾನ್ಯ ಸಂಗತಿಯಾಗಿರಲಿಲ್ಲ. ಅದು ಒಂದು ತಪಸ್ಸಿನಂತಹ ಹಠವೇ ಸರಿ. ಅದರ ಫಲಿತವಂತೂ ಕಣ್ಣೆದುರೇ ಇದೆ. ಅನುಭವ ಮಂಟಪದ ಪರಿಕಲ್ಪನೆಯಲ್ಲಿ ಏಕಕಾಲಕ್ಕೆ ನೂರಾರು ಜನರು ವಚನಕಾರರಾದರು. ತಮ್ಮ ಸಾಚಾ ಬದುಕಿನ ಅನಾವರಣದ ಮೂಲಕ ಬಹುಜನರ ಬದುಕನ್ನು ಪ್ರತಿಫಲಿಸುವ ಪ್ರತಿನಿಧಿಗಳಾದರು. ಸಹಜವಾಗಿಯೇ ಸಾಕಷ್ಟು ಜನರನ್ನು ಚಿಂತನೆಗಳು ತಲುಪುವಂತಾಯ್ತು. ಅಲ್ಲಿಯವರೆಗೆ ಮೂಕವಾದಂತೆ 'ಶಿಷ್ಟ'ರ ಪ್ರಜ್ಞೆಯನ್ನು ಗಮನಿಸುತ್ತಿದ್ದ ಜನ ಅರ್ಥೈಸಿಕೊಂಡು ತಾವೂ ಪ್ರತಿಕ್ರಿಯಿಸುವ ಮಟ್ಟಕ್ಕೆ ತಲುಪಿದರು. ಇಲ್ಲಿ ಬಹುಮುಖ್ಯವಾಗಿ ಚರ್ಚಿಸಬೇಕಾದ ಸಂಗ'ತಿಯೊಂದಿದೆ. ಅದು 'ಸಾಹಿತ್ಯ'ದ ಮಿತಿ-ವ್ಯಾಪ್ತಿಯ ನೆಲೆಗಳನ್ನು ಕುರಿತಂತ'ದ್ದು. ಪ್ರಾಚೀನ ಸಾಹಿತ್ಯದ ರಚನೆಯ-ಅಭಿವ್ಯಕ್ತಿಯ ಮೂಲ ನೆಲೆಗಳು ಸಾಮಾನ್ಯವಾಗಿ ಅರಮನೆ ಮತ್ತು ಗುರುಕುಲವನ್ನು ಪ್ರತಿನಿಧಿ ಸುತ್ತಿದ್ದವು. ವಿದ್ವತ್ತು ಮತ್ತು

ರಾಜಾಶ್ರಯವೆನ್ನುವುದು ಪರಸ್ಪರ ಪೂರಕ ವಿಚಾರಗಳಾಗಿದ್ದಿತು. ತನ್ಮೂಲಕ ಒಂದು ವರ್ಗದ, ಕುಲದ ಸ್ವತ್ತಾಗಿಯೂ ಸಾಹಿತ್ಯ ನಿರ್ಬಂಧಿಸಲ್ಪಟ್ಟಿತೆಂದೇ ಹೇಳಬಹುದಾದ ಭ್ರಮೆಯನ್ನು ವಚನಕಾರರು ಊಹಿಸಲಾಗದಷ್ಟು ತೀವ್ರವಾಗಿ ಒಡೆದುಹಾಕಿದರು.

ಕಾವ್ಯವೆನ್ನುವುದು ಯಾರೊಬ್ಬರ ಸ್ವತ್ತಲ್ಲ ಹಾಗೆ ಅನುಭವವೂ ಯಾರ ಆಸ್ತಿಯಲ್ಲ ಎನ್ನುವುದನ್ನು ವಚನಕಾರರು ತಮ್ಮ ಬದುಕಿನ ಮೂಲಕ ಸಾಧಿಸಿಯೇ ತೋರಿಸಿದರು. ರಾಜಾಶ್ರ'ಯದ ಹಿಡಿತದಿಂದ ಸಾಹಿತ್ಯವನ್ನು ತಪ್ಪಿಸುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮುನ್ನುಡಿ ಬರೆದರೆಂದೇ ಹೇಳಬಹುದು. ಜನರನ್ನು ಮುಟ್ಟುವ ಬಿಡಿ-ಬಿಡಿ ರಚನೆಗಳ ಮೂಲಕ ಸಾಹಿತ್ಯದ ಸಾರ-ಸತ್ವದ ಅರ್ಥವನ್ನು ಮನಗಾಣಿಸಲು ಯತ್ನಿಸಿದರು.

ದೇವಭಾಷೆ ಎಂದುಕೊಂಡು ಒಂದು ವರ್ಗಕ್ಕೆ, ಸಮುದಾಯಕ್ಕೆ ಮೀಸಲುಗೊಂಡಂತಿದ್ದ ಮಡಿವಂತಿಕೆಯನ್ನೇ ಈ ನೆಲದ ಭಾಷೆಯಾದ ಕನ್ನಡವು ಮುರಿಯಿತೆನ್ನುವುದು ಗಮನಾರ್ಹ. ತನ್ಮೂಲಕ ಸಂಸ್ಕೃತಕ್ಕಿಂತ ಹೆಚ್ಚಿನ ವ್ಯಾಪಕತೆಯೊಂದಿಗೆ ಅಪಾರವಾದುದನ್ನು ಮಣ್ಣಿನ ಭಾಷೆಯಾದ ಕನ್ನಡ ಸಾಧಿಸಿತು. ಸಹಜವಾಗಿಯೇ 'ತಮ್ಮದು' ಎನ್ನುವ ಅಭಿಮಾನದಿಂದ, ಪ್ರೀತಿಯಿಂದ ಜನರು ಈ ಸಾಹಿತ್ಯವನ್ನು ಆಸ್ವಾದಿಸಿ ಹೆಮ್ಮೆಪಟ್ಟರು. ಶಿ.ಶಿ.ಬಸವನಾಳರು ಹೇಳುವ ಮಾತನ್ನಿಲ್ಲಿ ಪೂರಕವಾಗಿ ಉಲ್ಲೇಖಿಸ ಬಹುದು "ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ಕನ್ನಡ ವೀರಶೈವ ವಚನಕಾರರದು". ಪವಾಡವೆನ್ನುವ ಮಾತೇ ಇಲ್ಲಿ ಮುಖ್ಯ ಅಂದ'ರೆ ಇದು ಅಂದಿನ ಸವಾಲನ್ನೆ ಕುರಿತು ಹೇಳುತ್ತದೆ. ಕನ್ನಡ ಅದನ್ನು ಯಶಸ್ವಿಯಾಗಿ ದಾಖಲಿಸಿತೆನ್ನುವುದೇ ಭಾಷೆಯ ಗಟ್ಟಿತನವನ್ನು ಹೇಳುತ್ತಿದೆ. ಸವಾಲು ಎನ್ನುವುದು ಯಾವುದೇ ಒಂದು ನಿರ್ದಿಷ್ಟ ಕಾಲದ ಮಿತಿಯಲ್ಲ, ವ್ಯಾಪ್ತಿಯೂ ಅಲ್ಲ ನಿರಂತರ ಜೀವಂತಿಕೆಯ, ಯಾವುದೇ ಕ್ರಿಯಾಶೀಲ ವ್ಯವಸ್ಥೆಯ ಸಂದರ್ಭದಲ್ಲಾದ'ರೂ ಹೀಗೆ ಸಾಂಸ್ಕೃತಿಕ ಸವಾಲುಗಳ ಪರಿಸ್ಥಿತಿ ಸಹಜವೆನ್ನುವಂತೆ ಉಂಟಾಗುತ್ತದೆ ಅಂತಲ್ಲೆಲ್ಲಾ ಸೃಜನಶೀಲವಾದ ಭಾಷೆ ತನ್ನತನವನ್ನು ಉಳಿಸಿಕೊಳ್ಳುವಲ್ಲಿ ಹೋರಾಟವನ್ನೇ ನಡೆಸಬೇಕಾದ ಅನಿವಾರ್ಯತೆಯನ್ನು ಎದುರಿಸಿದೆ, ಯಶಸ್ವಿಯೂ ಆಗಿದೆ ಇದು ಇತಿಹಾಸ. ವಚನಕಾಲದಿಂದ ಮುಂದೆ ದಾಸಸಾಹಿತ್ಯದ ಮುಖ್ಯ ರೂಪವಾದ ಕೀರ್ತನೆಯಲ್ಲಿಯೂ 'ಜನವಾಣಿ'ಯ ಸ್ವರೂಪವೇ ಪ್ರಧಾನವಾಯಿತೆನ್ನು ವುದು ಗಮನಾರ್ಹ. ಸಂಸ್ಕೃತ ಪ್ರಭಾವದ ಶಿಷ್ಟ ಸಾಹಿತ್ಯದ ಅಧ್ಯಯನ ಅರಿವಿನ ಹಿನ್ನೆಲೆಯಿದ್ದಾಗ್ಯೂ ಕೀರ್ತನೆಕಾರರಿಗೆ, ದಾಸರಿಗೆ ಸರಳ ಕನ್ನಡವೆನ್ನುವುದು ಜನರನ್ನು ತಲುಪಲೇಬೇಕಾದ ಅನಿವಾರ್ಯತೆಯೂ ಆಗಿತ್ತು. ಈ ಮಧ್ಯ ಕನ್ನಡ ಕವಿಗಳು ದೇಸೀ ಛಂದಸ್ಸಿನಲ್ಲಿ ಕಾವ್ಯರಚಿಸಿದ್ದು, ಅದು ಹಾಡುಗಬ್ಬದ ರೂಪದಲ್ಲಿ ಜನರ ನಾಲಗೆಗಳ ಮೇಲೆ ನಲಿದದ್ದು ಕನ್ನಡ ಭಾಷೆಯ ಅಸ್ತಿತ್ವ, ಉಳಿವು-ಬೆಳವಿನ ರೂಪವೇ ಆಗಿತ್ತು. ಸಾಕಷ್ಟು ಎನ್ನುವಂತೆ ಸ್ವಂತಿಕೆಯ ಕಾವ್ಯ ಪರಂಪರೆಯೇ ನಮ್ಮಲ್ಲಿ ಕಾಣಿಸಿಕೊಂಡು ಮಧ್ಯಕಾಲೀನ ಸಾಹಿತ್ಯ ಸಂದರ್ಭವೇ ವಿಶಿಷ್ಟವಾದ ಕನ್ನಡದ ಶ್ರೇಷ್ಠ ದಾಖಲೆಯನ್ನೆ ತನ್ನೊಳಗಿಟ್ಟುಕೊಂಡಿತೆನ್ನಬಹುದು. ಇದು ಕವಿ-ಕಾವ್ಯ-ಸಹೃದಯ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವ, ತನ್ಮೂಲಕ ಶ್ರೀಸಾಮಾನ್ಯರೂ ಮುಖ್ಯವಾಹಿನಿಯಲ್ಲಿ ನಿಂತು ತನ್ನ ಭಾಷಾ ಸಮೃದ್ಧತೆಗೆ ಹೆಮ್ಮೆಪಡುವ, ಸಾಹಿತ್ಯವನ್ನು ಅರ್ಥೈಸಿಕೊಂಡು, ಓದಿಯೋ ಕೇಳಿಯೋ ಆಸ್ವಾದಿಸುವ ಅನುಭವ ವೈವಿಧ್ಯತೆಯೂ ಸುಲಭ ಸಾಧ್ಯವಾಯಿತು. ಇಂತಹದ್ದೊಂದು ಸ್ಥಿತಿ ಯಾವುದೇ ಸಾಹಿತ್ಯ ಸಂಸ್ಕೃತಿಯ ಸಂದರ್ಭ ಕ್ಕಾದರೂ ಐತಿಹಾಸಿಕ ದಾಖಲೆಯೇ ಹೌದು. ಅಂದರೆ ಆ ಹೊತ್ತಿಗೆ ಎಲ್ಲವೂ ಸೊಗ'ಸಾಗಿತ್ತು.

ಮತ್ತೆ ಸಮಸ್ಯೆ ಎನ್ನುವುದು ಆರಂಭವಾದ ಕಾಲ 'ಹೊಸಗನ್ನಡದ ಕಾಲ'. ಅಂದ'ರೆ ಪ್ರತೀ ಘಟ್ಟದ ಆರಂಭವೂ ಹೀಗೆ ಸಮಸ್ಯೆಗಳನ್ನೇ ಎದುರಿಸಿರಬಹುದೆ? ಎನಿಸುವುದಕ್ಕೆ ಕಾರಣಗಳಿವೆ ಅದೊಂದು ಪರಿವರ್ತನೆಯ ಘಟ್ಟವೂ ಆಗಿರುತ್ತದೆ. ಆದರೆ ಆಧುನಿಕ ಭಾರತದ ಸಂದರ್ಭಕ್ಕೆ ಹಿನ್ನೆಲೆ-ಆಯಾಮಗಳೇ ಬೇರೆಯಾಗಿದ್ದವು. ವಸಾಹತು ಶಾಹಿಯ ಆಳ್ವಿಕೆಯಲ್ಲಿ ಭಾರತವನ್ನು ಪ್ರಭಾವಿಸಿದ ಇಂಗ್ಲೆಂಡ್ ಮತ್ತು ಇಂಗ್ಲಿಷ್ ನಮ್ಮ ದೇಶೀಯ ಬದುಕು, ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೇಲೂ 'ಒತ್ತಡ'ವಾಗಿಯೇ ಕಾಣಿಸಿಕೊಂಡಿತು, ಈ ಹಿಂದೆ ಇತರ ಭಾಷೆಗಳು ಉಂಟುಮಾಡಿರದಷ್ಟು ತೊಡಕುಗಳನ್ನು, ಸವಾಲುಗಳನ್ನು ಇಂಗ್ಲಿಷ್ ಸೃಷ್ಟಿಸಿತು. ಪರಕೀಯರ ಆಕ್ರಮಣಶೀಲತೆಯೇ ಆಡಳಿತದ ಯಜಮಾನಿಕೆಯನ್ನೆ ಅವರಿಗೆ ತಂದುಕೊಟ್ಟಾಗ ದೇಶೀಯತೆಯ ಕಲ್ಪನೆ ಹೊಸ ಬಗೆಯ ಸವಾಲುಗಳನ್ನು ಎದುರಿಸಿತು. ಆರಂಭಕ್ಕೆ ಧರ್ಮ ಪ್ರಸಾರದ ಉದ್ದೇಶ ಅವರಿಗಿದ್ದದ್ದರಿಂದ ದೇಶೀ ಭಾಷೆಗಳನ್ನೇ ಕಲಿಯುವಲ್ಲಿ ಅವರು ತೋರಿದ ಉತ್ಸಾಹ, ನಿಷ್ಠೆ ವಿಶಿಷ್ಟವಾಗಿದ್ದವು

ಮತ್ತು ಅವರಿಗೆ ಅದು ಪ್ರಾಮಾಣಿಕ ಕಲಿಕೆಯ ರೂಪವೂ ಆಗಿತ್ತು. ಅದರಿಂದ ಅವರು ಸಾಧಿಸಿದ್ದು ಸಾಮಾನ್ಯವಲ್ಲ, ಧರ್ಮ-ರಾಜಕಾರಣದ ಗಾಢ ವಾಸನೆಯೂ ಅದರ ಹಿನ್ನೆಲೆಗಿತ್ತು. ಇದು ಒಂದಷ್ಟು ಲಾಭವನ್ನು ದೇಸೀಭಾಷೆಗಳ ಸಂದರ್ಭದಲ್ಲಿ ಉಂಟುಮಾಡಿದ್ದನ್ನು ನಾವು ಅಲ್ಲಗಳೆಯುವಂತಿಲ್ಲ.

ರಾಜಕೀಯ-ಸಾಮಾಜಿಕ ಬದುಕುಗಳ ಮೇಲೆ ಗಾಢವಾದ ಪ್ರಭಾವ ವಸಾಹತುಶಾಹಿಯಿಂದಾಯಿತು. ಸಾಮಾನ್ಯ ಜನರ ಬದುಕಿನಲ್ಲಿ ಅದರ ಸ್ಪಷ್ಟವಾದ ನೆರಳು ಕಾಣುತ್ತದೆ. ಅಲ್ಲಿಯವರೆಗೆ ಒಳನಾಡಿನಲ್ಲಿ ಅಧಿಕಾರಕ್ಕಾಗಿ ನಡೆದ ಅವೆಷ್ಟೋ ದೇಶಿ ರಾಜರ ಯುದ್ಧಗಳು ಅವರ ವಿಭಿನ್ನವಾದ ಮನೋಭಾವಗಳು, ಆಡಳಿತ ರೀತಿ-ನೀತಿಗಳು ಜನರನ್ನು ತುಂಬಾ ಸಹಜವಾಗಿ ನೆಮ್ಮದಿಯಂದೆ ಬಹುಕಾಲ ಬದುಕುವ ಅವಕಾಶ ವನ್ನಂತು ನೀಡಿರಲಿಲ್ಲ ಆದ'ರೆ ಕ್ರಮೇಣ ಏಕಚಕ್ರಾಧಿಪತ್ಯದತ್ತ ಚಲಿಸಿದ ಬ್ರಿಟಿಷ್ ಆಡಳಿತ ಜನಸಾಮಾನ್ಯರಿಗೆ ದಾಸ್ಯದಸ್ಥಿತಿ ನಿರ್ಮಿಸಿದರೂ ಒಂದಿಷ್ಟು ನೆಮ್ಮದಿ ಒದಗಿಸಿದ್ದಂತೂ ಸುಳ್ಳಲ್ಲ. ಆಧುನಿಕತೆಯ ಜಗತ್ತಿನ, ಸೌಲಭ್ಯದ ಸಾಧ್ಯತೆಯ ಅನುಭವ-ಅವಕಾಶಗಳು ತೆರೆದುಕೊಂಡ'ವು.

ಜ್ಞಾನದ-ವಿದ್ಯೆಯ ಮಾರ್ಗ ನಮ್ಮಲ್ಲಿ ಆ ಹೊತ್ತಿಗಿದ್ದ ಸಾಂಪ್ರದಾಯಿಕ ನಂಬಿಕೆ, ಭ್ರಮೆಗಳನ್ನು ಮೀರಿ ಒಂದಿಷ್ಟು ಮುಕ್ತತೆಯೆಡೆಗೆ ಚಲಿಸಿದ್ದು ಗಮನಾರ್ಹ. ಶಿಕ್ಷಣ ಕ್ರಮದಲ್ಲಾದ ಬದಲಾವಣೆ ಕ್ರಾಂತಿಕಾರಕ ವಾದುದು. ಅದು ಸಾಮಾನ್ಯನಿಗೆ ಅಸಾಮಾನ್ಯತೆಯೆಡೆಗೆ ಚಲಿಸಲು ನೀಡಿದ ಮಾಧ್ಯಮವಾಗಿತ್ತು. ಇದು ಕ್ರಮೇಣ ಇಂಗ್ಲಿಷ್ ಭಾಷೆ ಕಲಿಸುವ ನೆಲೆಯಾದದ್ದು ಇಂಗ್ಲಿಷ್‌ನ್ನು ಆಧುನಿಕ ಜ್ಞಾನದ ಬಾಗಿಲು ಎಂದು ಪರಿಭಾವಿಸುವಷ್ಟು ಗಾಢವಾದ ಪ್ರಭಾವವನ್ನು ಸೃಷ್ಟಿಸಿತು. ಆ ಭ್ರಮೆ ಈ ಹೊತ್ತಿಗೂ ಭೂತಾಕಾರವಾಗಿ ಬೆಳೆದುನಿಂತು ಸಮಸ್ಯೆಯಾದದ್ದು ಮಾತ್ರ ವಿಪರ್ಯಾಸ. ಇಂಗ್ಲಿಷ್ ಕಲಿತವರು ಅಷ್ಟೋ ಇಷ್ಟೋ ಅರಿತವರು 'ಕನ್ನಡದಲ್ಲೇನಿದೆ' ಎನ್ನುವಂತೆ ಪರಮ ಧಾರ್ಷ್ಟ್ಯದ ಪ್ರಶ್ನೆ ಎತ್ತಿದ್ದು ನಮ್ಮ ನಡುವಿನ ದೊಡ್ಡ ದುರಂತವೇ ಆಗಿತ್ತು ಎನ್ನಬಹುದು.

'ಕನ್ನಡದ ಕಣ್ವ' ಎನಿಸಿಕೊಂಡಿದ್ದ ಬಿ.ಎಂ.ಶ್ರೀ. ಅವರು ಇಂಗ್ಲಿಷ್‌ನಲ್ಲಿ ಪಾಂಡಿತ್ಯ ಸಂಪಾದಿಸಿದ್ದರೂ 'ಕನ್ನಡ'ದ ಬಗೆಗಿನ ಬದ್ಧತೆಯಿಂದ "ಅದರಲ್ಲೇನಿದೆ?" ಎಂಬ ಪ್ರಶ್ನೆಗೆ ತುಂಬಾ ಖಚಿತವಾಗಿ, ಸ್ವಾಭಿಮಾನದ ರೂಪದಿಂದಲೇ ಉತ್ತರಿಸಲು ಪ್ರಯತ್ನಿಸಿದ್ದು ಐತಿಹಾಸಿಕ ಸಂಗತಿ. ಪರಸ್ಪರ ಪಡೆದು-ನೀಡಿ ಬೆಳೆಯಬಹುದಾದ ಸಾಧ್ಯತೆಯ ಬಗೆಗೆ ಚಿಂತಿಸಿ ಇಂಗ್ಲಿಷ್-ಕನ್ನಡದ ಸಂಬಂಧವನ್ನು ರೂಪಿಸಿಕೊಳ್ಳಬಹುದಾದ ಸಮನ್ವಯದ ಹಾದಿಯೆನ್ನವರು ತೆರೆದರು. ಹಾಗಿರುವಾಗ್ಯೂ ಕನ್ನಡವೇ ನೆಲದ ಭಾಷೆಯಾಗಿ, ಬದುಕಿನ ಭಾಷೆಯಾಗಿ ಸಂವಹನದ ರೂಪವೂ ಆಗಿರಲೇಬೇಕಿದ್ದ ಸತ್ಯವನ್ನು ಅವರು ಬಹಳ ಸ್ಪಷ್ಟವಾಗಿಯೇ ಪ್ರತಿಪಾದಿ ಸಿದರು. ಇದು ಒಂದು ಸಾಂಸ್ಕೃತಿಕ ಚಳುವಳಿಯಾಗಿಯೇ ನಿರಂತರತೆ ಯನ್ನು ಕಾಯ್ದುಕೊಂಡದ್ದು ಈ ಹೊತ್ತಿಗೂ ಸೂಕ್ಷ್ಮವಾಗಿ ಗಮನಿಸಬಹುದು. ಕುವೆಂಪು ಅವರಂತಹ ಮಹಾಕವಿಯು ತಮ್ಮ ಮೊದಲ ಸಾಹಿತ್ಯ ಸೃಷ್ಟಿಗೆ ಇಂಗ್ಲಿಷ್‌ನ್ನು ಆಯ್ಕೆಮಾಡಿಕೊಂಡದ್ದನ್ನಿಲ್ಲಿ ಸ್ಮರಿಸಬಹುದು. ಅವರು ಆ ಪ್ರಭಾವದಿಂದ ಹೊರಬಂದದ್ದು ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆ ಎಷ್ಟೆಲ್ಲ ಲಾಭವಾಯ್ತು ಎನ್ನುವ ಅರಿವೇ 'ಕನ್ನಡ ಭಾಷೆ'ಯ ಶ್ರೇಷ್ಠತೆಯನ್ನು ಎತ್ತಿಹಿಡಿಯುವಂತಹುದು. ಕುವೆಂಪು ಮಹಾಕವಿಯಾಗಿ ನಮ್ಮ ನಾಡಿನ ಸಾಂಸ್ಕೃತಿಕ ರಾಯಭಾರಿಯಾದದ್ದೇ ಒಂದು ಮಹಾ ಬದ್ಧತೆಯ ಸಂಕೇತ.

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿಯೂ ಕನ್ನಡದ ಸಾಹಿತ್ಯ ಹಾಡಾಗಿ, ಕಾವ್ಯವಾಗಿ, ನಾಟಕವಾಗಿ, ಕಾದಂಬರಿಗಳಾಗಿ ಹೇಗೆಲ್ಲಾ ಹೋರಾಟದ ಕಿಚ್ಚು ಹಚ್ಚಿತೆನ್ನುವುದು ಈಗ ಇತಿಹಾಸ. ಅಂದರೆ ಒಂದು ಜೀವಂತ ಭಾಷೆಯು ಜನರ ಬದುಕೇ ಆಗುವ ಕ್ರಮದ ಅವಲೋಕನವನ್ನು ನಾವಿಲ್ಲಿ ನಡೆಸಿದ್ದಾಗಿದೆ. ನಾವು ಆರಂಭದಲ್ಲಿ ಗಮನಿಸಿದಂತೆ ಪ್ರತೀ ಸಂಸ್ಕೃತಿಯು ಒಂದಲ್ಲ ಒಂದು ಕಾಲ ಸಂದರ್ಭದಲ್ಲಿ ತೊಡಕುಗಳನ್ನು, ಸಮಸ್ಯೆಯನ್ನು ಎದುರಿಸಿದ್ದಿದೆ. ಅದು ಕನ್ನಡದ ಸಂದರ್ಭದಲ್ಲಿಯೂ ಆಗಾಗ ಕಾಡಿದ್ದಿದೆ', ಕೆಲವು ನಮ್ಮೆದುರಿನ' ಸಾರ್ವತ್ರಿಕ ಸಮಸ್ಯೆಗಳಾಗಿಯೂ ಸವಾಲಾಗಿಯೂ ನಿರಂತರವಾಗಿರುವುದುಂಟು ಇದನ್ನೆಲ್ಲಾ ಗೆದ್ದು ನಿಲ್ಲಬೇಕಿರುವುದೇ ನಮ್ಮ ಈ ಹೊತ್ತಿನ ತುರ್ತು. ಆ ಕೆಲವು ಸಮಸ್ಯೆಗಳನ್ನೆ ಮುಂದೆ ಗಮನಿಸಬಹುದು.

## ಅಧಿಕೃತ ಭಾಷೆಯಾಗಿ ಕನ್ನಡ

ಕರ್ನಾಟಕವೆನ್ನುವುದು ಸ್ವತಂತ್ರ ಭಾರತದ ಸಂಯುಕ್ತ ರಾಜ್ಯಗಳಲ್ಲಿ ಒಂದು ಸ್ವತಂತ್ರ ಅಸ್ತಿತ್ವವಿರುವ ನಾಡು. ಇದಕ್ಕೆ ನಿರ್ದಿಷ್ಟಪಡಿಸಿದ ಭೌಗೋಳಿಕ ಹಿನ್ನೆಲೆಯಿದೆ. ಅಲ್ಲಿನ ಜನರ ವ್ಯಾಪ್ತಿಯಿದೆ. ಕನ್ನಡ ನಾಡಿನದ್ದು ಎಂದು ಗುರುತಿಸುವ ಸಂಸ್ಕೃತಿ–ಆಚರಣೆಗಳಿವೆ. ಮುಖ್ಯವಾಗಿ ಕನ್ನಡವನ್ನು ಅಧಿಕೃತಭಾಷೆ ಎಂದು ಗುರುತಿಸಲಾಗಿದೆ. ಅಂದರೆ ಕನ್ನಡ–ಕರ್ನಾಟಕ ಕನ್ನಡಿಗರು ಎನ್ನುವುದು ತತ್ವದಂತೆಯೂ ಸೂತ್ರದಂತೆಯೂ ಸತ್ಯದಂತೆಯೂ ಪರಿಪಾಲಿಸಲ್ಪಡಬೇಕು. ಇದು ಎಷ್ಟರಮಟ್ಟಿಗೆ ಸಾಧ್ಯವಾಗಿದೆ, ಸಹಜವಾಗಿದೆ ಎಂಬ ನಮ್ಮ ನಿರೀಕ್ಷೆಯಲ್ಲಿಯೇ ಒಂದಷ್ಟು ಸಮಸ್ಯೆಗಳು, ಸವಾಲುಗಳೂ ಇರುವುದು ವಿಪರ್ಯಾಸ.

'ಕರ್ನಾಟಕದಲ್ಲಿ ಕನ್ನಡವೇ ಕಡ್ಡಾಯ' ಎನ್ನುವಂತಾಗಲು ಈ ನಾಡಿನಲ್ಲಿ ಒಂದು ದೊಡ್ಡ ಹೋರಾಟವೇ ನಡೆದದ್ದು ಈಗ ಇತಿಹಾಸ. 'ಗೋಕಾಕ್ ಚಳುವಳಿ'ಯ ಹೆಸರಿನಲ್ಲಿ ಆರಂಭಗೊಂಡ ಕನ್ನಡಪರ ಚಳುವಳಿಯೊಂದು ಇಡೀ ಕರ್ನಾಟಕವನ್ನು ಆವರಿಸಿಕೊಂಡು ಸಂಘಟನೆಯ ರೂಪದಿಂದಲೇ ಸರ್ಕಾರವನ್ನು ಮಣಿಸಿದ್ದು ಈಗ ವಿಶಿಷ್ಟ ನೆನಪೂ ಹೌದು. ಆದರೆ ಇದೊಂದು ಜಾಗೃತಿಯಾದದ್ದು ಈ ಹೊತ್ತಿಗೂ ಒಂದು ಉತ್ಸಾಹದ ಮಾದರಿಯಾಗಿರುವುದೇ ಕನ್ನಡಭಾಷೆಯ ನಾಡಿನಜನರ ಅಸ್ತಿತ್ವದ ಅರ್ಥವನ್ನು ಹೆಚ್ಚೆಚ್ಚು ದೃಢಪಡಿಸುವಂತಹುದು. ಇಷ್ಟೆಲ್ಲದರ ನಡುವೆ ನಮ್ಮದೇ ನಾಡಿನಲ್ಲಿ ನಮ್ಮ ಭಾಷೆಯ ಅಸ್ತಿತ್ವಕ್ಕೆ ನಾವೇ ಹೋರಾಟಮಾಡಬೇಕಾದ ಸ್ಥಿತಿ ಖಂಡಿತಾ ಹೆಮ್ಮೆಪಡುವಂತಹುದಲ್ಲ. ಅಕ್ಕ–ಪಕ್ಕದ ನಾಡುಗಳಲ್ಲಿ ಇಲ್ಲದ ಸಮಸ್ಯೆ ನಮ್ಮನ್ನು ಕಾಡಿದ್ದೇಕೆ ಎನ್ನುವಲ್ಲಿಯೇ ಬೇಸರದ, ಆತಂಕದ, ನೋವುಗಳ ಸಂಗತಿಗಳಿವೆ.

ಪದೇ ಪದೇ ಐತಿಹಾಸಿಕ ಭವ್ಯತೆಗಳಿಂದ, ಸಾಹಿತ್ಯದ ಶ್ರೇಷ್ಠತೆಗಳಿಂದ ಜಾನಪದ ಬದುಕಿನ ಹಿರಿಮೆಯ ಸ್ಮೃತಿಗಳಿಂದ ಭಾವುಕವಾಗಿ ಹೆಮ್ಮೆಪಡುವ ನಾವು ವರ್ತಮಾನದ ಹೊತ್ತಿಗೆ ಇಷ್ಟೊಂದು ಅಭಿಮಾನ ಶೂನ್ಯರಾದದ್ದು ಸುಲಭಕ್ಕೆ ಅರಗಿಸಿಕೊಳ್ಳುವಂತಹುದಲ್ಲವೇ ಅಲ್ಲ.

"ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು
ಕನ್ನಡವೇ ಸತ್ಯ, ಕನ್ನಡವೇ ನಿತ್ಯ"

ಎಂಬ ಕುವೆಂಪು ಅವರ ಕವಿವಾಣಿ ನಮಗೆ ಆದರ್ಶವೂ ಬದುಕಿನ ವಾಸ್ತವವೂ ಅಸ್ತಿತ್ವದ ಅರ್ಥವೂ ಆಗಬೇಕಿತ್ತು. ಅಂತಹ ಸಾರ್ಥಕ ಬದುಕುಗಳು ನಮ್ಮ ಕಣ್ಣೆದುರಿಗಿದ್ದವು. ಆದರೂ ನಾವು ಸತ್ಯಕ್ಕೆ ಮುಖಾ–ಮುಖಿಯಾಗಲೇ ಇಲ್ಲ. ಭ್ರಮೆಗಳನ್ನು ಬೆನ್ನುಹತ್ತಿದ್ದೇವೆ. ಸವಾಲು ತೀವ್ರವಾದದ್ದೇ ಇಂತಲ್ಲಿಂದ.

ಕರ್ನಾಟಕದಲ್ಲಿ 'ಕನ್ನಡ ಕಾವಲು ಸಮಿತಿ ರೂಪ ತಳೆದು' ಮುಂದೆ ಅದು ಕನ್ನಡ ಅಭಿವೃದ್ಧಿ ಪ್ರಾಧಿಕಾರವಾಗಿ ಅಸ್ತಿತ್ವ ಕಂಡುಕೊಂಡು ಈ ಹೊತ್ತಿಗೂ ಚಾಲನೆಯಲ್ಲಿದೆ. ಅಂದರೆ ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಕಾಯಲು ಒಂದು ಸಂಸ್ಥೆ ರೂಪುಗೊಳ್ಳುವುದನ್ನು ಅಭಿಮಾನವೆನ್ನಬಹುದೊ? ದುರಂತವೆನ್ನಬಹುದೊ?.

ಇಂದಿಗೆ ಸುಮಾರು ಆರುಕೋಟಿ ಜನಸಂಖ್ಯೆ ಕರ್ನಾಟಕದ ವ್ಯಾಪ್ತಿ. ಇದರಲ್ಲಿ ಕನ್ನಡಿಗರೆಷ್ಟು ಎನ್ನುವುದೊಂದು ಉಪಪ್ರಶ್ನೆ. ವಿಚಿತ್ರ ಆದರೂ ಸತ್ಯ, ಸರ್ವ ಸ್ವತಂತ್ರವಾದ ಭಾರತದಲ್ಲಿ ಭಾಷಾವಾರು ಪ್ರಾಂತ್ಯದ ವಿಂಗಡಣೆ ಎನ್ನುವುದೊಂದು ವೈಜ್ಞಾನಿಕವಾದ ಪ್ರಯತ್ನ ಎನ್ನುವುದು ನಿರ್ವಿವಾದ ಅದು ಸಂಕುಚಿತಾರ್ಥವಾಗಲಿಲ್ಲ ಈ ದೇಶದ ಪ್ರಜೆ ಯಾರು ಎಲ್ಲಿ ಬೇಕಾದರೂ ವಾಸಿಸಬಹುದು ಎನ್ನುವುದು ಮತ್ತದೇ 'ಭಾರತೀಯ' ಎನ್ನುವ ರಾಷ್ಟ್ರೀಯತೆಯನ್ನು ಹೇಳುವುದಾಗಿತ್ತು ಆದರೆ ಆತ ಏಕಕಾಲಕ್ಕೆ ಭಾರತೀಯನಾಗಿ ತಾನು ಬದುಕಿದ ನೆಲದ, ರಾಜ್ಯದ, ಭಾಷೆಯ ಋಣಿಯೂ ಆಗಬೇಕಿತ್ತೆನ್ನುವುದು, ಸಾಮಾಜಿಕ ನ್ಯಾಯ ಮತ್ತು ಅದು ನಿಜವಾದ ಬದುಕಿನ ಕ್ರಮವೂ ಹೌದು. ಅದು ಎಷ್ಟರಮಟ್ಟಿಗೆ ಸಾಧ್ಯ ವಾಯಿತು? ಕನ್ನಡಿಗರ ಸಹೃದಯತೆ, ಉದಾರತೆಗಳೆ ಮುಳುವಾಯಿತೆ?.

ಕರ್ನಾಟಕದ ರಾಜಧಾನಿಯಲ್ಲಿ ಪರಭಾಷಿಯರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ವ್ಯಾಪಾರ ವಹಿವಾಟು ಅಕ್ಕ ಪಕ್ಕದ ರಾಜ್ಯದ ಭಾಷಿಕರ ಪ್ರಭಾವಕ್ಕಾದರೆ, ಮೇಲ್‌ಸ್ತರದ ಶಿಕ್ಷಣ ಜಗತ್ತು ಸಾಫ್ಟ್‌ವೇರ್ ನೌಕರರ ವ್ಯಾಮೋಹದ ಒಡೆತನದಲ್ಲಿದೆ. ಭಾರತದ ಬಹುಪಾಲು ಮಂದಿಗೆ ಎಲ್ಲಾ ನೆಲೆಯಿಂದಲೂ ಆಕರ್ಷಕವೂ ಆಪ್ತವೂ ಆಗಿರುವ ಬೆಂಗಳೂರು ನಿವೃತ್ತರು ನೆಲಸುವ ಸ್ವರ್ಗವಾಗಿದೆ. ಎಲ್ಲವೂ ಆಧುನಿಕ ಜಗತ್ತಿನ ಸಂಸ್ಕೃತಿಯ ರೂಪಕವಾಗಿ ಕನ್ನಡತನವೆನ್ನುವುದು ಅನಾಥಭಾವದಿಂದ ನರಳುವಂತೆ ಪರಕೀಯವಾಗುತ್ತಿದೆ, ಮತ್ತೆ ಪ್ರಶ್ನೆ ಯಾರು ಹೊಣೆ?.

ಭಾಷೆ ಎನ್ನುವುದು ಸಂವಹನದ ಮಾಧ್ಯಮ. ಅದರ ಮೂಲ ಉದ್ದೇಶವೇ ಪರಸ್ಪರ ಅರ್ಥೈಸಿಕೊಳ್ಳುವಿಕೆಗೆ ಸಂಬಂಧಿಸಿದ್ದು. ಹಾಗೆಯೇ ಅದು ಅನಿವಾರ್ಯತೆಯೂ ಆಗಬೇಕು ಅಂತಾಗದಿದ್ದಲ್ಲಿ ಸಹಜವಾಗಿಯೇ ಭಾಷೆ ಎನ್ನುವುದು ಶಿಥಿಲವಾಗುತ್ತದೆ. ಬೆಂಗಳೂರಿನ ಜನರ ಬದುಕಿನ ಉದಾಹರಣೆ ಈ ನಿಟ್ಟಿನಲ್ಲಿ ಗಮನಾರ್ಹ. ಅಂದರೆ ಕನ್ನಡಿಗರು ಇಲ್ಲಿ ಎರಡನೇ ವರ್ಗದ ಪ್ರಜೆಗಳಾದಂತಿದ್ದಾರೆ. ಹೊರನಾಡಿನ ಜನರು ನಿಧಾನವಾಗಿ ಇಡೀ ಮಾರುಕಟ್ಟೆಯ ಸಾಮಾನ್ಯ ವೃತ್ತವನ್ನು ಆವರಿಸಿಕೊಳ್ಳುತ್ತಿದ್ದಾರೆ. ಕೂಲಿಕಾರ್ಮಿಕರ ಸ್ಥಿತಿಯೂ ಇದರಿಂದ ಹೊರತಾಗಿಲ್ಲ. ತಮಿಳು–ತೆಲುಗು ಭಾಷಿಕರ ಪ್ರಭಾವ ಈ ನಿಟ್ಟಿನಲ್ಲಿ ದಟ್ಟವಾಗಿದೆ. ಹಾಗೆಯೇ ಮೇಲುವರ್ಗದ ಭ್ರಮೆಯ ಬದುಕಿನ ಜನರಿಗೆ ಇಂಗ್ಲಿಷ್–ಹಿಂದಿ ಮಾಧ್ಯಮವಾಗಿದೆ. ಅವರಿಗೆ ಜನಸಾಮಾನ್ಯರೊಂದಿಗೆ ಒಡನಾಟ ಅನಿವಾರ್ಯವೆನಿಸುತ್ತಿಲ್ಲ. ಅಂತಹ ಸ್ಥಿತಿಯನ್ನು ಇಲ್ಲಿನ ಬದುಕು ನಿರ್ಮಾಣಮಾಡಲಿಲ್ಲ. ಈ ಜವಾಬ್ದಾರಿ ಯಾರದ್ದಾಗಬೇಕಿತ್ತು? ಹೀಗೆಂದುಕೊಂಡರೆ ಒಬ್ಬರಿಗೊಬ್ಬರು ಪಾರಾಗುವ ಹಾದಿ ಹಿಡಿದು ಜಾರಿಕೊಳ್ಳುತ್ತಿದ್ದಾರೆ. ಸರ್ಕಾರ, ಸಮಾಜ, ಇಲ್ಲಿ ಬದುಕುವ ಎಲ್ಲರೂ ಹೊಣೆಹೊರಲೇಬೇಕು.

ಸರ್ಕಾರದ ನೀತಿಗಳು ನಾಡು–ನುಡಿ ಕುರಿತೇ ಆದ್ಯತೆಯನ್ನು ತಾಳಬೇಕು. ಕೆಲವೊಮ್ಮೆ ಕಠಿಣ ನಿಲುವು ತಾಳುವ ಅನಿವಾರ್ಯತೆ ಎದುರಾದರೂ ಅದಕ್ಕೆ ಸಜ್ಜಾಗಬೇಕು. ಕನ್ನಡವನ್ನು ಕರ್ನಾಟಕ ಸರ್ಕಾರ ರಕ್ಷಿಸದಿದ್ದರೆ ಮತ್ತಾರು ಕಾಯಬೇಕು?. 'ಆಡಳಿತವೆಲ್ಲ ಕನ್ನಡ' ಎನ್ನುವುದು ಬರೀ ಘೋಷಣೆಯಷ್ಟೇ ಆಗುವಂತಿಲ್ಲ ಅದೊಂದು ನಿಯಮವಾಗಬೇಕು, ಕಾನೂನಾಗಬೇಕು. ಸರ್ಕಾರ ತನ್ನ ನೀತಿಯ ಬಗ್ಗೆ ಎಚ್ಚರವಾಗಿರಬೇಕು ಆಡಳಿತ ಎಂದಕೂಡಲೆ ಅದರಲ್ಲಿ ರಾಜ್ಯದ ಎಲ್ಲಾ ವ್ಯವಸ್ಥೆಯು ಒಳಗೊಳ್ಳುವುದರಿಂದ ಭಾಷಾನೀತಿ ಜಾರಿಯಾಗುವಾಗ ಅದರಲ್ಲಿ ತಾರತಮ್ಯವಿರುವಂತಿಲ್ಲ ಅದು ಖಾಸಗಿಯಾಗಲಿ, ಸರ್ಕಾರವಾಗಲಿ, ಬಹುರಾಷ್ಟ್ರೀಯವಾಗಲಿ ಎಲ್ಲರಿಗೂ ಅದೊಂದು ಕಡ್ಡಾಯ ಪರಿಪಾಲನೆಯ ಸಂಗತಿಯೇ ಆಗಬೇಕು. ಹೀಗೆ ಪರಿಪಾಲನೆ ಇಲ್ಲವಾದರೆ ತಮಗೆ ಅಷ್ಟು ಸರಳವಿಲ್ಲ ಈ ನಾಡಿನ ಬದುಕು ಎನ್ನಿಸುವ ವಾತಾವರಣ ಖಂಡಿತ ನಿರ್ಮಾಣವಾಗಲೇಬೇಕು. ಸಾರ್ವಜನಿಕ ಬದುಕು ಎಲ್ಲರಿಗೂ ಎಲ್ಲಕ್ಕೂ ಅನಿವಾರ್ಯವಾಗುವಾಗ ಅಂತಲ್ಲಿ ಕನ್ನಡವೇ ವ್ಯವಹಾರದ ಭಾಷೆಯಾಗಲೇಬೇಕಿತ್ತು. ತೊಡಕಿರುವುದೇ ಇಲ್ಲಿ, 'ಬೆಂಗಳೂರಿನಲ್ಲಿ ಕನ್ನಡವಿಲ್ಲದೆ ಬದುಕಬಹುದು ತಮಿಳು–ತೆಲುಗುಗಳು ಇದ್ದರೆ ಸಾಕು' ಎನ್ನುವುದೊಂದು ಮಾತು ಚಾಲ್ತಿಗೆ ಬಂದಿದೆ ಎಂದರೆ ಅದಕ್ಕಿಂತ ಮತ್ತೊಂದು ವ್ಯಂಗ್ಯ ಬೇರೇನಿರಲು ಸಾಧ್ಯ? ಇಷ್ಟೊಂದು ಸಡಿಲವಾದ ವ್ಯವಸ್ಥೆ ಅಕ್ಕಪಕ್ಕದ ರಾಜ್ಯಗಳಲ್ಲಿ ಮತ್ತೆಲ್ಲಿದೆ. ದಿನೇದಿನೇ ಈ ಬಗೆಯ ಅಂತರಗಳು ಹೆಚ್ಚಾಗುತ್ತಿರುವುದನ್ನು ಆತಂಕವಾಗಿ ಆಡಳಿತವಾಗಲಿ, ಕನ್ನಡದ ಸಾಚಾ ಜನರಾಗಲಿ ಭಾವಿಸದಿರುವ ದುರಂತವೇ ವಿಪರ್ಯಾಸ. 'ತಾಯಿ ಮತ್ತು ತಾಯಿನೆಲ ಸ್ವರ್ಗಕ್ಕಿಂತ ಹಿರಿದು' ಎನ್ನುವುದೊಂದು ಮಾತಿದೆ. ಅದು ಭಾಷೆಯನ್ನು ಪ್ರತಿನಿಧಿಸುವಂತಹುದು, ಇಂತಲ್ಲಿಯೂ ಸ್ವಾರ್ಥವಷ್ಟೇ ಮುಖ್ಯವಾಗಿಬಿಡುವುದು ದೊಡ್ಡ ಅಪಾಯವೇ ಹೌದು ಇದು ಸಾರ್ವತ್ರಿಕ ಜವಾಬ್ದಾರಿಯ ಸಂಗತಿ.

**ಕನ್ನಡ ಮಾಧ್ಯಮಸಂಬಂಧಿ ಚರ್ಚೆ**

ಇದು ಈ ಹೊತ್ತಿನ ಸ್ಫೋಟಕವಾದ ಚಿಂತನೆ, ನಿರಂತರ ಚಾಲ್ತಿಯಲ್ಲಿರುವ ಬಹುಪಾಲು ಸಂಘರ್ಷವನ್ನೇ ಸೃಷ್ಟಿಸಿರುವ ಸಂಗತಿ. ಶಿಕ್ಷಣದ ನೀತಿಯಾಗಿ ಕನ್ನಡಭಾಷೆಯ ಸ್ಥಾನಮಾನವನ್ನು ಪರಿಶೀಲಿಸುವ ತಾತ್ವಿಕ ಚರ್ಚೆಯಲ್ಲಿದೆ. ಬಹುಭಾಷೆಗಳನ್ನು ರಾಷ್ಟ್ರೀಯ ಭಾಷೆಗಳೆಂದು ಗುರುತಿಸಲಾದ ವಿಶಿಷ್ಟತೆ ಭಾರತದ್ದು. ಅದು ಆಯಾ ಪ್ರಾಂತೀಯ ಮಾತೃಭಾಷೆಯನ್ನು ಗೌರವಿಸುವ ಬಗೆ. ಅಲ್ಲದೆ ಆ ಭಾಷೆಗಳಲ್ಲಿಯೇ ಶಿಕ್ಷಣ ಪಡೆಯುವ, ವೃತ್ತಿ ಅರ್ಹತೆ ಪಡೆಯುವ ಹಕ್ಕು

ಸಂವಿಧಾನಾತ್ಮಕವಾದದ್ದು ಕೂಡ. ಸಂಯುಕ್ತ ರಾಜ್ಯಗಳನ್ನು ಗೌರವಿಸುವ ಸ್ವತಂತ್ರ ಆಳ್ವಿಕೆಯ ಸಂಯುಕ್ತ ವ್ಯವಸ್ಥೆಯಿದು. ಆಯಾ ರಾಜ್ಯದಲ್ಲಿ ಅಧಿಕೃತ ಭಾಷೆಯೇ ಅಲ್ಲಿನ ಶಿಕ್ಷಣದ ಮಾಧ್ಯಮವಾಗಿರಬೇಕು ಎನ್ನುವುದೊಂದು ಸಾಮಾನ್ಯ ಜ್ಞಾನದ ಸಹಜ ಚರ್ಚೆ. ಅದನ್ನು ಎಲ್ಲಾ ಚಿಂತಕರು, ಭಾಷಾವಿಜ್ಞಾನಿಗಳು ಒಪ್ಪಿದ್ದಾರೆ. ಭಾರತದ ಸರ್ವೋಚ್ಚನ್ಯಾಯಾಲಯವು ಇದೇ ವಾದವನ್ನು ಎತ್ತಿಹಿಡಿದಿದೆ.

ಶಿಕ್ಷಣವೆನ್ನುವುದೊಂದು ಕಲಿಕೆಯ ವಿಧಾನವನ್ನವಲಂಬಿಸಿರುತ್ತದೆ. ಆರಂಭದಿಂದಲೂ ಮಕ್ಕಳ ಮನಸ್ಸು ಸಹಜವಾಗಿಯೇ ತನ್ನ ಮಾತೃಭಾಷೆ ಯಲ್ಲಿ ಹೆಚ್ಚು ಖಚಿತತೆಯನ್ನು ಹೊಂದಿರುವುದುಂಟು. ತನ್ನ ಅರಿವಿನ ಮೊದಲ ದಿನದಿಂದಲೇ ತನ್ನ ಭಾಷೆಯಲ್ಲಿಯೇ ಅರ್ಥೈಸಿಕೊಂಡು, ವಿವರಿಸಿಕೊಂಡು, ಸಂವಹನಿಸುವುದನ್ನು ಕಲೆಯಾಗಿಯೇ ಒಂದು ಮಗು ಗ್ರಹಿಸಿಕೊಳ್ಳಬಲ್ಲದು. ಕ್ರಮೇಣ ಅದರ ಭಾಷೆ ಸಹಜವಾದ ಒಂದು ಪ್ರಕ್ರಿಯೆಯಾಗಿ ತನ್ನೊಳಗಿನ ಅಂಶವಾಗಿಯೇ ಪರಿಭಾವಿಸಲ್ಪಡುತ್ತದೆನ್ನುವುದು ಗಮನಾರ್ಹ. ಬೆಳೆಯುವ ಮಗುವಿನ ಮೇಲೆ ಅದರ ಕುಟುಂಬ ಸುತ್ತಮುತ್ತಲ ಪರಿಸರ ಪ್ರಭಾವಬೀರುತ್ತದೆ. ಆಯಾಭಾಷೆ ಆ ಮಗುವಿನ ಅರಿವಿನ ಮೊದಲ ಸೂತ್ರವೂ ಮೂಲವೂ ಆಗಿರುತ್ತದೆ. ಬುದ್ಧಿ ಮತ್ತು ಚುರುಕಿನ ಸಂಗತಿಗಳಾದರೂ ನೇರವಾಗಿ ಭಾಷೆಯೊಂದಿಗೆ ವ್ಯವಹಾರವೇ ಆಗಿರುತ್ತದೆ ಅದು ಆಪ್ತವೂ ಆತ್ಮೀಯವೂ ಆಗುವುದರಿಂದ ತನ್ನ ಭಾಷೆಯ ಮೂಲಕ ಯಾವುದೇ ಸಂಗತಿ ಅರಿವಿಗೆ ಬಂದರೂ ಅದು ಅದಕ್ಕೆ ಬಹುಶಃ ಸಮಸ್ಯೆಯೇ ಆಗುವಂತಿಲ್ಲ, ಏಕೆಂದರೆ ಆ ಭಾಷೆ ಮಗುವಿಗೆ ಹೊಸತಲ್ಲ. ಆಲೋಚನೆ, ಅರಿವು, ಮರುಚಿಂತನೆ ಎಲ್ಲವೂ ತನ್ನ ಭಾಷೆಯಲ್ಲೇ ನಡೆಯುವಾಗ ಅದರ ಕುತೂಹಲವೂ ಹೆಚ್ಚಾಗುವುದುಂಟು ಅಂತೆಯೇ ಭರವಸೆಯೂ ಬೆಳೆಯುತ್ತದೆ.

ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲೇ ಇರಬೇಕೆನ್ನುವ ಸರ್ಕಾರಗಳ ಕಡ್ಡಾಯ ನೀತಿಗಳಿಗೆ ಈ ಬಗೆಯ ಹಿನ್ನೆಲೆಗಳೇ ಕಾರಣವೆನ್ನಬಹುದು. ಮಗುವಿನ ಮತಿ ಕ್ರಮೇಣ ಬೆಳೆದಂತೆ, ವ್ಯಾಪಕ ವಾದಂತೆ ಅದರ ಅರಿವಿನ ಸ್ವರೂಪವನ್ನು ವಿಸ್ತರಿಸಿಕೊಳ್ಳುವುದು ಸುಲಭ ವಾಗಬಹುದು. ಈ ಹಿನ್ನಲೆಯಲ್ಲಿ ಪ್ರಾಥಮಿಕ, ಹಿರಿಯ, ಪ್ರೌಢಶಿಕ್ಷಣ ಎನ್ನುವ ವಿಂಗಡಣೆಗಳಾದರೂ ಪರಸ್ಪರ ಪೂರಕವೇ ಆಗಿದೆ. ಪಠ್ಯ ಸ್ವರೂಪವೂ ಈ ಬಗೆಯ ವಿಂಗಡಣೆಗನುಗುಣವಾಗಿಯೇ ರೂಪಿಸಲ್ಪಡುತ್ತದೆ. ಇದುವರೆಗಿನ ಭಾರತದ ಶಾಲಾವ್ಯವಸ್ಥೆಗಳ ಯಶಸ್ಸಿನಲ್ಲಿ ಈ ಬಗೆಯ ವೈಜ್ಞಾನಿಕ ನೀತಿ ಅಳವಡಿಕೆಯಾಗಿರುವುದು ಗಮನಾರ್ಹ. ಇದು ಕರ್ನಾಟಕ ಮತ್ತು ಕನ್ನಡದ ಸಂದರ್ಭದಲ್ಲಿಯೂ ಹೆಚ್ಚು ಸ್ಪಷ್ಟವಾಗುವಂತಹುದು.

ಇಂಗ್ಲಿಷ್ ಎನ್ನುವುದು ಜಗತ್ತಿನ ಜ್ಞಾನದ ಭಾಷೆಯಾದದ್ದು ಅದು ಬಹುಪಾಲು ಜಗತ್ತನ್ನು ವಸಾಹತುಶಾಹಿಯಾಗಿ ಆಕ್ರಮಿಸಿಕೊಂಡದ್ದರ ಫಲ. ಅದು ಭಾರತದ ಸಂದರ್ಭದಲ್ಲಿಯೂ ಆಯಿತೆನ್ನುವುದು ಇತಿಹಾಸ. ಹೊಸ ಜಗತ್ತನ್ನು ಇಂಗ್ಲಿಷ್‌ರ ಮೂಲಕವೇ ಅರಿವುಮಾಡಿಕೊಂಡ ನಮ್ಮ ಜನರಿಗೆ ಅದೊಂದು 'ಅದ್ಭುತ'ವೆನಿಸಿರುವ ಸಾಧ್ಯತೆಗಳಿವೆ. ಹಾಗಾಗಿ ಅದರ ಮೂಲಕ ಯಾವುದೇ ಜ್ಞಾನವನ್ನಾದರೂ ಪಡೆಯಬಹುದೆನ್ನುವುದು ಒಂದಿಷ್ಟು ಸತ್ಯವಾಗುವುದರ ಜೊತೆಗೆ ಅದಕ್ಕಿಂತ ಹೆಚ್ಚು ಆ ಬಗೆಯ ಭ್ರಮೆಯನ್ನೇ ಉಂಟುಮಾಡಿದ್ದು ಮಾತ್ರ ವಿಪರ್ಯಾಸವೇ ಸರಿ. ಆ ಬಗೆಯ ವಾದಕ್ಕೆ ಪೂರಕವೆನ್ನುವಂತೆ ಇಂಗ್ಲಿಷನ್ನು ಜಾಗತಿಕ ಭಾಷೆ ಎಂದು ಬಿಂಬಿಸಿದ್ದೂ ಮತ್ತೊಂದು ಕಾರಣವಾಗಿಬಿಟ್ಟಿತು. ಅದು ಈ ಆಧುನಿಕ ಜಾಗತೀಕರಣದ ಹೊತ್ತಿಗಂತೂ ಮತ್ತಷ್ಟು ಹೆಚ್ಚೇ ಎನ್ನುವಂತೆ ಪ್ರಭಾವ ಬೀರಿ ಎಲ್ಲರನ್ನು ಆಕರ್ಷಿಸಿಬಿಟ್ಟಿದೆ. ದೇಸೀ ಭಾಷೆಗಳು 'ಅನ್ನಕೊಡುವ ಭಾಷೆಗಳೆ?' ಎನ್ನುವ ವಿಚಿತ್ರ ವಾದವನ್ನು ತೇಲಿಬಿಡಲಾಗಿದೆ.

ಸ್ವತಂತ್ರ ಭಾರತದ ಆದ್ಯತೆಗಳಲ್ಲಿ ಶಿಕ್ಷಣವೂ ಒಂದು ಮುಖ್ಯ ಗುರಿಯಾಗಿತ್ತು ಹಾಗಾಗಿಯೇ ರಾಜ್ಯಸರ್ಕಾರಗಳು ಆ ನಿಟ್ಟಿನಲ್ಲಿ ಶಿಕ್ಷಣವನ್ನು ಕಡ್ಡಾಯವಾದ ಹಕ್ಕು ಎಂದೇ ಜಾರಿಗೊಳಿಸಲು ಪ್ರಯತ್ನಿಸಿದವು. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಸಮಾನತೆಯ ರೂಪವಾಗಿಯೇ ಕಾಣುವುದು ಅನಿವಾರ್ಯತೆಯಾಗಿತ್ತು. ಇಲ್ಲಿ ಪ್ರಾಥಮಿಕ ಶಿಕ್ಷಣವೆನ್ನುವುದು ಆಯಾ ರಾಜ್ಯದ ಸ್ವತಂತ್ರ ನಿರ್ಧಾರವಾಗುವಲ್ಲಿ ಮಾಧ್ಯಮ-ಪಠ್ಯಕ್ರಮವೇ ಮೊದಲಾದ ವಿಚಾರಗಳಲ್ಲಿ ಅವರಿಗೆ ಸ್ವಾತಂತ್ರ್ಯವಿತ್ತು ಅಂದರೆ ಪ್ರಾದೇಶಿಕ ಅರಿವು ಅವರ ಸಂಸ್ಕೃತಿಯ ಮೂಲಕವೇ ಸ್ಪಷ್ಟವಾಗಬೇಕಿತ್ತು ಅದರೊಂದಿಗೆ ಜಗತ್ತನ್ನು ನೋಡುವುದು ಉದ್ದೇಶವಾಗಿತ್ತು. ಆರಂಭಕ್ಕೆ ಇದೆಲ್ಲಾ ಸರಿಯಾಗಿಯೇ ಇತ್ತು. ಬಹುಪಾಲು ಎಲ್ಲಾ ರಾಜ್ಯಗಳು ತಮ್ಮ ಅಧಿಕೃತವಾದ ರಾಜ್ಯಭಾಷೆಯಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸವನ್ನು ನೀಡಲು ಬದ್ಧವಾಗಿದ್ದವು. ಪ್ರಾಥಮಿಕ ಕಲಿಕೆಯ ನಂತರ ಇತರ

ಭಾಷೆಗಳನ್ನು ಮುಖ್ಯವಾಗಿ ಇಂಗ್ಲಿಷ್ ಮತ್ತು ಹಿಂದಿಯನ್ನು ಕೇಂದ್ರೀಕರಿಸಿದ ಕಲಿಕೆ ಅಳವಡಿಸಲಾಗಿತ್ತು. ಸಹಜವಾಗಿಯೇ ಮಕ್ಕಳ ಬೆಳವಣಿಗೆಯೊಂದಿಗೆ ಅವರ ಕಲಿಕಾಶಕ್ತಿಯು ವಿಸ್ತರಣಗೊಳ್ಳುವುದರ ಫಲಿತವೂ ಇದಾಗಿತ್ತು ಅವರವರ ಆಸಕ್ತಿ ಮತ್ತು ಕಲಿಕಾಸಾಮರ್ಥ್ಯದ ಮೇಲೆ ಇಂಗ್ಲಿಷ್ ಭಾಷೆಯೂ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿತ್ತು.

ಇಲ್ಲಿ ಮುಖ್ಯವಾಗಿ ಗಮನಿಸಲೇಬೇಕಾದ ಸಂಗತಿ. 'ಭಾಷೆ' ಎನ್ನುವುದೊಂದು ಕಲಿಯುವ ಸಾಧ್ಯತೆಯ ಜ್ಞಾನ ಅದು ಆಯ್ಕೆ ಮತ್ತು ಆಸಕ್ತಿಯ ಸ್ವರೂಪವನ್ನು ಪ್ರತಿನಿಧಿಸುತ್ತದೆ. 'ಇಂಗ್ಲಿಷ್' ಈ ದೇಶದ ಸ್ವಾತಂತ್ರೋತ್ತರ ಕಾಲದಿಂದ ಒಂದು ಉತ್ತಮ ಭಾಷೆ, ಜಗತ್ತಿಗೆ ಸಂವಹನದ ಮಾಧ್ಯಮ, ಹೆಚ್ಚು ವೃತ್ತಿಪರ ಅವಕಾಶದ ರೂಪ ಎಂಬೆಲ್ಲಾ ಕಾರಣಗಳಿಂದ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿತು. ಬಹಳಷ್ಟು ಮಂದಿ ಇಂಗ್ಲಿಷ್‌ನಲ್ಲಿ ಪರಿಣತರಾದದ್ದು, ಸಾಧಿಸಿದ್ದು, ವೃತ್ತಿಗಳಿಸಿದ್ದು ಎಲ್ಲವೂ ಈಗ ಇತಿಹಾಸವೇ. ಹಾಗೆಂದು ಅದು ಇಂದಿನಂತೆ ಮಾಧ್ಯಮವೇ ಆಗಬೇಕು, ಕಡ್ಡಾಯ ವಾಗಬೇಕು ಎಂಬ ಯಾವ ಭ್ರಮೆಗಳನ್ನು ಬೆನ್ನುಹತ್ತಿರಲಿಲ್ಲ. ತೀರಾ ಸಹಜವಾಗಿ ಅದೊಂದು 'ಜ್ಞಾನ'ದ 'ವಿಚಾರ'ದ ಮಿತಿಯಲ್ಲಷ್ಟೇ ಇತ್ತೆನ್ನುವುದು ಗಮನಾರ್ಹ.

ಇಂದು ಜಗತ್ತು ನಿರೀಕ್ಷೆ ಮೀರಿದಂತೆ ಬದಲಾಗಿದೆ. ಅಂದರೆ ಆಧುನಿಕತೆ ಹಲವಾರು ಬದಲಾವಣೆಗಳನ್ನು ಅನಿವಾರ್ಯತೆಯ ರೂಪ ದಿಂದಲೇ ಎದುರುಗೊಂಡು ಮುಕ್ತ ಜಗತ್ತಿನ ಅರ್ಥಕ್ಕೆ 'ಜಾಗತೀಕರಣ'ವನ್ನು ಪ್ರತಿಪಾದಿಸಿ ಅದು ಎಲ್ಲಾ ರಂಗಗಳಲ್ಲಿಯೂ ತನ್ನ ಪ್ರಭಾವಬೀರಿದೆ. ಅದರ ಪರಿಣಾಮ ಮತ್ತು ಸ್ವರೂಪದಲ್ಲಿ ಭಿನ್ನತೆಗಳಿದ್ದರೂ ಪರಂಪರಾಗತ, ಸಾಂಸ್ಕೃತಿಕ ಎನ್ನುವ ಮನುಷ್ಯ ಸಂಬಂಧಗಳ ಮೇಲೆ ಗಂಭೀರವಾದ ಪ್ರಭಾವವುಂಟಾಗಿದೆ ಇದರಿಂದ ತಲ್ಲಣವೆನ್ನುವುದು ಅನಿವಾರ್ಯ ಭಾವವಾಗಿದೆ.

ಕಳೆದ ನಾಲ್ಕಾರು ವರ್ಷಗಳ ಹಿಂದೆ ಅಂತರ್ಜಾಲ ತಾಣವೊಂದು ಶಿಥಿಲವಾಗಲಿರುವ ಭಾಷೆಗಳನ್ನು ಕುರಿತು ಸಮೀಕ್ಷೆ ಮಾಡಿ ಒಂದು ಪಟ್ಟಿ ಸಿದ್ಧಪಡಿಸಿದೆ. ಅದರಲ್ಲಿ ಕನ್ನಡವನ್ನು ಹೆಸರಿಸಿತೆನ್ನುವುದು ಗಮನಾರ್ಹ. ಅಂದರೆ ಸಾವಿರಾರು ವರ್ಷಗಳ ಪರಂಪರೆಯಿರುವ ಭಾಷೆಯೊಂದನ್ನು ಅಂತರಾಷ್ಟ್ರೀಯ ಅಂತರ್ಜಾಲ ತಾಣವೊಂದು ಮುಂದಿನ ಇಪ್ಪತ್ತು ವರ್ಷಗಳಲ್ಲಿ ನಾಶವಾಗುತ್ತದೆ ಎನ್ನುವುದು ಸರಳವಾಗಿ ಹಾಸ್ಯಾಸ್ಪದ ಎನ್ನಿಸಿದರೂ ಅದರೊಳಗಿರುವ ಸೂಕ್ಷ್ಮವಾದ ಆತಂಕವನ್ನು ಅಷ್ಟು ಸುಲಭವಾಗಿ ಅಲ್ಲಗಳೆಯಲಾಗುವುದಿಲ್ಲ.

ಒಂದು ಭಾಷೆಯ ಅಳಿವು-ಉಳಿವಿನ ಪ್ರಶ್ನೆ ಇರುವುದು ಅದು ಬಳಸಲ್ಪಡುವ ಜನರ ಬದ್ಧತೆಯ ಮನೋಭಾವದ ಮೇಲೆ ಅದು ಎಷ್ಟರಮಟ್ಟಿಗೆ ಮನೆಯ, ಸಮುದಾಯದ, ಸಮಾಜದ ಭಾಷೆಯಾಗಿದೆ ಎನ್ನುವುದರ ಮೇಲೆ. ಹಾಗೆಯೇ ಆಡಳಿತಭಾಷೆಯಾಗಿ, ದಿನನಿತ್ಯ ವ್ಯವಹಾರದ ಭಾಷೆಯಾಗಿ ಅದು ಎಷ್ಟರಮಟ್ಟಿಗೆ ಬಳಕೆಯಾಗುತ್ತಿದೆ ಎನ್ನುವುದು ಗಮನಾರ್ಹ. ಹಾಗೆಯೇ ಬದಲಾದ ಜಗತ್ತು ಮತ್ತು ಕಾಲ ಸಂದರ್ಭದಲ್ಲಿಯೂ ನಾಡಿನ ಭಾಷೆ ಎಷ್ಟರಮಟ್ಟಿಗೆ ಅನ್ವಯಗೊಳ್ಳುವಷ್ಟು ಉತ್ತಮಗೊಳ್ಳುತ್ತಿದೆ ಎನ್ನುವುದೂ ಮುಖ್ಯ. ಇದಕ್ಕೆ ಸರ್ಕಾರ, ಶಿಕ್ಷಣ ಜನಸಾಮಾನ್ಯರು -ಹೀಗೆ ಎಲ್ಲರೂ ಪರಸ್ಪರ ಪೂರಕವೆನ್ನುವಂತೆ ಜೊತೆಯಾಗಿ ದುಡಿಯುವುದು ಅನಿವಾರ್ಯ. ಆದರೆ ಇಂದಿನ 'ಕನ್ನಡಪರ' ವಾದ ಈ ಬಗೆಯ ಕಳಕಳಿಯಲ್ಲಿ ಸಾಚಾತನದ ಕೊರತೆಯಿದೆ. ಎಲ್ಲವೂ ಸ್ವಾರ್ಥಪರವಾಗಿಯೇ ನಿರ್ಣಯಿಸಲ್ಪಡುವ ದುರಂತದೆಡೆಗೆ ಮುಖಮಾಡಿ ಭಾಷೆ ಎನ್ನುವುದು ತಮಗೆ ಅಸ್ತಿತ್ವಕೊಟ್ಟ ಬದ್ಧತೆ ಎನ್ನುವುದನ್ನೇ ಮರೆತಂತೆ ವರ್ತಿಸುತ್ತಿರುವ ಬಹುಮತೀಯ ವರ್ಗಗಳು ಭಾಷೆಯನ್ನು ವಿನಾಶದ ಅಂಚಿಗೆ ತಳ್ಳುತ್ತಿರಬಹುದೆ? ಎಂಬ ಆತಂಕ ಈ ನಾಡಿನ, ಭಾಷೆಯ ಸಹಜ ಅಭಿಮಾನಿಯೊಬ್ಬನನ್ನು ಕಾಡುತ್ತಿರುವುದು ಸುಳ್ಳಲ್ಲ.

ಒಂದು ಭಾಷೆಯನ್ನು ಭಾಷೆಯಾಗಿ ಕಲಿಯುವಲ್ಲಿ ಅಥವಾ ಕಲಿಸುವಲ್ಲಿ ಹಾಗೆಯೇ ಒಂದು ಭಾಷೆ ಮಾಧ್ಯಮವೇ ಆಗುವಲ್ಲಿ ಅಪಾರವಾದ ಅಂತರವಿದೆ. ಇದು ಶಿಕ್ಷಣನೀತಿಯನ್ನು ಕುರಿತೇ ಹೇಳುವಂತಹುದು. 'ಜ್ಞಾನ' ಎನ್ನುವುದಕ್ಕೆ, 'ವಿದ್ಯೆ' ಎನ್ನುವುದಕ್ಕೆ ಭಾಷೆಯಿಲ್ಲ. ಅದು ಪ್ರಯತ್ನಗಳಿಂದ ಯಾವುದೇ ಭಾಷೆಯಲ್ಲಾದರೂ ದಕ್ಕಿಸಿಕೊಳ್ಳಬಹು ದಾದುದು. ಆದರೆ ದಕ್ಕಿಸಿಕೊಳ್ಳುವಲ್ಲಿ ಸವಾಲುಗಳಿವೆ. ಅಂದರೆ ಅದೊಂದು ಸಾಹಸ. ಅದು ಆಯಾ ಭಾಷೆಯ, ಬದುಕಿನ, ಜವಾಬ್ದಾರಿಯ ಸ್ವರೂಪವನ್ನು ಹೇಳುವಂತಹುದು. ಉದಾಹರಣೆಗೆ 'ವಿಜ್ಞಾನ'ವೆನ್ನುವ ಒಂದು 'ಜ್ಞಾನ' ಜಗತ್ತಿನ ಯಾವುದೇ ಭಾಷೆಯಿಂದ

ಬಂದರೂ ಅದು ಅನ್ವೇಷಣೆಯ ಆಯಾಭಾಷೆಯಲ್ಲೇ ಮೊದಲಿಗೆ ಪ್ರಕಟಗೊಳ್ಳಬಹುದು ಅಥವಾ ಬಹುಜನರ ಭಾಷೆ ಎನ್ನಬಹುದಾದ ಇಂಗ್ಲಿಷಿನ ಮೂಲಕ ಪ್ರಕಟವಾಗಬಹುದು ಆದರೆ ಅದನ್ನು ಜಗತ್ತಿನ ಯಾವ ಭಾಷೆಯಾದರೂ ತನಗೆ ಒಗ್ಗಿಸಿಕೊಳ್ಳಬಹುದು, ಎಲ್ಲರಿಗೂ ಅದನ್ನು ಅರ್ಥಮಾಡಿಸಬಹುದು. ತಾಂತ್ರಿಕವಾದ ಪದವೋ ವಸ್ತುವೋ ವಿಶ್ಲೇಷಣೆಯೋ ಆದಲ್ಲಿ ಅದರ ಮೂಲಕವೇ ಅರ್ಥೈಸಬಹುದು. ಇಂತಹ ಪ್ರಯತ್ನ ಕನ್ನಡದಲ್ಲಿ ಎಷ್ಟರಮಟ್ಟಿಗೆ ನಡೆದಿದೆ. ಆಡಳಿತ, ಶಿಕ್ಷಣ ಎಲ್ಲವೂ ಕನ್ನಡದಲ್ಲಿ ಎನ್ನುವ ಹೊತ್ತಿಗೆ ವಿಜ್ಞಾನವನ್ನು ಕಾಲೇಜುಮಟ್ಟದಲ್ಲಿ, ಉನ್ನತಶಿಕ್ಷಣದಲ್ಲಿ ಸಂಪೂರ್ಣವಾಗಿ ದೇಶೀ ಭಾಷೆಯಲ್ಲಿ ಅನುವಾದ ಮಾಡಿ ಕಲಿಸುವುದಾಗುತ್ತಿಲ್ಲ ಇದು ಯಾರ ತಪ್ಪು? ಈ ಪ್ರಶ್ನೆಯಲ್ಲಿಯೇ ನಮ್ಮ ತೊಡಕುಗಳ ಬಗೆಗಿನ ಸೂಚನೆಯೂ ಇದೆ. ಅಂದರೆ ನಮ್ಮಲ್ಲಿ ಸ್ಪಷ್ಟವಾಗಿ ಅನುವಾದಿಸುವ, ಅರ್ಥೈಸುವ ತಜ್ಞರ ಕೊರತೆಯೆ? ಖಂಡಿತಾ ಈ ಬಗೆಯ ಸಮಸ್ಯೆಯಿಲ್ಲ. ಮತ್ತೆ ಅದೇ ಬದ್ಧತೆಯ ಪ್ರಶ್ನೆಯೇ ಮುಖ್ಯವಾಗುತ್ತದೆ. ಆಳುವವರ ನಡುವಿನ ಕಳಕಳಿ, ಶೈಕ್ಷಣಿಕ ಒತ್ತಾಸೆ ಮತ್ತು ಬೋಧಕರ ಪ್ರಯೋಗಶೀಲತೆಗೆ ಇದು ಸಂಬಂಧಿಸಿದೆ. ಇದು ಪರಸ್ಪರ ಎನ್ನುವಂತೆ ಸಾಮುದಾಯಿಕ ಜವಾಬ್ದಾರಿ.

ಇದೊಂದು ಮಾಮೂಲಿ ಉದಾಹರಣೆ ಮಾತ್ರ. ಪ್ರತೀ ವಿಭಾಗದಲ್ಲಿ ಈ ಬಗೆಯ ಹಲವಾರು ತೊಡಕುಗಳಿವೆ. ಹಿಂದಿನ ದಿನಗಳಿಗೆ ಹೋಲಿಸಿದಲ್ಲಿ ನಾಡು-ನುಡಿ ಕುರಿತ ಜಾಗೃತ ಪ್ರಜ್ಞೆಯೂ ಮಸುಕಾಗುತ್ತಿದೆ ಎನ್ನುವ ಸತ್ಯವೂ ಆತಂಕಕಾರಿಯಾದುದಾಗಿದೆ. ನಿಜವಾದ ಸವಾಲು ಹೀಗೆ ಸೂಕ್ಷ್ಮವಾಗಿ ಕಾಣಿಸಿಕೊಂಡು ಕ್ರಮೇಣ ವ್ಯಾಪಕವಾಗಿ ಇಂದಿಗೆ ಸಂಘರ್ಷದ ಸ್ವರೂಪವಾಗಿದೆ.

ಮೊದಲೇ ಗಮನಿಸಿದಂತೆ ಇಂಗ್ಲಿಷ್‌ನ್ನು ಒಂದು ಭಾಷೆಯಾಗಿ ಕಲಿಸುವಲ್ಲಿ, ಕಲಿಯುವಲ್ಲಿ ಮುಖ್ಯ ತಕರಾರುಗಳಿಲ್ಲ. ಆದರೆ ಆರಂಭದಿಂದಲೂ ಶಿಕ್ಷಣ ಇಡಿಯಾಗಿ ಮಾಧ್ಯಮವೇ ಆಗಿ ಎಲ್ಲವನ್ನು ಆವರಿಸಿಕೊಂಡರೆ ಅಪಾಯ ಹೆಚ್ಚು. ಇದು ಯಾವುದೇ ದೇಶೀ ಭಾಷೆಯ ಸಂದರ್ಭದಲ್ಲಿಯೇ ಆದರೂ ಅಲ್ಲಿ 'ಮಾತೃಭಾಷೆ' ಖಂಡಿತಾ ತೊಂದರೆಯನ್ನು ಎದುರಿಸುತ್ತದೆ. ಕನ್ನಡದವರಲ್ಲಿ ಈಚಿನ ದಿನಗಳಲ್ಲಿ ಕಾಣುತ್ತಿರುವ ಅಭಿಮಾನ್ಯಶೂನ್ಯತೆ ಅಪಾಯವನ್ನು ಮತ್ತಷ್ಟು ಹೆಚ್ಚುಮಾಡುತ್ತಿದೆ.

ಇಂಗ್ಲಿಷ್‌ನ್ನು ಈಚಿನ ದಿನಗಳಲ್ಲಿ ಹೆಚ್ಚು, ಹೆಚ್ಚು ಅವಲಂಬಿ ಸುವಂತಹ ಪರಿಸ್ಥಿತಿ ನಿರ್ಮಾಣವಾದದ್ದು ಮುಖ್ಯವಾಗಿ ಜಾಗತೀಕರಣದ ಕೊಡುಗೆ ಎನ್ನಬಹುದು, ಗಣಕತಂತ್ರಜ್ಞಾನದ ಉತ್ಕರ್ಷವೂ ಇದರಲ್ಲಿ ಸಿಂಹಪಾಲು. 'ಸಂವಹನ ಕೌಶಲ'ದ' ರೂಪವಾಗಿಯೂ ಇಂಗ್ಲಿಷ್‌ನ್ನು ಬಳಸುವಂತಾದದ್ದು, ಗುರುತಿಸಿದ್ದು ಮತ್ತೊಂದು ವಿಪರ್ಯಾಸ. ಒಟ್ಟಾರೆಯ ಫಲಿತವಿಷ್ಟೆ ಇಂಗ್ಲಿಷ್ ಭಾಷೆಯನ್ನು ಅರಿತರೆ ಅದರಿಂದ ಆರ್ಥಿಕ ಲಾಭಗಳುಂಟು. ಇದಕ್ಕೆ ಪೂರಕವೆನ್ನುವಂತೆ ನಮ್ಮನ್ನು ಸರ್ಕಾರಗಳೂ ಮಾತೃಭಾಷೆಯನ್ನು ಗಟ್ಟಿಗೊಳಿಸುವಲ್ಲಿ ಅದನ್ನು ವೃತ್ತಿಭಾಷೆ, ಅನ್ನದ ಪ್ರಜ್ಞೆಯಾಗಿಸುವಲ್ಲಿ ಸೋಲುತ್ತಿವೆ.

ಪೋಷಕರ ನಡವಳಿಕೆಯಾದರೂ ಇಲ್ಲಿ ಕಾಲಸಂಬಂಧಿಯೇ ಆಗಿದೆ. ಅದಕ್ಕೆ ಒತ್ತಾಸೆಯಾಗುವಂತೆ ರಾಜ್ಯದಲ್ಲಿ ಹೆಚ್ಚಿದ ಖಾಸಗಿ ಸಂಸ್ಥೆಗಳು, ಕಾನ್ವೆಂಟ್ ಸಂಸ್ಕೃತಿ, ಕಲಿಯುವ, ಬದುಕುವ, ಬೆಳೆಯುವ ಮಕ್ಕಳ ನಡುವೆ ತರತಮವನ್ನು ಸೃಷ್ಟಿಸಿ, ಸ್ಪರ್ಧಾತ್ಮಕವಾದ ಜಾಲವನ್ನೇ ಸೃಷ್ಟಿಸುತ್ತಿವೆ. ಅಂದರೆ ಎಲ್ಲರಿಗೂ ಈ ಬಗೆಯ 'ಭ್ರಮೆ' ಬದುಕಿನ ಅನಿವಾರ್ಯತೆ ಎನಿಸುವಂತಿದೆ. ಬದಲಾದ ಕಾಲದ, ಆಧುನಿಕ ಜಗತ್ತಿನ ಮಕ್ಕಳಾದರೂ ಅಷ್ಟೇ ವೇಗದ-ಸೂಕ್ಷ್ಮದ ಚಿಂತನೆಗಳಿಂದಲೇ ಗುರುತಿಸಲ್ಪಡು ತ್ತಿದ್ದಾರೆ. 'ಜ್ಞಾನ-ವಿದ್ಯೆ' ಎನ್ನುವುದು ಬೌದ್ಧಿಕ ಪ್ರಜ್ಞೆಯ ಅರಿವಿನ ಸಂಗತಿಯಷ್ಟೇ ಆಗದೆ ಎಲ್ಲರಿಗೂ ಪ್ರತಿಷ್ಠೆಯ ಸಂಗತಿಯೂ ಆಗುತ್ತಿದೆ. ಮಕ್ಕಳು, ಶಾಲೆ, ಮನೆ, ಪರಿಸರ, ಪೋಷಕರು -ಹೀಗೆ ಎಲ್ಲಾ ಕಡೆಯಿಂದಲೂ ತಮ್ಮ ಸಹಜ ಬಾಲ್ಯವನ್ನು-ರಸಮಯತೆಯ ವಾತ್ಸಲ್ಯದ ಬದುಕನ್ನು ಕಳೆದುಕೊಂಡು ಯಾಂತ್ರೀಕರಣಗೊಳ್ಳುತ್ತಿರುವಾಗ, ಕಲಿಕೆ-ಇಂಗ್ಲಿಷ್ ಭವಿಷ್ಯದ ವೃತ್ತಿಪರತೆಗಳೇ ಅವರ ಆದ್ಯತೆಗಳೂ ಆಗಿಬಿಟ್ಟಿರುವಾಗ ತಮ್ಮತನವನ್ನು ಕಳೆದುಕೊಂಡು ಬದುಕುವುದು ಅವರಿಗೆ ಅನಿವಾರ್ಯವೇ ಆದಂತಿದೆ. ಇಂತಲ್ಲಿ ಸೃಜನಶೀಲವಾದ ಪರಂಪರೆಯ ಮಾತೃಭಾಷೆಯನ್ನು ಅವರ ಆಪ್ತತೆಯ ರೂಪದಲ್ಲಿ ಪರಿಭಾವಿಸುವುದಾದರೂ ಹೇಗೆ ಸಾಧ್ಯ?.

ಒಟ್ಟಾರೆಯಾಗಿ 'ಮಾಧ್ಯಮ ಮತ್ತು ಭಾಷೆ' ಯಾವುದು ಮುಖ್ಯ ಎನ್ನುವ ಸಂಗತಿ ಒಂದು ಆರೋಗ್ಯಕರ ಚರ್ಚೆಯಾಗಿ ಕನ್ನಡ-ಇಂಗ್ಲಿಷ್ ಭಾಷೆಗಳ ಸಮನ್ವಯದ ಸಾಧ್ಯತೆಯನ್ನು ಪರಿಶೀಲಿಸುವುದಾಗದೆ ಎಲ್ಲರ ನಡುವೆ ಸಂಘರ್ಷದ ಸಂಗ'ತಿಯಾದದ್ದು ಖಂಡಿತವಾಗಿ ವಿಚಿತ್ರ- ವಿಪರ್ಯಾಸ.

ಹಿಂದಿನ ಯಶಸ್ಸು, ಸಾಧಕ-ಬಾಧಕಗಳ ನೆಲೆಯಲ್ಲಿಯೇ ಇದಕ್ಕೆ ಉತ್ತರ ಕಂಡುಕೊಳ್ಳಬೇಕಿತ್ತು ಆದರೆ ಹಾಗಾಗಲಿಲ್ಲ ಎಲ್ಲಕ್ಕೂ ಆಧುನಿಕ ಜಗತ್ತಿನ ಉದಾಹರಣೆಯನ್ನೇ ಕೊಟ್ಟದ್ದು ಎಷ್ಟರಮಟ್ಟಿಗೆ ಸಮರ್ಥನೀಯ? ಉತ್ತರ ಸುಲಭವಿಲ್ಲ ಇದ್ದರೂ ಮತ್ತವೇ ಪಲಾಯನವಾದ. ಇದರಲ್ಲಿ ಖಾಸಗಿ ಶಾಲೆಗಳ ವ್ಯಾಪಾರೀಕರಣ ಮನೋಭಾವದ ವಶೀಲಿಯೂ ಇಲ್ಲದಿಲ್ಲ. ಸರ್ಕಾರಿ ಶಾಲೆಗಳು ತಾತ್ವಿಕವಾಗಿ ಎಲ್ಲಾ ತೆರನಾದ ಗಟ್ಟಿನೆಲೆಯಲ್ಲಿದೆ ಎನಿಸಿದ್ದಾಗ್ಯೂ ವಾಸ್ತವ ಅಷ್ಟು ಸರಳವಿಲ್ಲ. ನೇರವಾಗಿ ಖಾಸಗಿ ಶಾಲೆಗಳೊಂದಿಗೆ ಸ್ಪರ್ಧೆ ಹೂಡುವ ಸ್ಥಿತಿಯಲ್ಲಂತೂ ಇಲ್ಲ. ಸರ್ಕಾರಿ ನಿಯಮಗಳು, ಯೋಜನೆಗಳು, ಸವಲತ್ತುಗಳು ಸರ್ಕಾರಿ ಶಾಲೆಗಳಿಗೆ ಪರವಾಗಿದ್ದಾಗ್ಯೂ ಅದನ್ನು ಸಮರ್ಥವಾಗಿ ಬಳಸುವಲ್ಲಿ ಒಂದಷ್ಟು ತೊಡಕುಗಳಿವೆ ಅಥವಾ ಇಚ್ಛಾಶಕ್ತಿಯ ಕೊರತೆಯಿದೆ.

ಹೀಗೆ ಹತ್ತಾರು ಸಮಸ್ಯೆಗಳು-ಸವಾಲುಗಳು ಇಂದು ಕನ್ನಡ-ಇಂಗ್ಲಿಷ್ ನಡುವೆ ದೊಡ್ಡ ಸಂಘರ್ಷವನ್ನು ಹುಟ್ಟುಹಾಕಿವೆ. ಅದರೊಂದಿಗೆ ರಾಷ್ಟ್ರಭಾಷೆ ಎನ್ನುವ ಮತ್ತೊಂದು ರೂಪದಲ್ಲಿ ಹಿಂದಿಯ ಹೇರಿಕೆಯೂ ಸದ್ದಿಲ್ಲದೆ ನಡೆಯುತ್ತಿದೆ.

ಕನ್ನಡವನ್ನೇ ಮಾಧ್ಯಮವಾಗಿಸುವ ಸರ್ಕಾರಿ ನಿಯಮಗಳೂ ಖಾಸಗಿಯವರಿಂದ ಅಲಕ್ಷಿಸಲ್ಪಟ್ಟಿದೆ ಅವರು ನ್ಯಾಯಾಲಯದ ರಕ್ಷಣೆ ಪಡೆಯುವ ತಂತ್ರ ಹೆಣೆದಿದ್ದಾರೆ. ಕಾನೂನನ್ನೇ ತೊಡಕಾಗಿಸುವ ಹೊಸ ಹಾದಿಗಳನ್ನು ಹುಡುಕುತ್ತಿದ್ದಾರೆ. ಅದು ಜನಾಭಿಪ್ರಾಯವಾಗುವಂತೆಯೂ ನೋಡಿಕೊಳ್ಳುವಲ್ಲಿ ಗೆದ್ದಿದ್ದಾರೆ.

ಈಗಾಗಲೇ ಸರ್ಕಾರಿ, ಅರೆಸರ್ಕಾರಿ-ಖಾಸಗಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ಎಲ್ಲಾ ನೆಲೆಯಿಂದಲೂ ತರತಮಗಳಿದ್ದಾವೆ. ಆಧುನಿಕ ಶಿಕ್ಷಣದ ಹಲವು ರೂಪಗಳನ್ನು ಆಕರ್ಷಣೆಯ ನೆಲೆಯಲ್ಲಿಯೂ ಖಾಸಗಿ ಶಾಲೆಗಳು ಬಳಸಿ ಗೆದ್ದಿವೆ. ಇದು ಸಹಜವಾಗಿ ಸರ್ಕಾರಿ ಶಾಲೆಯ ಮಕ್ಕಳ ಮನಸ್ಸಿನೊಳಗೆ ಒಂದಿಷ್ಟು ಆತಂಕಗಳನ್ನು, ಅಸಮಾಧಾನಗಳನ್ನು ಸಹಜವಾಗಿಯೇ ಉಂಟುಮಾಡಿದೆ.

ಇದು ಗ್ರಾಮ-ನಗರ, ಬಡವ-ಬಲ್ಲಿದ, ಆಧುನಿಕ-ಸಾಂಪ್ರದಾಯಿಕ ಇವೇ ಮೊದಲಾದ ಅಂತರಗಳನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸೃಷ್ಟಿಸುತ್ತಿದೆ. ಖಾಸಗಿ ಶಾಲೆಗಳ ಮೂಲ ಆಕರ್ಷಣೆ ಇರುವುದೇ ಇಂಗ್ಲಿಷ್‌ಮಾಧ್ಯಮದ ಪ್ರತಿಪಾದನೆಯಲ್ಲಿ. ಇದು ಸರ್ಕಾರಿ ಶಾಲೆಗಳ ಮುಖ್ಯ ಕೊರತೆಯಾದಂತೆಯೂ ಪ್ರತಿಬಿಂಬಿಸಲ್ಪಡುತ್ತಿದೆ. ಸರ್ಕಾರಿ ಶಾಲೆಗಳು ಒಂದು ಭಾಷೆಯಾಗಿ ಇಂಗ್ಲಿಷ್ ಕಲಿಸುವ ಪಠ್ಯಕ್ರಮ ಹೊಂದಿದ್ದಾಗ್ಯೂ ಎಷ್ಟರಮಟ್ಟಿಗೆ ಅದರಲ್ಲಿ ಯಶಸ್ವಿಯಾಗಿದೆ ಎನ್ನುವುದು ಮೂಲಭೂತವಾದ ಪ್ರಶ್ನೆ. ಅದಕ್ಕೆ ಉತ್ತರ ಆಶಾದಾಯಕವಾಗಿಲ್ಲ, ಅಧ್ಯಾಪಕರ ಕೊರತೆ, ನುರಿತವರ ನೇಮಕದಲ್ಲಿ ಅಸ್ಪಷ್ಟತೆ, ಇದ್ದವರಲ್ಲಿಯೂ ಕಲಿಸಬಹುದಾದ ಬದ್ಧತೆಯ ರೂಪ ಇತ್ಯಾದಿ ಕಾರಣಗಳು ಖಾಸಗಿ ಶಾಲೆಯಲ್ಲಿ ಸಮಸ್ಯೆಗಳಾಗಿಲ್ಲ ಅಂತಲ್ಲಿಯೇ ಅವರ ಸಾಫಲ್ಯತೆಯಿದೆ.

ಇಲ್ಲಿ ಸಹಜವಾಗಿಯೇ ಪೋಷಕರು, ಖಾಸಗಿ ಶಾಲೆಗಳತ್ತ ಹೊರಳುವುದು, ಇಂಗ್ಲಿಷ್ ಮಾಧ್ಯಮವೇ ತಮ್ಮ ಅನಿವಾರ್ಯತೆಯ ಆಯ್ಕೆ ಎಂದು ಭಾವಿಸುವುದು ದಿನೇ ದಿನೇ ಬಲಗೊಳ್ಳುತ್ತಿದೆ. ಸರ್ಕಾರಿ ಶಾಲೆಗಳಲ್ಲಿಯೂ ಇಂಗ್ಲಿಷ್ ಮಾಧ್ಯಮ ಅನಿವಾರ್ಯ ಎಂಬ ಮನಸ್ಥಿತಿ ಮೂಡಿಸಿ ಆ ನಿಟ್ಟಿನಲ್ಲಿ ಸರ್ಕಾರವು ಹೆಜ್ಜೆ ಇಟ್ಟಿರುವುದು ಈ ಹೊತ್ತಿನ ತಾಜಾ ಘಟನೆ. ಈ ಕುರಿತ ಪರ-ವಿರೋಧವಾದ, ವಾಗ್ವಾದ, ಹೋರಾಟ, ಪ್ರತಿಭಟನೆಗಳು ನಡೆದಿವೆ. ಕನ್ನಡ ಭಾಷೆಯ ಸ್ಥಿತಿ ಒಂದಿಷ್ಟು ಬಿಗಡಾಯಿಸಿದೆ ಎಂದೇ ಹೇಳಬಹುದು.

ಈಗಾಗಲೇ ಅರಿವಿರುವಂತೆ ನಮ್ಮ ಪರಂಪರೆಯ ಹಿರಿತನಗಳು ಸರ್ಕಾರಿ ಶಾಲೆಗಳ ಕನ್ನಡ ಮಾಧ್ಯಮದಿಂದಲೇ ಕಲಿತುಬಂದು ಇಂದು ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಅಸ್ತಿತ್ವವನ್ನು ಗಳಿಸಿಕೊಂಡಿರುವ ಉದಾಹರಣೆಗಳು

ಸಾಕಷ್ಟಿವೆ. 'ಇಂಗ್ಲಿಷ್' ಅನ್ನುವುದು ಒಂದು ಸಂವಹನದ ಭಾಷೆಯಾಗಿ, ಅವರವರ ವೃತ್ತಿ ಮತ್ತಿತರ ಸಂದರ್ಭಗಳ ಜ್ಞಾನವಾಗಿ ಬಳಕೆಯಾಗುವಲ್ಲಿ ಖಂಡಿತ ತೊಡಕನ್ನುಂಟು ಮಾಡಿಲ್ಲ, ಸಮಸ್ಯೆಯೇ ಆಗಿಲ್ಲ. ಇಂದು ಮಾತ್ರ ಇದೊಂದು ದೊಡ್ಡ ಸಮಸ್ಯೆಯೇ ಆದದ್ದು ಯಾಕಾಗಿ? ಈ ಪ್ರಶ್ನೆಗೆ ತಟ್ಟನೆ 'ಆ ಕಾಲವೇ ಬೇರೆ ಈ ಕಾಲವೇ ಬೇರೆ' ಎಂಬ ಉತ್ತರ ಸಾಧ್ಯವಾಗಬಹುದು. ಆದರೆ ಪ್ರತೀ ಕಾಲಸಂದರ್ಭಕ್ಕೂ ಅದರದ್ದೇ ತೊಡಕಿದ್ದಂತೆ ಅವಕಾಶಗಳೂ ಇರುತ್ತವೆ. ಮೇಲೆ ಗಮನಿಸಿದಂತೆ ಇಚ್ಛಾಶಕ್ತಿಯ ಕೊರತೆಯೇ ಈ ಹೊತ್ತಿನ ಮುಖ್ಯ ಸಮಸ್ಯೆ.

ವೇಗೋತ್ಕರ್ಷದ ಕಾಲವಿದು. ಎಲ್ಲವೂ ತಕ್ಷಣಕ್ಕೆ ಸರಳವಾಗಿ ಮತ್ತು ಸುಲಭವಾಗಿ ಸಾಧ್ಯವಾಗಿಬಿಡಬೇಕೆಂಬ ಹಪಹಪಿಗಳೂ ಸಹ ನಮ್ಮನ್ನು ಈ ಸ್ಥಿತಿಗೆ ತಂದು ನಿಲ್ಲಿಸಿವೆ. ಎಷ್ಟೋ ರಾಷ್ಟ್ರಗಳೂ ಈ ಹೊತ್ತಿಗೂ ಈ ಇಂಗ್ಲಿಷ್‌ನ ಭ್ರಮೆಗಳಾಚೆಗೆ ಅಭಿವದ್ಧಿಯತ್ತ ದಾಪುಗಾಲಿಟ್ಟಿರುವುದು ಮುಂಚೂಣಿಯಲ್ಲಿರುವುದು ಮರೆತೇಹೋಗುವುದು ಮತ್ತೆ ನಮ್ಮ ಮಿತಿಯನ್ನೇ ಹೇಳುತ್ತಿರಬಹುದೆ ಎನಿಸದಿರುವುದಿಲ್ಲ ಸ್ವಾರ್ಥದ ಪರಮಾವಧಿಯ ಮನಸ್ಸಿರುವಲ್ಲಿ ಇಂತಹವು ಸಾಧ್ಯ.

ಶಿಕ್ಷಣವೆನ್ನುವುದು ಜ್ಞಾನದ ರೂಪವಷ್ಟೇ ಅಲ್ಲ, ಅದು ತನ್ನ ಸ್ವರೂಪ ಸಾಧ್ಯತೆಗಳಿಂದ ಇಡೀ ನಾಡಿನ ಅಭಿವೃದ್ಧಿಯನ್ನು ರೂಪಿಸು ವಂತಹುದು. ಇದು ಕೇವಲ ಭಾಷೆ–ಮಾಧ್ಯಮದ ತೊಡಕಿನೊಂದಿಗೇ ಕಳೆದುಹೋಗುವಂತಾಗಬಾರದು. ಅಕ್ಕ–ಪಕ್ಕದ ರಾಜ್ಯಗಳಲ್ಲಿ ಇಲ್ಲದ ಸಮಸ್ಯೆ ನಮಗೇಕಾಗಬೇಕು. ಸಾಧಿಸುವಷ್ಟರಲ್ಲಾದರೂ ಪ್ರಾಮಾಣಿಕತೆ ಇದ್ದರೆ ಆತ್ಮವಿಶ್ವಾಸವೂ ಹೆಚ್ಚಾಗುತ್ತದೆ. ಅದರ ಜೊತೆಗೆ ನಂಬಿಕೆ ಹೆಚ್ಚಾದರೆ ಬಹುಜನರ ಬೆಂಬಲವೂ ದೊರಕುತ್ತದೆ. ಇಂಗ್ಲಿಷ್ ಅಥವಾ ಇತರ ಯಾವುದೇ ಭಾಷೆಗಳು ಈ ನೆಲದ ಮಾತೃಮೂಲವಲ್ಲದ ಯಾವುದೇ ಭಾಷೆಗಳು ಎಷ್ಟರಮಟ್ಟಿನ ಅಗತ್ಯ ಎಂಬ ಬಗೆಗೆ ಖಚಿತತೆ ಇರಬೇಕು. ಅದು ಸಹಜವಾಗಿರಬೇಕು. ಮತ್ತು ಮುಖ್ಯವಾಗಿ ವಿನಾಕಾರಣ ಇಂಗ್ಲಿಷನ್ನು ಒಂದು ಭ್ರಮೆಯಾಗಿಸುವ ಗುಣದಾರಿದ್ರ್ಯದಿಂದ ದೂರ ಉಳಿಯಬೇಕು. ಇದು ಖಂಡಿತಾ ಭಾವುಕವೆಂದುಕೊಳ್ಳಬೇಕಿಲ್ಲ. ನಮಗೆ ಅಸ್ತಿತ್ವ ನೀಡಿದ, ಅರ್ಥನೀಡಿದ ಭಾಷೆಯ ಬಗೆಗಿನ ಗೌರವ ಪ್ರಕಟಣೆಯ ಋಣವಷ್ಟೆ.

## ಸಮೂಹ ಮಾಧ್ಯಮಗಳು ಮತ್ತು ಭಾಷೆ

ಮಾಹಿತಿ ತಂತ್ರಜ್ಞಾನದ ಯುಗ ಎನ್ನುವುದೊಂದು ಮಾತು ಆಧುನಿಕ ಜಗತ್ತನ್ನು ಪ್ರತಿನಿಧಿಸುವ ಲಕ್ಷಣವಾಗಿದೆ. ವಿಶ್ವವು ಹತ್ತಿರವಾಗಿದೆ, ಚಿಕ್ಕದಾಗಿದೆ ಎಂಬ 'ವಿಶ್ವಗ್ರಾಮ'ದ ಕಲ್ಪನೆ ಇಲ್ಲಿ ಕೇವಲ ಜಾಗತೀಕರಣದ ಪ್ರಕ್ರಿಯೆಗಲ್ಲದೆ ಇಲ್ಲಿಗೂ ಅನ್ವಯವಾಗುತ್ತದೆ.

ನಾಗರೀಕ ಸಮಾಜದ, ದೇಶದ, ವಿಶ್ವದ ಸಂಪರ್ಕ ಸೇತುಗಳು ಎನ್ನಬಹುದಾದದ್ದು ಸಮೂಹ ಮಾಧ್ಯಮಗಳ ಹಿರಿಮೆ. ಪತ್ರಿಕೆಗಳು, ರೇಡಿಯೋ, ದೂರದರ್ಶನ, ಸಿನಿಮಾ, ಕಂಪ್ಯೂಟರ್, ಸಂಚಾರಿ ದೂರವಾಣಿ (ಮೊಬೈಲ್) ಇವೆಲ್ಲವುಗಳನ್ನು ಸಮೂಹ ಮಾಧ್ಯಮಗಳೆಂದೇ ಸರಳೀಕರಿಸಿ ಗುರುತಿಸಬಹುದು.

ಆರಂಭಕ್ಕೆ ಎಲ್ಲವೂ ಸರಿ ಎನ್ನುವ ಸಾಮಾನ್ಯ ಮಾತಿನಂತೆಯೇ ಈ ಸಮೂಹ ಮಾಧ್ಯಮಗಳನ್ನು ಗುಣಮೌಲ್ಯವಾಗಿ, ಕಾಲಿಕ ಅವಶ್ಯಕತೆಯಾಗಿ ಪರಿಭಾವಿಸಿದ್ದು ಸಹಜವಾದ ಗ್ರಹಿಕೆ. ಕಾಲದೊಂದಿಗೆ, ಬದಲಾದ ಬದುಕಿನೊಂದಿಗೆ ಅವುಗಳೂ ಬದಲಾದದ್ದು, ಆಧುನಿಕ ಆವಿಷ್ಕಾರಗಳ ಹೊಸತನದ ಭಾಗವಾದದ್ದು ಅನಿವಾರ್ಯತೆ. ಈ ಅನಿವಾರ್ಯತೆಯೇ ಎಷ್ಟರಮಟ್ಟಿಗೆ ಅತ್ಯಗತ್ಯ ಎನ್ನುವುದು ಸದ್ಯದ ಚರ್ಚೆ. ಖಾಸ'ಗೀಕರಣದ ಅತಿರೇಕವೂ ಇದಕ್ಕೆ ಕಾರಣವಾಗಿದೆ ಎಂದ'ರೆ ಉತ್ಪ್ರೇಕ್ಷೆಯಲ್ಲ. ಎಲ್ಲವೂ ಇಡಿಯಾಗಿ ವ್ಯಾಪಾರೀಕರಣವಾಗಬೇಕೆ? ನಾಗರೀಕತೆಯ ಆವಿಷ್ಕಾರವಾಗಿಯೇ ಮುದ್ರಣ ವ್ಯವಸ್ಥೆ ರೂಪುಗೊಂಡಾಗ ಸುದ್ದಿಪತ್ರಿಕೆಗಳಿಗೆ ಪ್ರಾಧಾನ್ಯತೆ ದೊರಕಿದ್ದು ಗಮನಾರ್ಹ ಮತ್ತು ಸಹಜ. ಸಮಾಜಜೀವಿ, ಸಂಘಜೀವಿ ಎನಿಸಿಕೊಂಡ ಮನುಷ್ಯ ಆಧುನಿಕತೆಯ ಹೊತ್ತಿನಲ್ಲಿ ಹೆಚ್ಚೆಚ್ಚು ಸಂವೇದನಾಶೀಲನು, ವಿದ್ಯಾವಂತನು, ವ್ಯವಸ್ಥೆಯ ಪಾಲುದಾರನು, ಮಾನವ ಹಕ್ಕುಗಳ ವಕ್ತಾರನೂ ಆದಂತೆಲ್ಲ ತನ್ನ ಸುತ್ತಮುತ್ತ, ಅದರಾಚೆಗೆ, ದೇಶದಾಚೆಗೆ–ಜಗತ್ತಿನಾಚೆಗೆ ಏನೆಲ್ಲಾ ನಡೆಯುತ್ತಿದೆ ಎನ್ನುವ ಅರಿವಿನ ಬಗೆಗೂ ಕುತೂಹಲಿಯಾಗಿದ್ದ ಅದರ ಪ್ರತಿಫಲವೇ

ಸುದ್ದಿಪತ್ರಿಕೆಗಳು. ಕಾಲದೊಂದಿಗೆ ಅವೂ ಬೆಳೆಯುತ್ತಾ ಬಂದದ್ದು ಅನಿವಾರ್ಯವೂ ಆಗಿತ್ತು ಇಂದಿಗೆ ರಂಗವೆನ್ನುವುದು ಪತ್ರಿಕೋದ್ಯಮವಾದದ್ದರಲ್ಲಿಯೇ ಅದು ಬೆಳೆದು ಬೃಹತ್ತಾದ, ವ್ಯವಸ್ಥೆಯ ಒಂದು ಭಾಗವೇ ಆದ ಅರ್ಥವನ್ನು ಗ್ರಹಿಸಬಹುದು. ಪತ್ರಿಕೆಗಳು ಆಯಾ ನಾಡಿನ, ಸಮುದಾಯದ ಒಪ್ಪಿತ ಭಾಷೆಯಲ್ಲಿಯೇ ಪ್ರಕಟಗೊಳ್ಳುವುದು ಅದರ ಅನಿವಾರ್ಯತೆಯಷ್ಟೇ ಅಲ್ಲ ಅದರ ಯಶಸ್ಸಿನ ಸೂತ್ರವೂ ಆಗಿತ್ತು. ಇಂದಿಗೆ ಪ್ರತಿಕೆಗಳ ಪ್ರಸರಣದಲ್ಲಿ ದಾಖಲಾರ್ಹವೆನ್ನುವಷ್ಟು ಸುಧಾರಣೆಗಳಾಗಿವೆ. ಅದು ಜನರ ಅಭಿರುಚಿಗಳನ್ನು ಗಮನಿಸಿಕೊಂಡೇ ತನ್ನನ್ನು ವಿಸ್ತಾರಗೊಳಿಸಿಕೊಂಡಿದೆ. ದಿನಪತ್ರಿಕೆ, ವಾರಪತ್ರಿಕೆ, ಪಾಕ್ಷಿಕ, ಮಾಸಿಕ, ವಾರ್ಷಿಕ, ವಿಶೇಷ ಸಂಚಿಕೆ ಹೀಗೆ ಸಾಕಷ್ಟು ವೈವಿಧ್ಯತೆಗಳಿಲ್ಲಿವೆ. ಒಂದು ಪತ್ರಿಕೆಯ ಯಶಸ್ಸೆಂದರೆ ಅದು ನೇರವಾಗಿ ಆ ಭಾಷೆಯ ಯಶಸ್ಸು ಎಂದೇ ಪ್ರಧಾನವಾಗಿ ಚರ್ಚಿಸಬಹುದು. ಪತ್ರಿಕೆಯನ್ನು ಜನ ಒಪ್ಪಿದ್ದಾದರೂ ಅದು ಸುದ್ದಿ, ವಿಶ್ಲೇಷಣೆ, ವ್ಯಾಖ್ಯಾನ, ವಿಚಾರ ಎಂಬೆಲ್ಲಾ ಕಾರಣಗಳೇನೆ ಇದ್ದರೂ ಅದು ಒಂದು ಭಾಷೆಯ ಬಗೆಗಿನ ಅರಿವಿನ ಜನರನ್ನು ಒಳಗೊಂಡಿದೆ ಎಂದೇ ಅರ್ಥ. ಜನರ ಅಭಿರುಚಿಗೆ ತಕ್ಕಂತೆ ವಿಷಯ ವಿವರಿಸಲ್ಪಟ್ಟಂತೆ ಪೂರಕವಾದ ಭಾಷೆಯೂ ಅತ್ಯವಶ್ಯಕ. ಇದು ಮನಸ್ಥಿತಿಯನ್ನು, ಜನರ ಆಲೋಚನೆಯನ್ನು, ಭಿನ್ನವರ್ಗದ ಅಭಿರುಚಿ ಯನ್ನು ಹೇಳುವಂತಹುದು. ಕೆಲವು ಪತ್ರಿಕೆಗಳ ಭಾಷಾ ಪ್ರಯೋಗ ಶೀಲತೆಯು ಪತ್ರಿಕೆಗೆ ಯಶಸ್ಸನ್ನು ಕೆಲವೊಮ್ಮೆ ಅಪಯಶಸ್ಸನ್ನು ಒದಗಿಸಿದೆ ಎನ್ನುವುದಕ್ಕೆ ನಮ್ಮಲ್ಲಿ ಉದಾಹರಣೆಗಳಿವೆ.

ದಿನನಿತ್ಯದ ಸುದ್ದಿಗಳೊಂದಿಗೆ ಸಾಪ್ತಾಹಿಕಗಳಲ್ಲಿ ವಿಶೇಷಗಳೊಂದಿಗೆ ಪತ್ರಿಕೆಗಳು ಜನರ ಅಭಿರುಚಿಯನ್ನೆ ಜತನಮಾಡಿಕೊಂಡದ್ದು ಗಮನಾರ್ಹ. ಹಾಗೆಯೇ ಸಾಹಿತ್ಯ, ಕ್ರೀಡೆ, ಸಿನಿಮಾ ಇತ್ಯಾದಿ ಕೇಂದ್ರಿತ ವಿಷಯಗಳ ಕುರಿತೂ ಪತ್ರಿಕೆಗಳು ಪ್ರಕಟಗೊಳ್ಳುತ್ತಿರುವುದು ಅದು ಸಮಾಜದ ನಾನಾ ಮಜಲುಗಳಲ್ಲಿ ವಿಶೇಷ ಮನ್ನಣೆ ಪಡೆದುಕೊಂಡದ್ದು ಎಲ್ಲವೂ ಭಾಷೆಗೆ ಸಲ್ಲಿಸಿದ ಋಣವೆಂದೇ ನಾವು ಭಾವಿಸಬಹುದು. ಒಂದು ಅನನ್ಯ ಎನ್ನುವ ಪರಂಪರೆಯೊಂದು ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ದಾಖಲಾಗಿರುವುದು ಸ್ಮರಣೀಯ. ಆದರೆ ಈ ಪರಂಪರೆ ಹಾಗೆಯೇ 'ಮೌಲ್ಯ'ವೆಂದೇ ಪರಿಭಾವಿಸುವಷ್ಟರ ಮಟ್ಟಿನ ನಿರಾಳತೆ ಇಂದಿಗೂ ಉಳಿದಿದೆಯೆ ಎಂದರೆ ತಕ್ಷಣಕ್ಕೆ ಹೌದು ಎನ್ನುವಂತಿಲ್ಲ ಆಧುನಿಕತೆ ಪತ್ರಿಕಾ ಜಗತ್ತಿನ ಮೇಲೆಯೂ ಪ್ರಭಾವಬೀರಿದೆ.

ಈ ಮೊದಲಿಗೆ ಉದ್ಯಮವೆಂಬ ಮಾತನ್ನು ಗಮನಿಸಲಾಯಿತು. ಅಂದರೆ ಪತ್ರಿಕೆ ಎನ್ನುವುದೂ ಸಹ ಹೀಗೆ ಉದ್ಯಮವೇ ಆಗುವುದರೊಂದಿಗೆ ಅದರ ಸಾಧ್ಯತೆಗಳ ಸ್ವರೂಪವು ಭಿನ್ನವಾಯ್ತು. ಸ್ಪರ್ಧಾತ್ಮಕತೆ ಇಲ್ಲಿಯೂ ಕಾಲಿಟ್ಟಿತು. ಪತ್ರಿಕೆಗಳ ಸಂಖ್ಯೆ–ಸ್ವರೂಪಗಳೆಲ್ಲಾ ವಿಸ್ತರಿಸಲ್ಪಟ್ಟವು. ಆಕರ್ಷಣೆ ಎನ್ನುವುದು ಅನಿವಾರ್ಯವಾಯ್ತು. ಗುಣಮಟ್ಟಕಾಯ್ದುಕೊಳ್ಳುವಲ್ಲಿ ಏರುಪೇರಾಯ್ತು, ಸಹಜವಾಗಿಯೇ ವಿಚಾರದ ಮೌಲ್ಯಗಳಲ್ಲಿ ಕುಸಿತವೂ ಭಾಷೆಯಲ್ಲಿಯೂ ಜಾಳುತನಗಳು ಅನಿವಾರ್ಯವೆನಿಸಿದವು. ಜಾಹಿರಾತಿನ ಜಗತ್ತಿಗಿರುವ ವ್ಯಾಪಕತೆ, ಅದರ ಅನುವಾದದ ರೂಪದಲ್ಲಿ, ರೂಪಾಂತರದ ಸ್ವರೂಪದಲ್ಲಿ ವಿಚಿತ್ರವೆನ್ನುವಂತೆಯೇ ಪ್ರಭಾವಿಸಲ್ಪಟ್ಟವು. ಎಲ್ಲ ಬದಲಾವಣೆಯಂತೆ ಪತ್ರಿಕಾಬಳಗದ ಬದ್ಧತೆಯೂ ಶಿಥಿಲವಾದಂತೆನಿಸಿತು. ಸಹಜವಾಗಿಯೇ ಭಾಷೆ ಎನ್ನುವುದು ಭಾವನಾತ್ಮಕವಾಗುವ ಬದಲಿಗೆ 'ಬಂಡವಾಳದ ರೂಪ'ವಾಗಿ, ವ್ಯವಹಾರದ ಮಟ್ಟಕ್ಕಿಳಿವ ದುರಂತವನ್ನು ಎದುರಿಸಿತು. ಕೆಲವೊಮ್ಮೆ ಊಹಿಸಲಾಗದಂತಹ ರಾಜಕಾರಣವೂ ಇಲ್ಲಿ ನಡೆದುಹೋಯಿತೆ ಎನಿಸುವಂತಾಯ್ತು.

ಶುದ್ಧ ಭಾಷೆಯೊಂದಿಗೆ ಇಂಗ್ಲಿಷ್ ಮತ್ತಿತರ ಭಾಷೆಗಳನ್ನು ಆಕರ್ಷಣೆಯ ರೂಪದಲ್ಲಿ ಬಳಸಿದ್ದು ಕೆಲವೊಮ್ಮೆ ಅನ್ಯ ಭಾಷೆಯ ಪದಗಳನ್ನು, ಕೆಲವೊಮ್ಮೆ ವಾಕ್ಯಗಳನ್ನು ಯಥಾವತ್ತಾಗಿ ಬಳಸಿದ್ದು, ಓದುಗರನ್ನು ತುಂಬಾ ಸೂಕ್ಷ್ಮವಾಗಿಯೇ ದಿಕ್ಕುತಪ್ಪಿಸಿದ ಕ್ರಿಯೆಯೂ ಆಗಿತ್ತು. ಪತ್ರಿಕೆಗಳ ಸಂಖ್ಯೆ ಹೆಚ್ಚಿದಂತೆಲ್ಲಾ, ಅದಕ್ಕೆ ಅನಿವಾರ್ಯವಾದ ಸಿಬ್ಬಂದಿಗಳೂ ಎಷ್ಟರಮಟ್ಟಿಗೆ ಆಯಾ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿದ್ದರು ಎನ್ನುವ ಮಾನದಂಡಗಳೂ ಇಲ್ಲದಂತಾದದ್ದು ಸಹ ದುರಂತದಲ್ಲಿನ ಪಾಲನ್ನು ಹೆಚ್ಚಿಸಿತು. ಬದ್ಧತೆಗಳಿಲ್ಲದ ಮನಸ್ಥಿತಿ, ವೃತ್ತಿ, ಉದ್ಯಮ, ವ್ಯವಸ್ಥೆಗಳು ಯಾವ ಕಾಲಕ್ಕೂ ಒಳಿತನ್ನುಂಟುಮಾಡುವುದಾಗುವುದಿಲ್ಲ ಅದು ಕೆಲವು ಪತ್ರಿಕೆಗಳು–ಭಾಷೆ ಮತ್ತು ವಿಚಾರಗಳ ಸಂದರ್ಭದಲ್ಲಿಯೂ ನಡೆದದ್ದು ದುರಂತ. ಒಂದು ಕಾಲಕ್ಕೆ ಗಟ್ಟಿಯಾಗಿ ಉಚ್ಚರಿಸಲಾಗದ ಪದಗಳು, ಮಾತುಗಳು, ವಾಕ್ಯಗಳು ಪತ್ರಿಕೆಗಳ ಅಭಿವ್ಯಕ್ತಿಯ ಗುಣಗಳಾದದ್ದನ್ನು ಯಾವ ನೆಲೆಯಲ್ಲಿ ಭಾಷೆಯ ಬಗೆಗಿನ ಉದ್ಧಾರದ ಪ್ರಯೋಗವೆಂದು ಕರೆಯಲಾದೀತು?.

ಒಟ್ಟಾರೆಯಾಗಿ ಒಂದು ಕಾಲಕ್ಕೆ ಕನ್ನಡ ಭಾಷೆಯ ಶ್ರೀಮಂತಿಕೆಗೆ ಅಪಾರ ಕೊಡುಗೆ ನೀಡಿದ್ದ ಪತ್ರಿಕೆಗಳಲ್ಲಿ ಕೆಲವು ಇಂದಿಗೆ ಸವಾಲಾಗಿರುವುದು ಸತ್ಯ. ಪತ್ರಿಕೆಗಳು ಓದುಗರನ್ನು, ಅಕ್ಷರಸ್ಥರನ್ನು ಕೇಂದ್ರೀಕರಿಸಿಕೊಂಡ ಮಾಧ್ಯಮ.

ಇದರಾಚೆಗೆ ನಮ್ಮಲ್ಲಿ ರೇಡಿಯೋ (ಆಕಾಶವಾಣಿ) ಆವಿಷ್ಕಾರ ಆರಂಭಕ್ಕೆ ಒಂದು ಅದ್ಭುತವಾದ ಮಾಧ್ಯಮವೇ ಆಗಿದ್ದು ಇತಿಹಾಸ. ಇದು ಓದುಗರಾಚೆಗೆ ಈ ನೆಲದ ಬಹುಜನ ಅನಕ್ಷರಸ್ಥರನ್ನು ತಲುಪಿದ್ದು ಕ್ರಾಂತಿಕಾರಕವಾದ ವಿಚಾರವೇ ಆಗಿತ್ತೆನ್ನಬಹುದು.

ಈ ದೇಶದ ನಾಡಿನ ಆಗುಹೋಗುಗಳ ಬಗೆಗಿನ ವಿಚಾರವನ್ನು, ಆರೋಗ್ಯ, ಕೃಷಿ ಮತ್ತಿತರ ಪೂರಕ ಸಂಗತಿಗಳನ್ನು ಹಾಗೆಯೇ ನಾಟಕ, ಸಿನಿಮಾ, ಹಾಡುಗಳೇ ಮೊದಲಾದ ಮನರಂಜನೆಯ ಬಗೆಯನ್ನು ರೇಡಿಯೋಗಳು ನಮ್ಮ ಸಮುದಾಯಗಳಿಗೆ ಒದಗಿಸಿದ್ದು, ಅದು ಅಪಾರ ಜನಪ್ರಿಯತೆಯನ್ನು ಗಳಿಸಿದ್ದು ಈಗ ಇತಿಹಾಸ. ರೇಡಿಯೋ ಹೊಂದುವುದೇ ಪ್ರತಿಷ್ಠೆಯಾಗಿದ್ದಂತಹ ಹೆಮ್ಮೆಗಳಿದ್ದವು. ಕೆಲವರು ತಾವು ಹೋದಲ್ಲಿ ಬಂದಲ್ಲಿ ಟ್ರಾನ್ಸಿಸ್ಟರ್‌ಗಳನ್ನು ಕೊಂಡೊಯ್ಯುವುದನ್ನು ಬದುಕಿನ ಒಂದು ಕ್ರಮವನ್ನಾಗಿಸಿಕೊಂಡದ್ದು ಉಂಟು. ಜನರ ಅಗತ್ಯಕ್ಕನು ಗುಣವಾಗಿಯೇ ರೇಡಿಯೋಗಳ ಗಾತ್ರ, ಸೌಲಭ್ಯಗಳನ್ನು ಒದಗಿಸುವ ಪ್ರಯತ್ನಗಳೂ ನಡೆದಿದ್ದವು. ಇಲ್ಲಿ ಖಂಡಿತವಾಗಿಯೂ ನಮ್ಮ ಭಾಷೆಯ ಸಾಂಸ್ಕೃತಿಕ ಸೌರಭವೇ ಪ್ರಸರಿಸಿತ್ತೆನ್ನುವುದರಲ್ಲಿ ಯಾವುದೇ ಅನುಮಾನ ಗಳಿರಲಿಲ್ಲ. ಜನರ ನಡುವೆ ಒಂದು ಅವಿನಾಭಾವವಾದ ಸಂಬಂಧವನ್ನೇ ರೇಡಿಯೋ ಜಗತ್ತು ಸೃಷ್ಟಿಸಿತ್ತು ಮತ್ತದು ಅತ್ಯಂತ ವಿಶಿಷ್ಟವಾದ, ಶ್ರೇಷ್ಠವಾದ, ಗುಣಾತ್ಮಕವಾದ ಮಾಧ್ಯಮವಾಗಿತ್ತು. ಭಾಷೆಯ ಸೊಗಡು, ವೈವಿಧ್ಯತೆ, ಸೊಬಗಿಗೆ, ಪ್ರಾದೇಶಿಕ ಅನನ್ಯತೆಗೆ ರೇಡಿಯೋ ನೀಡಿದ ಕೊಡುಗೆ ಅಪಾರವೆಂದೇ ಹೇಳಬಹುದು. ಭಾಷೆಯ ಉಚ್ಛಾರ, ವ್ಯಾಕರಣಬದ್ಧತೆ, ಸುಭಗತೆ, ಸುಶ್ರಾವ್ಯ ಇವೇ ಮೊದಲಾದ ಲಕ್ಷಣಗಳು ಅನಿವಾರ್ಯವಾಗಿದ್ದ ರೇಡಿಯೋ ಜಾಲದಲ್ಲಿ ವೃತ್ತಿ ನಿರ್ವಹಣೆ, ನಿರೂಪಣೆ ಜವಾಬ್ದಾರಿ ಯುತವಾದ ಕಾರ್ಯವಾಗಿತ್ತು. ಕೇಳಿಸುವ ಮೂಲಕವೇ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಿದ್ದ ರೇಡಿಯೋಗಳು ಸಹಜವಾಗಿಯೇ ಭಾಷೆ ಬಗೆಗೊಂದು ಬದ್ಧತೆಯನ್ನು, ಎಚ್ಚರವನ್ನು ಹೊಂದಿರಲೇಬೇಕಿತ್ತು. ಇಂತಲ್ಲಿ ಪರಸ್ಪರವಾದ ಅಭಿವೃದ್ಧಿಯೂ ನಡೆದಿತ್ತೆನ್ನುವುದು ಉಲ್ಲೇಖಾರ್ಹ.

ಇಂದಿಗೂ ರೇಡಿಯೋ ತನ್ನ ಅಸ್ತಿತ್ವವನ್ನುಳಿಸಿಕೊಂಡಿದ್ದರೂ ಆಧುನಿಕ ಹೊಸ ಬಗೆಯ ಆವಿಷ್ಕಾರಗಳ ನಡುವೆ, ದೃಶ್ಯಮಾಧ್ಯಮಗಳ ಅಬ್ಬರದ ನಡುವೆ ತುಸು ಮಂಕಾಗಿದೆ. ರಾಷ್ಟ್ರೀಯ ಜಾಲಗಳಾಗಿ ಕಾರ್ಯನಿರ್ವಹಿಸುತ್ತಿರುವ ಈ ರೇಡಿಯೋಗಳಿಗೆ ಮತ್ತೆ 'ಖಾಸಗಿ' ಜಾಲಗಳಿಂದಲೇ ತೊಂದರೆಗಳಿವೆ. 'ಎಫ್.ಎಂ'ನ ರೂಪದಲ್ಲಿ ಅವತಾರ ಎತ್ತಿರುವ ಈ ಖಾಸಗಿ ರೇಡಿಯೋಗಳು ಮತ್ತದೇ ವ್ಯವಹಾರದ ಗುರಿಯಿಂದಲೇ ರೂಪುಗೊಂಡಿವೆ. ಅವುಗಳ ಕಾರ್ಯಕ್ರಮಗಳಲ್ಲಿ ಯಾವುದೇ ಸೈದ್ಧಾಂತಿಕ ಪ್ರಜ್ಞೆಗಳನ್ನಾಗಲಿ, ಗಂಭೀರವಾದ ಜ್ಞಾನದ ಪ್ರಸಾರಕ್ಕೆ ಮುಂದಾಗಬೇಕೆಂದಾಗಲಿ ನಿರೀಕ್ಷಿಸುವಂತಿಲ್ಲ. ಮೂಲತಃ ಅವುಗಳ ಉದ್ದೇಶವೇ 'ವ್ಯಾಪಾರ'. ಸುಲಭ ಜನಪ್ರಿಯತೆಯ ಕಾರಣಕ್ಕೆ ಕಾರ್ಯಕ್ರಮ ರೂಪಿಸುವ ಇವರಲ್ಲಿ ಭಾಷೆ ಕುರಿತು ತುಂಬಾ ನಿರೀಕ್ಷೆಯನ್ನಿರಿಸಿಕೊಳ್ಳುವು ದಾಗುವುದಿಲ್ಲ. ಅವುಗಳ ಕಾರ್ಯಕ್ರಮವನ್ನು ಕೇಳಿದ ಯಾರಿಗಾದ'ರೂ ಇದು ಅರ್ಥವಾಗಬಹುದು. ಅವರ ಭಾಷೆ, ಚಿಂತನೆ, ಚರ್ಚೆ, ವಾಗ್ವಾದ ಇವುಗಳಲೆಲ್ಲಾ ಕೊರತೆಗಳೇ ಕಾಡುವಾಗ ಒಂದು ವಿಷಾದವು ಸುಳಿಯತೊಡಗುತ್ತದೆ.

ನಗರಕೇಂದ್ರಿತವಾದ ಈ ವಾಹಿನಿಗಳು ಈಗಾಗಲೇ ಇಂಗ್ಲಿಷ್ ಮತ್ತು ಇತರ ಭಾಷೆಗಳ ಪ್ರಭಾವವನ್ನೇ ಆಧುನಿಕ ಶೈಲಿಯ ಜೀವನವೆಂದು ಭಾವಿಸಿಕೊಂಡಿರುವ ವಿಪರ್ಯಾಸಕ್ಕೆ ಮತ್ತಷ್ಟು ಪೂರಕವಾದದ್ದನೇ ಒದಗಿಸಿ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತವೆ ಎಂದರೆ ತಪ್ಪಾಗಲಿಕ್ಕಿಲ್ಲ. ಖಾಸಗೀಕರಣ ಉಂಟುಮಾಡಿರುವ ಗರಿಷ್ಟ ಅಪಾಯ ಭಾಷೆಯನ್ನೇ ಕಾಡುತ್ತಿರುವುದು ಇಂತಲ್ಲಿ ಸ್ಫುಟವಾಗುವಂತಹುದು. ಇದು ಕೂಡ ಕನ್ನಡ ಭಾಷೆಗಿರುವ ಮುಖ್ಯ ಸಮಕಾಲೀನ ಸಮಸ್ಯೆಗಳಲ್ಲಿ ಒಂದು 'ಬದ್ಧತೆ' ಈ ನೆಲದ ಋಣದಲ್ಲಿರುವವರೆಲ್ಲರಿಗೂ ಇರಬೇಕೆನ್ನುವುದೊಂದು ಸಾಮಾನ್ಯ ಜ್ಞಾನ. ಅದರಾಚೆಗೆ ಇಂತಲ್ಲಿ ಸರಕಾರಕ್ಕೆ, ಸಾರ್ವಜನಿಕರಿಗೆ ನಿಯಂತ್ರಣದ ಒಂದಿಷ್ಟು ಅಧಿಕಾರವಾದರೂ ಇರಬೇಕು. ಕೇಳುಗರೂ ಜಾಗೃತವಾಗ ಬೇಕೆನ್ನುವುದು ಒಂದು ಮುಖ್ಯ ಕಳಕಳಿ. ಇದು ಸಾಧ್ಯವೆ? ಗಂಭೀರ ಪ್ರಶ್ನೆ.

## ದೂರದರ್ಶನ ಮತ್ತು ಖಾಸಗಿ ವಾಹಿನಿಗಳು

ಪತ್ರಿಕೆಗಳು ಅಕ್ಷರಮಾಧ್ಯಮದ ವಾಹಕಗಳಾದರೆ ದೂರದರ್ಶನ ದೃಶ್ಯಮಾಧ್ಯಮ. ಇದು ಸಹಜವಾಗಿಯೇ ನೋಡುವ, ಕೇಳುವ ಎರಡೂ ಮುಖ್ಯಲಕ್ಷಣಗಳನ್ನು ಒಳಗೊಂಡದ್ದರಿಂದಲೂ ಜನಪ್ರಿಯತೆಯೆನ್ನುವುದು ನಿರಂತರವಾಗಿತ್ತೆನ್ನಬಹುದು. ಮನೆಯ ಒಳಗೇ ಕಿರುತೆರೆಯೊಂದು ಜಗತ್ತನ್ನು ಅನಾವರಣ ಮಾಡುವ ತಂತ್ರಜ್ಞಾನದ ಕಲ್ಪನೆಯೇ ಅನನ್ಯವೆಂದುಕೊಂಡ ಜನರು ಅದರ ಬಗೆಗೆ ಅತೀವ ವ್ಯಾಮೋಹ ಹೊಂದಿದ್ದು ಸಹಜವೇ ಆಗಿತ್ತು.

ನಮ್ಮ ದೇಶದಲ್ಲಿ ಮೊದಲಿಗೆ ದೂರದರ್ಶನವು ಎಲ್ಲದರಂತೆ ರಾಷ್ಟ್ರೀಯ ಜಾಲವಾಗಿಯೇ ಅನಾವರಣಗೊಂಡದ್ದು ಅರ್ಥಪೂರ್ಣ ವಾಗಿತ್ತು. ತನ್ಮೂಲಕ ಸರ್ಕಾರ ಮತ್ತು ಜನಸಾಮಾನ್ಯರ ನಡುವೆ ಒಂದು ವಿಶಿಷ್ಟವಾದ ಸಂಬಂಧವನ್ನು ಸ್ಥಾಪಿಸಿಕೊಂಡದ್ದು ಗಮನಾರ್ಹ. ರಾಜ್ಯ, ದೇಶ, ವಿದೇಶ ಸುದ್ದಿ–ಸಂಗತಿಗಳೊಂದಿಗೆ ಇತರ ಪೂರಕ ಮಾಹಿತಿಗಳನ್ನು, ಜ್ಞಾನವನ್ನು, ಶಿಕ್ಷಣವನ್ನು ಒದಗಿಸಲು ಯತ್ನಿಸಿದ್ದು ಮುಖ್ಯವಾಗಿತ್ತು ಮನರಂಜನೆಯ ಸ್ವರೂಪಕ್ಕೂ ಒಂದು ಆರೋಗ್ಯಪೂರ್ಣವಾದ ಚೌಕಟ್ಟಿತ್ತು ಎನ್ನುವುದೇ ದೂರದರ್ಶನದ ಮಹತ್ವವನ್ನು ಮನನಮಾಡಿಸುವಂತಹುದು. ಬಹುಜನರ ಮೇಲೆ ಪ್ರಭಾವಬೀರಿ, ಬಹುಜನಪ್ರಿಯಮಾಧ್ಯಮವಾಗಿದ್ದ ದೂರದರ್ಶನ ರಾಷ್ಟ್ರೀಯ ಜಾಲದೊಂದಿಗೆ ಪ್ರಾದೇಶಿಕ ಜಾಲಗಳಲ್ಲಿ ಪ್ರಸಾರವಾಗುತ್ತಾ ಖಂಡಿತವಾಗಿಯೂ ಒಂದಷ್ಟು ಆರೋಗ್ಯಕರವಾದ ಪ್ರಜ್ಞೆಯನ್ನು ಈ ನೆಲದಲ್ಲಿ ರೂಪಿಸಿದ್ದು ಸುಳ್ಳಲ್ಲ.

ಎಲ್ಲವೂ ಸರಿಯಿತ್ತು ಎಂದುಕೊಂಡಲ್ಲೇ ಇಲ್ಲಿಯೂ ಖಾಸಗೀಕರಣದ ಪ್ರಭಾವ ಗಾಢವಾಯ್ತು. ಮನರಂಜನೆಯ ರೂಪದಲ್ಲಿ ಒಂದೊಂದಾಗಿ ಆರಂಭಗೊಂಡ ಖಾಸಗಿ ವಾಹಿನಿಗಳು ಮತ್ತದೇ ವ್ಯಾಪಾರಿ ಮನೋಭಾವದ ಸ್ಪರ್ಧಾತ್ಮಕ ಜಗತ್ತನ್ನು ಜನಪ್ರಿಯತೆಯ ಮಾನದಂಡದಿಂದ ಪರಿಶೀಲಿಸಿದವು. ಇಂದು ನೂರಾರು ವಾಹಿನಿಗಳು, ಒಂದೊಂದು ವ್ಯಾಪ್ತಿಯನ್ನು ಗೊತ್ತುಪಡಿಸಿಕೊಂಡಂತೆ ಸುದ್ದಿವಾಹಿನಿ, ಸಂಗೀತವಾಹಿನಿ, ಚಲನಚಿತ್ರವಾಹಿನಿ, ಧರ್ಮವಾಹಿನಿ –ಹೀಗೆ ಹಲವಾರು ಖಾಸಗಿ ವಾಹಿನಿಗಳು ಇಂದು ಕಾರ್ಯನಿರ್ವಹಿಸುತ್ತಿವೆ. ಇದರೊಂದಿಗೆ ಜಗತ್ತಿನ ಇತರ ಭಾಷೆಯ ವಾಹಿನಿಗಳು ಇಂದು ಬೆರಳ ತುದಿಯಲ್ಲಿವೆ. ಸಹಜವಾಗಿಯೇ ವಿಷಯ, ವ್ಯಾಪ್ತಿ, ಗುಣಮಟ್ಟ, ತಾಂತ್ರಿಕತೆ ಎಂಬೆಲ್ಲಾ ನೆಲೆಗಳು ಒಂದರಿಂದ ಒಂದಕ್ಕೆ ಭಿನ್ನವಾಗಿರುವ ಹೊತ್ತಿಗೆ ವಾಹಿನಿಗಳ ನಡುವೆಯೂ ಆರೋಗ್ಯಕರವಾದ ಸ್ಪರ್ಧೆಗಳೇನೂ ನಡೆಯುವಂತಿಲ್ಲ. ಇಲ್ಲಿಯೂ ಭಾಷೆಗೆ ಅಪಾರವಾದ ಹೊಡೆತವಿದೆ. ಸಹಜವಾಗಿಯೇ ಅತ್ಯಾಕರ್ಷಕವಾದ ಈ ದೃಶ್ಯಮಾಧ್ಯಮ ಎಲ್ಲಾ ವರ್ಗದ ಜನರನ್ನು ಕೇಂದ್ರವಾಗಿರಿಸಿಕೊಂಡು ನಿರ್ದಿಷ್ಟ ಸಮಯವನ್ನು ಗೊತ್ತುಪಡಿಸಿ ಆಕರ್ಷಣೆಯನ್ನು, ಜನಪ್ರಿಯತೆಯ ಸುಲಭಹಾದಿಗಳನ್ನು ಹುಡುಕಿ ಕಾರ್ಯಕ್ರಮ ರೂಪಿಸುವಾಗಲೂ 'ದೇಸೀಭಾಷೆ' ಕನ್ನಡಭಾಷೆ ಇಡಿಯಾಗಿ ತನ್ನ ಶುದ್ಧತೆಯನ್ನು ಉಳಿಸಿಕೊಳ್ಳುವುದಾಗುತ್ತಿಲ್ಲ.

ಇಂದು ಜಾಗತೀಕರಣ ವ್ಯಾಪಾರೀಕರಣವೇ ಆಗಿರುವ ಹೊತ್ತಿನಲ್ಲಿ ಎಲ್ಲಕ್ಕೂ ಸುಲಭವಾದ ಮಾರ್ಗವನ್ನೇ ಹುಡುಕುತ್ತಿರುವಾಗ ಒಂದು ಭಾಷೆಯ ಶ್ರೇಷ್ಠತೆಯನ್ನು ಅದರ ಶುದ್ಧತೆಯೊಂದಿಗೆ ಕಾಯ್ದುಕೊಳ್ಳುವುದು ಸುಲಭವಿಲ್ಲ ಮತ್ತು ವ್ಯಾಪಾರೀಕರಣವೇ ಮುಖ್ಯವಾಗಿರುವ ಖಾಸಗಿ ಸಂಸ್ಥೆಗಳಿಗೆ ಈ ಬಗೆಯ ಬದ್ಧತೆಯೂ ಖಂಡಿತ ಮುಖ್ಯವಲ್ಲ, ಅನಿವಾರ್ಯವೂ ಅಲ್ಲ. ಎಲ್ಲವನ್ನು ಲಾಭದ ದೃಷ್ಟಿಯಿಂದಲೇ ನೋಡುವಾಗ ನಿರೂಪಣಾ ಮಾಧ್ಯಮವಾಗಿ ಭಾಷೆಯನ್ನಾದರೂ ಮೌಲ್ಯವೆಂದು ಅವರು ನೋಡುತ್ತಾರೆ ಎಂದು ನಿರೀಕ್ಷಿಸುವುದಾದರೂ ಹೇಗೆ?

ಇಂದು ಎಂತಹದ್ದೇ ಸ್ಥಳವಾಗಲಿ ತಲುಪದೇ ಇರಲು ಸಾಧ್ಯವೇ ಇಲ್ಲ ಎನ್ನುವಂತಹ ತಾಂತ್ರಿಕ ಕ್ರಾಂತಿಯ ಫಲವಾಗಿ ಯಾವುದೇ ಭೇದಗಳಿಲ್ಲದಂತೆ ಮನೆ–ಮನೆಗಳನ್ನು ದೂರದರ್ಶನಗಳು ತಲುಪಿಬಿಟ್ಟಿವೆ. ಅವುಗಳು ಇಲ್ಲದೆ ಬದುಕನ್ನು ಕಲ್ಪಿಸುವುದೇ ಸಾಧ್ಯವಿಲ್ಲ ಎಂಬ ಮನಸ್ಥಿತಿಯನ್ನು ಇಲ್ಲಿನ ಜನ ತಲುಪಿಯಾಗಿದೆ. ಇಂತಲ್ಲಿ ಆ ವಾಹಿನಿಗಳು ರೂಪಿಸುವ ಕಾರ್ಯಕ್ರಮಗಳು, ನಿರೂಪಣಾಕ್ರಮ, ಅಭಿವ್ಯಕ್ತಿಸ್ವರೂಪ, ನಿರೂಪಕರಭಾಷೆ, ಶಿಕ್ಷಣ, ಅರ್ಹತೆಗಳು ಎಲ್ಲವೂ ಭಾಷೆಯನ್ನು ಗಂಭೀರವಾಗಿ ಕೇಂದ್ರೀಕರಿಸಿದ ಮುಖ್ಯ ಆಯಾಮಗಳೇ ಆಗಿವೆ. ಇಲ್ಲಿಯೂ ಮುಖ್ಯವಾಗಿ ಇಂಗ್ಲಿಷ್ ಭ್ರಮೆ ಎಷ್ಟರಮಟ್ಟಿಗೆ ಆವರಿಸಿಕೊಂಡಿದೆ ಎಂದರೆ ಕನ್ನಡದ್ದೇ ನಾಡು, ಸುದ್ದಿ, ಪ್ರೇಕ್ಷಕರ ನಡುವೆ ಮಾಧ್ಯಮಗಳು ಬಳಸುವ

ಭಾಷೆಯಲ್ಲಿ ಕನ್ನಡ ಪದಗಳನ್ನು ಹುಡುಕಿ ಲೆಕ್ಕಹಾಕುವಷ್ಟರ ಮಟ್ಟಿಗೆ ಇಂಗ್ಲಿಷ್ ಪ್ರಭಾವವಿರುತ್ತದೆ. ಕಾರ್ಯಕ್ರಮಗಳ ಶೀರ್ಷಿಕೆಗಳಾಗಲಿ, ಸಂದರ್ಶನದ ಸ್ವರೂಪಗಳಾಗಲಿ, ಶ್ರೀಸಾಮಾನ್ಯರೊಂದಿಗಿನ ನೇರ ಮಾತುಕತೆಯ ಕಾರ್ಯಕ್ರಮಗಳಲ್ಲಾಗಲಿ ಹೀಗೇ ಬರೀ ಕಲಸು ಮೇಲೋಗರ, ವಿಚಿತ್ರ ಭಾಷಾಬಳಕೆ, ಎಗ್ಗಿಲ್ಲದ ದೋಷ, ಉಚ್ಚಾರ, ಪದ, ವಾಕ್ಯ ಎಲ್ಲವೂ ಅಸಂಬದ್ಧ. ಅತೀ ಎನಿಸುವ ಇಂಗ್ಲಿಷ್ ವ್ಯಾಮೋಹ ಆ ಭ್ರಮೆಯೇ ಶ್ರೇಷ್ಠವೆಂಬ ವಿಚಿತ್ರ ನಂಬಿಕೆ ಹೀಗೆ ಎಲ್ಲವು ಅಯೋಮಯ ಎಂಬಂತಹ ಸ್ಥಿತಿಯಲ್ಲಿ ಇಂದು ಬಹುಪಾಲು ಖಾಸಗಿ ವಾಹಿನಿಗಳು ಕನ್ನಡ–ಕರ್ನಾಟಕವೆನ್ನುವುದನ್ನು ಬರೀ ಬಾಯಿಮಾತಿನ ಪದಗಳಾಗಿ ಬಳಸುತ್ತಲೇ ಭಾಷಾದ್ರೋಹಕ್ಕೆ ಮುಂದಾದಂತಿವೆ. ಇದು ಸಾಮಾನ್ಯವಾದ ಹೊಡೆತವಲ್ಲ. ಇದರಿಂದ ಶಿಥಿಲಗೊಳ್ಳುವ ಭಾಷೆಯನ್ನು ವ್ಯವಸ್ಥಿತ ಗೊಳಿಸುವುದು ಸುಲಭವಲ್ಲ.

ದಿನೇ ದಿನೇ ಇದು ಗಂಭೀರ ಸಮಸ್ಯೆಯೇ ಆಗಿಬಿಡುವ ಅಪಾಯವಿದೆ. ಅನಕ್ಷರಸ್ಥರನ್ನು, ಎಲ್ಲಾ ಗ್ರಾಮ, ಸಮುದಾಯ, ಸಮಾಜವನ್ನು ತಲುಪಬಲ್ಲ ಈ ಪ್ರಭಾವಿ ಮಾಧ್ಯಮದಲ್ಲಿ ಒಂದು ದೇಸೀ ಭಾಷೆ ಹೀಗೆ ತನ್ನ ಅಸ್ತಿತ್ವವನ್ನು ಗೊಂದಲವಾಗಿಸಿಕೊಂಡರೆ ಅದು ನೇರವಾಗಿ ಸಾಮಾನ್ಯರ ಮಾತು–ಅಭಿಪ್ರಾಯಗಳ ಮೇಲೆಯೂ ಗಾಢವಾದ ಪ್ರಭಾವಬೀರುತ್ತದೆ. ಪದೇ ಪದೇ ಬಳಸುವ ಮಾತುಗಳು ತಪ್ಪಾದರೂ ಅಸಂಬದ್ಧ ಎನಿಸಿದರೂ ಕೊನೆಗೆ ಅದೇ ನಿಜ ಎನಿಸುವ ಭ್ರಮೆಯಾದರೂ ಸಾಧ್ಯ. ಇದು ಈ ಹೊತ್ತಿನ ಅತೀ ದೊಡ್ಡ ಆಪತ್ತು. ತುರ್ತಾಗಿ ಎಚ್ಚೆತ್ತುಕೊಳ್ಳಲೇಬೇಕಿದೆ. ಮತ್ತೆ ಸರ್ಕಾರ, ಚಿಂತಕರು, ಹೋರಾಟಗಾರರು ಮುಂತಾದವರೆಲ್ಲ ಈ ನಿಟ್ಟಿನಲ್ಲಿ ಗಮನಹರಿಸಲೇಬೇಕಿದೆ. ಇದು ಬಹುಜನರ ಅಸ್ತಿತ್ವದ ಪ್ರಶ್ನೆ.

**ಸಿನಿಮಾ ಜಗತ್ತು**

ಮನುಷ್ಯ ತನ್ನ ನಾಗರೀಕ ಬದುಕಿನೊಂದಿಗೇ ಮನರಂಜನೆಯ ಹುಡುಕಾಟಕ್ಕೆ ತೊಡಗಿದ್ದ. ನಾಟಕದಂತಹ ಬಹುಮುಖ್ಯ ಪ್ರಕಾರದ ಪ್ರಯೋಗವೇ ಅತ್ಯಂತ ಶ್ರೇಷ್ಠವಾದುದು ಎಂಬುದರಲ್ಲಿ ಎರಡು ಮಾತಿಲ್ಲ. ಅದರ ಮುಂದುವರಿದ ಮತ್ತೊಂದು ಆಧುನಿಕ ಉತ್ಕರ್ಷ ಸಿನಿಮಾಲೋಕದ ಮೂಲಕ ತೆರೆದುಕೊಂಡಿತು. ಮನುಷ್ಯನನ್ನು ಬಹು ಆಕರ್ಷಕವಾಗಿ ಆವರಿಸಿಕೊಂಡ ಈ ಮಾಧ್ಯಮ ಇಂದಿಗೂ ಬದಲಾದ ಜಗತ್ತಿನೊಂದಿಗೆ ಅನುಸಂಧಾನ ನಡೆಸುತ್ತಾ ತನ್ನ ಜನಪ್ರಿಯತೆಯನ್ನು ನಿರಂತರವಾಗಿ ಕಾಯ್ದುಕೊಂಡಿದೆ. ಮತ್ತೆ ಮತ್ತೆ ಹೊಸಕಾಲ, ಹೊಸಜಗತ್ತು, ಜನರಿಗೆ ಅಗತ್ಯವಿರುವಂತ ನಿರಂತರ ಪ್ರಯೋಗಕ್ಕೆ ಈ ಮಾಧ್ಯಮ ಸಜ್ಜಾಗಿದೆ. ಹಾಗಾಗಿ ಸಹಜವಾಗಿಯೇ ಇಲ್ಲಿ ಹೆಚ್ಚು ಜನರ ಆಸಕ್ತಿಕೇಂದ್ರವಾಗಿದೆ. ಇದು ಅತ್ಯಂತ ಪ್ರಭಾವಿ ಮನರಂಜನಾ ಮಾಧ್ಯಮವಾಗುವ ಮೂಲಕ ಅನೇಕ ಸಾಧ್ಯತೆಗಳಿಗೆಲ್ಲಾ ತೆರೆದುಕೊಳ್ಳುವ ಮುಕ್ತ ಅವಕಾಶವಿಲ್ಲಿದೆ.

ಭಾರತೀಯ ಸಾಂಸ್ಕೃತಿಕ ಲೋಕವನ್ನು ಅಪಾರವಾಗಿ ಪ್ರಭಾವಿಸಿದ ಮಾಧ್ಯಮ ಕರ್ನಾಟಕದ ಸಂದರ್ಭದಲ್ಲಿಯೂ ಶ್ರೇಷ್ಠ ಮತ್ತು ಅತ್ಯಂತ ಜನಪ್ರಿಯ ಎನ್ನುವ ಅವಕಾಶಕ್ಕೆ ಪಾತ್ರವಾಗಿತ್ತು. ಆ ಕಾರಣಕ್ಕಾಗಿಯೇ ಯಶಸ್ವಿ ಎಪ್ಪತ್ತೈದು ವರ್ಷಗಳನ್ನು ಪೂರೈಸುವುದು ಸಾಧ್ಯವಾಗಿದೆ. ಕಲೆಯ ಮೂಲರೂಪದೊಂದಿಗೆ ಆರಂಭವಾದ ಸಿನಿಮಾ ಇಂದು ಬೃಹತ್ ಉದ್ಯಮವಾಗಿರುವಲ್ಲಿಯೇ ಅದರ ವ್ಯಾಪಕತೆಯನ್ನು ಊಹಿಸಬಹುದು.

ಇಂತಹ ಸಿನಿಮಾ ದೇಶೀಭಾಷೆಗಳ ಸಂದರ್ಭದಲ್ಲಿ ಅಪಾರವಾದ ಕೊಡುಗೆಯನ್ನು ನೀಡಿದೆ. ಬದುಕೇ ಕತೆಯಾಗಿ, ದೃಶ್ಯವಾಗುವ ಈ ಪ್ರಕಾರದಲ್ಲಿ ಸಂಭಾಷಣೆ ಮಾತಿನ ಮುಖ್ಯ ರೂಪವೇ ಆಗುವುದರಿಂದ ಅದು ಹೆಚ್ಚು ಜನರನ್ನು ತಲುಪಬೇಕಿರುವುದರಿಂದಲೂ ಅಲ್ಲಿನ ಜನರದ್ದೇ ಭಾಷೆ ಸಿನಿಮಾದ ಆದ್ಯತೆಯೂ ಆಗುತ್ತದೆ. ಹಾಗಲ್ಲದೆ ನಮ್ಮ ಸಿನಿಮಾಗಳಲ್ಲಿ ಹಾಡುಗಳದ್ದೇ ಒಂದು ವಿಶಿಷ್ಟ ಪರಂಪರೆ ಇರುವುದರಿಂದಲೂ ಭಾಷೆಯ ಮೌಲ್ಯ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಗಳೂ ಉಂಟು.

ಸಿನಿಮಾಗಳು ವಸ್ತುಕೇಂದ್ರಿತವಾಗುವುದರಿಂದಲೂ ಜಾನಪದ, ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಎನ್ನುವ ಸಾಮಾನ್ಯ ವಿಂಗಡಣೆ ಗಳಲ್ಲೂ ಹಲವು ಆಯಾಮಗಳು ವಿಭಿನ್ನ ನೆಲೆಯಲ್ಲಿಯೂ ನುಡಿ ಮತ್ತು ನಾಡಿನ ಸಂದರ್ಭಗಳಲ್ಲಿ ಕಂಡುಬರುವುದುಂಟು, ಇಂತಲ್ಲಿ ಸಹಜವಾಗಿಯೇ ಭಾಷೆಯ ಸೊಗಡು, ವೈವಿಧ್ಯತೆ, ವಿಶೇಷ ಅರ್ಥಗಳೆಲ್ಲಾ ಹೊಸತನ ದೊಂದಿಗೆ ಉಳಿದು-ಬೆಳೆಯುವ ಅವಕಾಶವಿದೆ. ಕನ್ನಡದ ಸಂದರ್ಭದಲ್ಲಿ ಇದು ಅತ್ಯಂತ ಆಪ್ತವಾದ ರೂಪದಿಂದಲೇ ಕಾಣಸಿಗುತ್ತದೆ. ಡಾ. ರಾಜ್‌ರಂತ‌ಹ ಶ್ರೇಷ್ಠ ನಟರೊಬ್ಬರು ಈ ನೆಲದ ಸಾಂಸ್ಕೃತಿಕ ಪ್ರತಿನಿಧಿಯಂತಾಗುವುದು ಸಿನಿಮಾಲೋಕದ ಸಾರ್ಥಕ ಯಶಸ್ಸಿನ ಸ್ವರೂಪವಾಗುತ್ತದೆ.

ಸಾಮಾಜಿಕ ಸಿನಿಮಾಗಳನ್ನು ಹೊರತುಪಡಿಸಿದರೆ ನಮ್ಮಲ್ಲಿ ಜಾನಪದ, ಐತಿಹಾಸಿಕ, ಪೌರಾಣಿಕ ಚಲನಚಿತ್ರಗಳು ಸಾಕಷ್ಟು ಪ್ರಮಾಣದಲ್ಲಿ ಬಂದಿವೆ. ಅಲ್ಲೆಲ್ಲಾ ಭಾಷೆ ಅತ್ಯುತ್ತಮವೆನ್ನುವಂತೆ ಬಳಕೆಯಾಗಿದೆ. ತನ್ಮೂಲಕ ಅದು ಸಾಮಾನ್ಯರ ನಡುವೆ ಒಂದು ವಿಶೇಷ ಪ್ರಯೋಗವಾಗಿಯೂ ಕೆಲಸ ಮಾಡಿರುವುದುಂಟು. ಈಚಿನ ದಿನಗಳಲ್ಲಿ ಇಂತಹ ಗಂಭೀರ ಪ್ರಯತ್ನಗಳಿಲ್ಲ ಎನ್ನುವುದಿಲ್ಲಿ ಉಲ್ಲೇಖಾರ್ಹ. ಅದರೊಂದಿಗೆ ಭಾಷೆ ಕುರಿತ ಕಳಕಳಿಯೂ ಕಣ್ಮರೆಯಾಗುತ್ತಿರುವುದು ವಿಷಾದನೀಯ.

ಇಂದು ಎಲ್ಲವೂ ಸಂಕೀರ್ಣವಾಗುತ್ತಿದೆ. ಇಂತಲ್ಲಿ ಸಿನಿಮಾ ಲೋಕವೂ ಹೊರತಾಗಿಲ್ಲ. ಇಲ್ಲಿಗೂ ಈ ಆಧುನಿಕ ಜಗತ್ತಿನ, ಸಮಾಜದ, ಜನರ ವಿಚಿತ್ರ ನಂಬಿಕೆಗಳೆಲ್ಲವೂ ವೇಗವಾಗಿಯೇ ಕಾಲಿಟ್ಟಿವೆ. ಸಿನಿಮಾ ಒಂದು ಯಾಂತ್ರಿಕವಾದ ಉದ್ಯಮವಾಗಿಬಿಟ್ಟಿದೆ. ಯಾವುದೇ ಪೂರ್ವ ಸಿದ್ಧಾಂತ, ಪೂರ್ವ ತಯಾರಿ, ಕಲೆಯ ಬದ್ಧತೆ, ಒಂದಿಷ್ಟು ಸಾಂಸ್ಕೃತಿಕ ಅರಿವುಗಳೂ ಇಲ್ಲದವರು ಸಿನಿಮಾಲೋಕಕ್ಕೆ ಕಾಲಿಡುತ್ತಿದ್ದಾರೆ. ನಿರ್ಮಾಪಕ, ನಿರ್ದೇಶಕ ಮತ್ತಿತರ ತಾಂತ್ರಿಕ ವರ್ಗಗಳಲ್ಲಿ ಸೂಕ್ಷ್ಮತೆಗಳು ಕಡಿಮೆಯಾಗಿವೆ. ಸಹನೆಯ, ತುಂಬಾ ಕುಶಲತೆಯ, ಮೌಲ್ಯಪರ, ಸಾಮಾಜಿಕ ಕಳಕಳಿಯ ರೂಪವೂ ರೂಪಕವೂ ಆಗಬೇಕಿದ್ದ ಸಿನಿಮಾ ರಾತ್ರೋರಾತ್ರಿ ಸಿದ್ಧವಾಗುವ ಒಂದು ಪ್ರಯೋಗವಾಗುತ್ತಿದೆ. ಸಹಜವಾಗಿಯೇ ಸಾಚಾತನಗಳು ಕಡಿಮೆಯಾಗಿವೆ.

ಕತೆ, ಚಿತ್ರಕತೆ, ಸಂಭಾಷಣೆ, ಹಾಡುಗಳು ಎಂದೆಲ್ಲಾ ಒಂದು ಭಾಷಿಕವಾದ ವಿಶಿಷ್ಟ ಪ್ರಯತ್ನವಾಗಬೇಕಿದ್ದ ಸಿನಿಮಾ ತಯಾರಿಕೆ ಈಗ ಎಲ್ಲಿಂದಲೋ ಹೇಗೋ ಎಷ್ಟೋ ಎಂತದ್ದೋ ಎನ್ನುವಂತೆ ಅಲ್ಲಿಂದಿಲ್ಲಿಗೆ ಕಿತ್ತು-ಮೆತ್ತುವ ಅಸಹನೀಯವಾದ ಕಾರ್ಯವಾಗಿಬಿಟ್ಟಿದೆ. 'ರಿಮೇಕ್'ಗಳು ಸಿನಿಮಾಗಳಿಗೆ ಒಂದು ಆದರ್ಶವೇ ಆದಂತಿದೆ. ಭಾಷೆಯೇ ಗೊತ್ತಿಲ್ಲದವರು ನಿರ್ದೇಶಕ, ನಿರ್ಮಾಪಕರಾಗುತ್ತಾರೆ. ಇನ್ನೂ ವಿಚಿತ್ರವೆಂದರೆ ಅವರಲ್ಲಿ ಕೆಲವರು ಸಂಭಾಷಣೆಯನ್ನು ಬರೆಯುತ್ತಾರೆ. ಕೆಲವು ನಟರು ತಮ್ಮ ಪಾತ್ರಗಳಿಗೆ ತಾವೇ ಧ್ವನಿದಾನ ಮಾಡಲಾಗದ ವಿಪರ್ಯಾಸಕ್ಕೂ ಕಾರಣರಾಗಿದ್ದಾರೆ.

ಕಲೆಯೆನ್ನುವುದು ಒಂದು ನಾಡಿನ, ನುಡಿಯ ಪರಿಸರದ ಸಂಸ್ಕೃತಿಯ ರಾಯಭಾರಿಯಾಗಿ ಕೆಲಸ ನಿರ್ವಹಿಸುತ್ತದೆ. ಇಂತಲ್ಲಿ ಸಿನಿಮಾ ಸಿಂಹಪಾಲು ಪಡೆದಿದೆ. ಆರಂಭದಿಂದ ಈಚಿನ ದಿನಗಳವರೆಗೆ ಇದು ಕನ್ನಡದ ಸಂದರ್ಭದಲ್ಲಿ ಸಾರ್ಥಕವೆನ್ನುವಂತೆ ಕಾರ್ಯನಿರ್ವಹಿಸಿದೆ. ಕರ್ನಾಟಕದ ನೆಲ, ಜಲ, ಆಚರಣೆ, ನಂಬಿಕೆ, ಮೌಲ್ಯ, ಸಾಹಿತ್ಯ, ಸಂಸ್ಕೃತಿಗಳ ಬಗೆಗೆ ವಿಶೇಷವಾದ ಕಾಳಜಿಗಳನ್ನಿಟ್ಟುಕೊಂಡೇ ನಮ್ಮ ಸಿನಿಮಾ ಮಂದಿ ಸಾಚಾತನದಿಂದ ದುಡಿದಿದ್ದಾರೆ. ಇಂದು ಅಂತಹ ಪ್ರಯತ್ನ ತೀರಾ ಎನ್ನುವಷ್ಟು ಮಿತಿಗೆ ಒಳಗಾಗಿದೆ. ಪ್ರೇಕ್ಷಕರನ್ನು ಆಧುನಿಕ ಸಿನಿಮಾಲೋಕ ದಿಕ್ಕುತಪ್ಪಿಸಿದೆ. ಒಂದು ಸಿನಿಮಾದ ನಟರು, ಸಂಭಾಷಣೆ, ಹಾಡುಗಳು, ಸಿನಿಮಾ ಶೀರ್ಷಿಕೆಗಳು ಎಲ್ಲವೂ ಈ ನೆಲದ ಬಹುಜನರಿಗೆ ಆದರ್ಶವಾಗಿ, ಮಾದರಿಯಾಗಿ ಇದ್ದ ಕಾಲ ನಮ್ಮಲ್ಲಿ ನಿನ್ನೆ-ಮೊನ್ನೆಯವರೆಗೆ ಇತ್ತು ಅವೆಷ್ಟೋ ನಾಡು-ನುಡಿ ಕುರಿತ ಜಾಗೃತಿಗೂ ಅಪಾರ ಕಾಣಿಕೆಯನ್ನವು ನೀಡಿದ್ದವು. ಇಂದ‌ು ಏನಾಗಿದೆ?.

ಯಾವುದರಲ್ಲೂ ಆಶಾವಾದವಿಲ್ಲ. ಮಾದರಿಗಳ ರೂಪವಂತೂ ಮತ್ತೂ ದೂರವೇ ಉಳಿದುಹೋಗಿವೆ. ಸಿನಿಮಾ ಶೀರ್ಷಿಕೆಗಳು, ಹಾಡುಗಳು ದಿಗಿಲುಹುಟ್ಟಿಸುವಂತಿವೆ. ಸಾಂಸ್ಕೃತಿಕ ಅಧಃಪತನದ ಹರಿಕಾರರಾಗಿ ನಮ್ಮ ಸಿನಿಮಾಗಳು ಕಾಣತೊಡಗಿವೆ. ಖಂಡಿತವಾಗಿಯೂ ಇದು ನಮ್ಮೆದುರಿಗಿರುವ ದೊಡ್ಡ ಸವಾಲು ಎನ್ನುವುದು ವಿಪರ್ಯಾಸ, ಆದರೆ ಸತ್ಯ....

ಮಾತುಗಳೇ ಸಿನಿಮಾ ಹಾಡುಗಳಾಗುವ ವಿಚಿತ್ರ, ಅನ್ಯಭಾಷೆಗಳೇ ದಟ್ಟವಾಗಿ ಕನ್ನಡ ಹಾಡು, ಸಂಭಾಷಣೆಗಳನ್ನು ಆಕ್ರಮಿಸಿಕೊಂಡ ಅಪಾಯ, ಮತ್ತೆ ಮತ್ತೆ ರಿಮೇಕ್‌ಗಳ ಹಾವಳಿ, ಕನ್ನಡ ಭಾಷೆಯ, ಸೊಗಡಿನ ಗಂಧ-ಗಾಳಿ ಇಲ್ಲದ ಜನರು, ನಿರ್ಮಾಪಕ, ನಿರ್ದೇಶಕ, ನಟರಾಗುವ ದುರಂತಗಳೆಲ್ಲವೂ ಕನ್ನಡ ಸಿನಿಮಾಲೋಕದ ಜೀರ್ಣಾವಸ್ಥೆಯ ಸ್ಥಿತಿಯನ್ನು ಹೇಳುತ್ತಿರಬಹುದೆ ಎನಿಸುತ್ತಿದೆ. ಒಂದು ಪ್ರಬಲವೂ ಜನಪ್ರಿಯವೂ ಆದ ಮಾಧ್ಯಮವೊಂದರ ಅಧಃಪತನ, ಒಂದು ಉತ್ತಮ ಭಾಷೆಯ ಶಿಥಿಲಕ್ಕೂ ಕಾರಣವಾಗುವುದು ನಿರೀಕ್ಷಿತವೇ ಹೌದು. ಇಲ್ಲಿ ಜಾಗೃತಿ ಎನ್ನುವುದು ಅತ್ಯವಶ್ಯಕವಾದ ಸಂಗತಿ.

## ಭಾಷಾಚಳುವಳಿಗಳು, ಹೋರಾಟಗಳು

ಒಂದು ವ್ಯವಸ್ಥೆಯ ಅವಿಭಾಜ್ಯ ಅಂಗಗಳೇ ಆಗಿರುವ ಚಳುವಳಿಗಳು ಅನ್ಯಾಯದ ವಿರುದ್ಧದ ಧ್ವನಿಗಳು. ಕ್ರಿಯಾಶೀಲವಾದ ಸಮಾಜ, ಸಮುದಾಯಗಳು ಇದ್ದಲೆಲ್ಲಾ ಇವು ಅನಿವಾರ್ಯವೆಂಬಂತೆ ಕಾಣಿಸಿಕೊಳ್ಳುತ್ತವೆ. ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಕಾಲದಿಂದಲೂ ಈ ಚಳುವಳಿಗಳು ವಿಶಿಷ್ಟವೆನ್ನುವಂತೆಯೇ ಕಾಣಸಿಗುತ್ತವೆ. ಹೀಗೊಂದು ಭಾಷೆ ಮತ್ತು ನಾಡಿನ ಸಂದರ್ಭದಲ್ಲಿ ಅಳಿವು-ಉಳಿವಿನ ರೂಪದ ಯಾವುದೇ ಹೋರಾಟಗಳಿಗಾದರೂ ಒಂದು ಮಹತ್ವವಿದ್ದೇ ಇರುತ್ತದೆ. ಇಂತಲ್ಲಿ ಚಳುವಳಿಗಳಿಗೆ ಸಹಜವಾಗಿಯೇ ಒಂದು ತಾತ್ವಿಕವಾದ, ಸೈದ್ಧಾಂತಿಕವಾದ ಚೌಕಟ್ಟು ಒದಗುವುದುಂಟು. ಕರ್ನಾಟಕದಲ್ಲಿ ಇಂತಹ ಚಳುವಳಿಗಳಿಗೊಂದು ಪರಂಪರೆಯೇ ಇರುವಂತಿದೆ. ಭಾಷೆ, ಗಡಿ, ಜಲ ಇತ್ಯಾದಿ ಸಂದರ್ಭಗಳಲ್ಲೆಲ್ಲಾ ಅನ್ಯಾಯವೆನಿಸಿದಾಗ ದೊಡ್ಡ ಹೋರಾಟಗಳು ನಡೆದಿರುವುದಕ್ಕೆ ಇತಿಹಾಸವಿದೆ. ಅದು ಆಯಾ ಸಂಗತಿಯ ತೀವ್ರತೆಯನ್ನು ಅನುಸರಿಸಿದಂತೆಯೂ ರೂಪುಗೊಂಡಿದೆ. 'ಕರ್ನಾಟಕದಲ್ಲಿ ಕನ್ನಡವೇ ಕಡ್ಡಾಯ' ಎಂಬ ವಿಚಾರಕ್ಕೆ 'ಗೋಕಾಕ್ ಚಳುವಳಿ' ಅತ್ಯಂತ ವ್ಯಾಪಕವಾಗಿ, ಪ್ರಭಾವಶಾಲಿಯಾಗಿ ಸಂಚಲನ ಉಂಟುಮಾಡಿದ್ದನ್ನು ನಾವು ಮರೆಯುವಂತಿಲ್ಲ.

ಇಂದಿಗೆ ಅನೇಕ ಸಂಘಟನೆಗಳು ಹತ್ತು-ಹಲವು ಹೆಸರಿನೊಂದಿಗೆ ನಾಡು-ನುಡಿಯ ವಿಚಾರಕ್ಕೆ ಹೋರಾಟದ ವೇದಿಕೆಗಳಾಗಿ ಅಸ್ತಿತ್ವ ಕಂಡುಕೊಂಡಿವೆ. ರಾಜ್ಯಮಟ್ಟ, ಪ್ರಾದೇಶಿಕ ಮಟ್ಟದಲ್ಲೆಲ್ಲಾ ಅವುಗಳಿಗೆ ಭಿನ್ನವಾದ ಆಯಾಮಗಳಿವೆ. ಇವುಗಳಲ್ಲಿ ಎಷ್ಟರಮಟ್ಟಿನ ಬದ್ಧತೆಗಳಿವೆ ಎನ್ನುವುದು ವಿಭಿನ್ನವಾದ ಚರ್ಚಾರ್ಹ ಸಂಗತಿಗಳು. ಆದರೆ ಅಗತ್ಯಬಿದ್ದಲ್ಲಿ ಅವು ಕ್ರಿಯಾಶೀಲವಾಗುವುದು ಗಮನಾರ್ಹ.

ಭಾಷಾಮಾಧ್ಯಮ, ರಿಮೇಕ್, ಡಬ್ಬಿಂಗ್, ಕನ್ನಡ ನಾಮಫಲಕ, ನದಿನೀರಿನ ವಿಚಾರ, ಗಡಿತಂಟೆ ಇತ್ಯಾದಿ ವಿಚಾರಗಳಿಗೆ ಸಂಬಂಧಿ ಸಿದಂತೆಲ್ಲಾ ಸಂಘಟನೆಗಳು, ಹೋರಾಟಗಳನ್ನು ರೂಪಿಸುವುದು ಆಶಾದಾಯಕವೇ ಹೌದು. ಹೋರಾಟದ ಅವಶ್ಯಕತೆಯೇ ಒಂದು ಸಮಸ್ಯೆಯ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ. ಒಟ್ಟಾರೆಯಾಗಿ ಎಲ್ಲವೂ ಸರಿಯಿಲ್ಲ ಎನ್ನಬಹುದು.

## ಕಂಪ್ಯೂಟರ್ (ಗಣಕಯಂತ್ರ) ಯುಗ

ಆಧುನಿಕತೆಯ ಆವಿಷ್ಕಾರದ ಉತ್ಕರ್ಷವೆಂದು, ಮಾಹಿತಿ ತಂತ್ರಜ್ಞಾನದ ಅತ್ಯುತ್ತಮ ಸಾಧನೆ ಎನ್ನುವ ಕಂಪ್ಯೂಟರ್‌ಗೆ ಅಪಾರ ಆಯಾಮಗಳಿವೆ. ಅವುಗಳಲ್ಲಿ ಕೈ ಬೆರಳ ತುದಿಗೆ ಲಭ್ಯವಾಗುವ ಅಂತರ್ಜಾಲ ತಾಣಗಳು ಈ ಹೊತ್ತಿನ ಜ್ಞಾನದ ಉತ್ಕರ್ಷಗಳು. ಆದರೆ ಅವು ಆಧುನಿಕ ಯುಗದ ಮುಖ್ಯ ತಲ್ಲಣಗಳೂ ಆಗಿರುವುದು ಗಮನಾರ್ಹ. ಇಡೀ ಜಗತ್ತಿನ ಯಾವ ವಿಚಾರಗಳನ್ನಾದರೂ ಕ್ಷಣಾರ್ಧದಲ್ಲಿ ತಿಳಿದು ಕೊಳ್ಳುವ ಮಾಹಿತಿಯ ಈ ಜಾಲತಾಣಗಳು ಇಂದಿನ ಜ್ಞಾನದ, ಅರಿವಿನ ಮುಖ್ಯ ಭಾಗಗಳೇ ಆಗಿಬಿಟ್ಟಿವೆ. ವಿದ್ಯಾವಂತರ ವಿಶೇಷವಾಗಿ ಯುವಜನಾಂಗದ ಹವ್ಯಾಸವೇ ಆದಂತಿರುವ ಈ ಮಾಧ್ಯಮ ಜ್ಞಾನ-ಮಾಹಿತಿಯೊಂದಿಗೆ ಅಷ್ಟೇ ಅಪಾಯಗಳನ್ನು ಉಂಟುಮಾಡುತ್ತಿವೆ. ಇಲ್ಲಿನ ವಿಚಾರಗಳು

ಎಲ್ಲಾ ದೇಶೀ ನಂಬಿಕೆ, ಸಂಸ್ಕೃತಿ, ಜನಜೀವನ ಮುಖ್ಯವಾಗಿ ಪ್ರಾದೇಶಿಕ ಭಾಷೆಗಳ ಮೇಲೆ ಗಂಭೀರವಾದ ಪ್ರಭಾವಬೀರುತ್ತಿವೆ. ನೈತಿಕ-ಅನೈತಿಕ, ಶ್ಲೀಲ-ಅಶ್ಲೀಲ, ಸಾಮಾಜಿಕ-ಅಸಾಮಾಜಿಕ ಎನ್ನುವ ಸಂಗತಿಗಳ ನಡುವೆ ಸಂಘರ್ಷವುಂಟಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಹಜವಾಗಿಯೇ ದೇಶೀಯ ಭಾಷೆಗಳ ಮೇಲೆ ಕಂಪ್ಯೂಟರ್‌ನ ಅಧಿಕೃತ ಭಾಷೆ ಎಂದೇ ಬಿಂಬಿಸಲ್ಪಡುವ ಇಂಗ್ಲಿಷ್ ಅಪಾಯಕಾರಿ ಪ್ರಭಾವವನ್ನೇ ಬೀರುತ್ತಿದೆ. ಯುವಜನತೆ ಸಹಜತೆಗಳಿಗೆ ವಿಮುಖವಾಗುತ್ತಿದ್ದಾರೆ. ಖಂಡಿತವಾಗಿ ಈ ಕಂಪ್ಯೂಟರ್ ಎನ್ನುವುದು ಒಂದು ಮಾಯಾವಿಯಾಗಿ ಆಧುನಿಕರನ್ನು ವ್ಯಾಮೋಹವಾಗಿಯೂ ಆಕ್ರಮಿಸಿಕೊಳ್ಳುತ್ತಾ ಒಂದು ಜೀವಂತ ಭಾಷೆಗೆ ಗಂಭೀರವಾದ ಸವಾಲಾಗಿದೆ. ತಂತ್ರಜ್ಞರು, ಭಾಷಾವಿಜ್ಞಾನಿಗಳು, ಚಿಂತಕರು, ಹೋರಾಟಗಾರರು ಮತ್ತು ಮುಖ್ಯವಾಗಿ ಸರ್ಕಾರ ಪರಸ್ಪರ ಪೂರಕವಾಗಿ ಈ ಬಗೆಯ ಸವಾಲಿಗೆ ಉತ್ತರ ನೀಡಬೇಕಾಗಿದೆ.

ಒಟ್ಟಾರೆಯಾಗಿ ಕನ್ನಡಭಾಷೆ ಇಂದೆಂದಿಗಿಂತಲೂ ಇಂದು ತನ್ನ ಒಳಗಿನಿಂದ, ಹೊರಗಿನಿಂದ ಎಲ್ಲಾ ಬಗೆಯಲ್ಲಿಯೂ ಸವಾಲುಗಳನ್ನು ಎದುರಿಸುತ್ತಿದೆಯೆನ್ನುವುದು ಸೂರ್ಯಸತ್ಯ. ಯಾವುದೇ ಭಾವುಕವಾದ ವಾದಗಳಿಂದ, ನಂಬಿಕೆಗಳಿಂದ ನಿರಾಳವಾಗುವಂತಿಲ್ಲ. ದಿಢೀರನೆ ನಾಳೆಯೆ ನಾಶವಾಗಿಬಿಡಬಹುದು ಎನ್ನುವ ಅಪಾಯಗಳು ಸದ್ಯಕ್ಕಿಲ್ಲದಿರಬಹುದು ಆದರೆ ಹಾಗೆನ್ನುವ ನಮ್ಮ ನಿರ್ಲಿಪ್ತತೆಯೇ ನಾಳೆಯ ಆತಂಕಗಳಿಗೂ ಕಾರಣವಾಗಿಬಿಡಬಹುದು.

ಜಾಗತೀಕರಣ 'ವಿಶ್ವಗ್ರಾಮ'ದ ಕನಸನ್ನು ಹುಟ್ಟುಹಾಕಿರಬಹುದು ಆದರೆ ಅದು ಶುದ್ಧಾಂಗವಾಗಿ ಒಂದು ವ್ಯಾಪಾರಿ ಮನಸ್ಸಿನ ಆಕರ್ಷಕ ಜಾಹಿರಾತಿನ ರೂಪದ ಮಾತು. ಅದು ಮುಂದೆ ಅಭಿವೃದ್ಧಿಶೀಲ, ಅಭಿವೃದ್ಧಿಪರ ಜಗತ್ತಿನ ಎಲ್ಲ ನೆಲೆಗಳನ್ನು ಶಿಥಿಲಗೊಳಿಸಬಹುದು. ಹಾಗಾಗಿ ಒಂದು ಗಂಭೀರವಾದ ಎಚ್ಚರವಂತೂ ತೀರಾ ತುರ್ತು.

ಒಂದು ನಾಡು-ನುಡಿಯ ಬೆಳವಣಿಗೆಯೆಂದರದು ಸಮುದಾಯ ದ ಅಭಿವೃದ್ಧಿ, ತನ್ಮೂಲಕ ವ್ಯಕ್ತಿ ಸಾರ್ಥಕತೆಯ ರೂಪ. ಭಾಷೆ ಎನ್ನುವುದು ಮಾತು ನೀಡಿ ಮಾನವ'ನಾಗಿಸಿದರೆ, ನಾಡು ಎನ್ನುವುದು ನೆಲೆ ನೀಡಿ ನಾಗರೀಕನನ್ನಾಗಿಸಿದೆ. ನಾವು ಇವೆರಡಕ್ಕೂ ಋಣತೀರಿಸಿ ಸಂಸ್ಕಾರ ವಂತರಾಗಿ ಸಂಸ್ಕೃತಿ ಉಳಿಸಿ ಬೆಳೆಸಬೇಕಿದೆ. ಇದು ನಮ್ಮ ಋಣದ ನೆಪವೂ ಹೌದು.

ಈ ಮೇಲೆ ಚರ್ಚಿಸಿದ ಸಂಗತಿಗಳು ಸಮಗ್ರ ವಿಚಾರವಲ್ಲ. ಸೂಕ್ಷ್ಮವಾದ ಪ್ರಾತಿನಿಧಿಕ ನೆಲೆಗಳಿಲ್ಲಿವೆ. ಇದಕ್ಕೆ ಪೂರಕವಾದ ಅವೆಷ್ಟೋ ಸಂಗತಿಗಳು ನಮ್ಮೊಂದಿಗಿವೆ, ಎದುರಿಗಿವೆ, ಕಣ್ಮರೆಯಲ್ಲೂ ಇವೆ. ವಿನಯವಂತಿಕೆಯಿಂದ, ಹೃದಯವಂತಿಕೆಯಿಂದ, ಅರಿವಿನಿಂದ ಹಾಗೆಯೇ ಎಚ್ಚರದಿಂದಲೂ ನಿಭಾಯಿಸಬೇಕಿದೆ. ಸವಾಲುಗಳನ್ನು ಎದುರಿಸಲೇಬೇಕಿದೆ. ಏಕೆಂದರೆ ತಾಯಿಯನ್ನು, ತಾಯಿಭಾಷೆಯನ್ನು ಕಾಪಾಡಲಾರದವ, ಪ್ರೀತಿಸಲಾರದವ ಏನನ್ನೂ ಮಾಡಲಾರ, ಮನುಷ್ಯನಾಗುವ ಕನಿಷ್ಟ ಅರ್ಹತೆಯನ್ನೂ ಉಳಿಸಿಕೊಳ್ಳಲಾರ.